31. ಕೃತಜ್ಞತೆಗಳು

ನಿಮ್ಮ ನಿರ್ದೇಶಕರು ಕೇಂದ್ರ ಸರ್ಕಾರ, (ಗಣಿ ಇಲಾಖೆ, ಪರಿಸರ ಇಲಾಖೆ ಮತ್ತು ಕಾರ್ಮಿಕ ಇಲಾಖೆಗಳೂ ಸೇರಿದಂತೆ), ಕರ್ನಾಟಕ ಸರ್ಕಾರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಗಣಿ ಸುರಕ್ಷಾ ಮಹಾ ನಿರ್ದೇಶಕರು, ಭಾರತ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್, ಶಾಸನಬದ್ಧ ಲೆಕ್ಕಪರಿಶೋಧಕರು, ಆಂತರಿಕ ಲೆಕ್ಕಪರಿಶೋಧಕರು, ಕಾನೂನು ಸಲಹೆಗಾರರು, ಸಮಾಲೋಚಕರು, ಬ್ಯಾಂಕುಗಳು, ವಿಮಾ ಕಂಪನಿಗಳು, ಷೇರುದಾರರು, ಗ್ರಾಹಕರು, ಸರಬರಾಜುದಾರರು ಮತ್ತು ಇತರರಿಗೆ ಅವರು ನೀಡಿದ ನಿರಂತರ ಸಾಮಯಿಕ ಪರಾಮರ್ಶೆ, ಮಾರ್ಗದರ್ಶನ, ಸಹಕಾರ ಮತ್ತು ಬೆಂಬಲಕ್ಕಾಗಿ ಅವರನ್ನು ವಂದಿಸುತ್ತಾರೆ. ಕಂಪನಿಯ ಎಲ್ಲಾ ನೌಕರರು ಮತ್ತು ಅಧಿಕಾರಿಗಳು ನೀಡಿದ ಸಹಕಾರಕ್ಕಾಗಿ ಅವರನ್ನೂ ವಂದಿಸುತ್ತಾರೆ.

ಆಡಳಿತ ಮಂಡಳಿಯ ಪರವಾಗಿ
ಸಹಿ/–
(ಜೆ ಟಿ ಪಾಟೀಲ್)
ಅಧ್ಯಕ್ಷರು
ಡಿಐಎನ್ : 00535538

ಬೆಂಗಳೂರು,
ತಾ : 25–11–2025

ಪಿ.ಕೆ. ರುಂಗ್ಟ & ಕಂ.
ಛಾರ್ಟರ್ಡ್ ಅಕೌಂಟೆಂಟ್ಸ್

ಸಂ. 598/599, 1ನೇ ಮುಖ್ಯರಸ್ತೆ, 15ನೇ ಅಡ್ಡರಸ್ತೆ, ಹೆಚ್ಎಸ್ಆರ್ ಲೇಔಟ್, ಸೆಕ್ಟರ್–6, ಬೆಂಗಳೂರು – 560102
ದೂರವಾಣಿ : 080–25723074
ಇಮೇಲ್ : capkrungta@gmail.com
ಕಂಪನಿ ರಿಜಿಸ್ಟರ್ ಸಂಖ್ಯೆ : 003498S

ಸ್ವತಂತ್ರ ಲೆಕ್ಕ ಪರಿಶೋಧಕರ ಪರಿಷ್ಕೃತ ವರದಿ
ದಿ ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ ಬೆಂಗಳೂರು ಸದಸ್ಯರಿಗೆ
ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳ ಮೇಲಿನ ವರದಿ

ಷರತ್ತುಬದ್ಧ ಅಭಿಪ್ರಾಯ

ಇಂಡ್ ಎಎಸ್ ಆಧಾರಿತ ಏಕಸ್ಥಾಯಿ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳ ಮೇಲಿನ ವರದಿ

ದಿ ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತದ (ದಿ ಕಂಪನಿ) 31ನೇ ಮಾರ್ಚ್ 2025ರಂದಿನ ಕಂಪನಿ ಕಾಯಿದೆ 2013ರ ಅವಶ್ಯಕತೆಗಳಿಗನುಗುಣವಾಗಿ ತಯಾರಿಸಲಾದ ಸಂಲಗ್ನಿತ ಇಂಡ್–ಎಎಸ್ ಆಧಾರಿತ ಸ್ಥಿತಿ ವಿವರಣಾ ಪಟ್ಟಿ, ವಿಸ್ತೃತ ಆದಾಯವನ್ನೂ ಒಳಗೊಂಡಿರುವ ಲಾಭ ಮತ್ತು ನಷ್ಟದ ತಪ್ಸೀಲು, ಹಣ ಹರಿವಿನ ತಃಖ್ತೆ ಮತ್ತು ಆ ವರ್ಷಕ್ಕೆ ಅಂತ್ಯಗೊಂಡಂತೆ ಈಕ್ವಿಟಿಯಲ್ಲಿನ ಬದಲಾವಣೆಗಳ ಪಟ್ಟಿ ಮತ್ತು ಲೆಕ್ಕಾಚಾರಗಳ ಪ್ರಮುಖ ನೀತಿಗಳು ಮತ್ತು ವಿವರಣಾದಾಯಕ ಮಾಹಿತಿಗಳನ್ನು ನಾವು ಪರಿಶೋಧಿಸಿದ್ದೇವೆ. (ಇನ್ನು ಮುಂದೆ ಏಕಸ್ಥಾಯಿ ಇಂಡ್–ಎಎಸ್ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳೆಂದು ಉಲ್ಲೇಖಿಸಲಾಗುವುದು)

ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ನೀಡಿರುವ ಮಾಹಿತಿಗಳು ಮತ್ತು ವಿವರಣೆಗಳಿಗನುಸಾರವಾಗಿ ಮೇಲ್ಕಂಡ ಇಂಡ್–ಎಎಸ್ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳು, ಕಂಪನಿ ಕಾಯಿದೆ 2013ರಡಿಯಲ್ಲಿ (ಇನ್ನು ಮುಂದೆ ಕಾನೂನು ಎಂದು ಉಲ್ಲೇಖಿಸಲಾಗುವುದು) ಅವಶ್ಯಕವಿರುವ ರೀತಿಯಲ್ಲಿ ಮತ್ತು ಕಾನೂನಿನ ಸೆಕ್ಷನ್ 133ರಡಿಯಲ್ಲಿ ಒಪ್ಪಿತಗೊಂಡಿರುವ ಲೆಕ್ಕಾಚಾರ ಮಾನದಂಡಗಳಿಗನುಗುಣವಾಗಿ 31ನೇ ಮಾರ್ಚ್ 25ರಂದಿನ ಇಂಡ್–ಎಎಸ್ ರೀತ್ಯದಲ್ಲಿ ಕಂಪನಿಯ ಸ್ಥಿತಿಯ ಬಗೆಗೆ, ಅದರ ಲಾಭ, ವಿಸ್ತೃತ ಆದಾಯ, ಈಕ್ವಿಟಿಯಲ್ಲಿನ ಬದಲಾವಣೆಗಳು ಮತ್ತು ಹಣ ಹರಿವಿನ ಬಗೆಗೆ ನೈಜವಾದ ಮತ್ತು ನ್ಯಾಯಬದ್ಧವಾದ ನೋಟವನ್ನು ನೀಡುತ್ತದೆ.

ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರು ಅಭಿಪ್ರಾಯಗಳ ಬೆಳಕಿನಲ್ಲಿ, ನಮ್ಮ 02ನೇ ಸೆಪ್ಟೆಂಬರ್ 2025ರ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳ ಮೇಲಿನ ಸ್ವತಂತ್ರ ಲೆಕ್ಕ ಪರಿಶೋಧಕರ ವರದಿಯನ್ನು ಈ ನಮ್ಮ ವರದಿಯು ಉತ್ಕ್ರಮಿಸುತ್ತದೆ.

ಷರತ್ತುಬದ್ಧ ಅಭಿಪ್ರಾಯದ ಆಧಾರ :

1. (ಎ) 2018–19ನೇ ಸಾಲಿನಲ್ಲಿ ಕಂಪನಿಯು 80.18 ಲಕ್ಷ ರೂ.ಗಳನ್ನು ಆಂತರಿಕ ಚಿನ್ನ ಶುದ್ಧೀಕರಣ ಸ್ಥಾವರ ಸ್ಥಾಪನೆಗಾಗಿ ವ್ಯಯಿಸಿದೆ. ಈ ಸ್ಥಾವರವನ್ನು ತಾಂತ್ರಿಕ ಕಾರಣಗಳಿಂದಾಗಿ ನಿಯುಕ್ತಿಗೊಳಿಸಲಾಗಿಲ್ಲ. ಈ ಸ್ಥಾವರವನ್ನು ಬಂಡವಾಳೀಕರಿಸಿಯೂ ಇಲ್ಲ ಮತ್ತು ಅದಕ್ಕೆ ಸವಕಳಿಯನ್ನೂ ಹಾಕದೆ, ಸ್ಥಿತಿ ವಿವರಣಾ ಪಟ್ಟಿಯ ದಿನಾಂಕದಂದು ಮುಂದುವರೆಯುತ್ತಿರುವ ಬಂಡವಾಳ ಕಾಮಗಾರಿ ಎಂದು ಪರಿಗಣಿಸಲಾಗಿದೆ. ಇದರಿಂದಾಗಿ 80.18 ಲಕ್ಷ ರೂ.ಗಳಷ್ಟು ಲಾಭವನ್ನು ಹೆಚ್ಚಾಗಿ ತೋರಿಸಲಾಗಿದೆ.

(ಬಿ) ತಮಣಕಲ್‌ನಿಂದ ಹಟ್ಟಿಗೆ ಕೃಷ್ಣಾ ನದಿಯ ನೀರು ಸರಬರಾಜು ಮಾಡುವ ಬಗೆಗಿನ ವಿಸ್ತೃತ ಯೋಜನಾ ವರದಿಯ ತಯಾರಿಕೆಗಾಗಿ, ಕಂಪನಿಯು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ 19.07 ಲಕ್ಷ ರೂ.ಗಳನ್ನು ಪಾವತಿಸಿದೆ. ಈ ಯೋಜನೆಯನ್ನು ಕೈಬಿಡಲಾಗಿದ್ದು ಒಂದು ಹೊಸ ವಿಸ್ತೃತ ಯೋಜನಾ ವರದಿಯನ್ನು ನ್ಯಾಷನಲ್ ಪ್ರಾಜೆಕ್ಟ್ಸ್ ಕನ್‌ಸ್ಟ್ರಕ್ಷನ್ ಕಾರ್ಪೋರೇಷನ್‌ರವರು ತಯಾರಿಸಿದ್ದಾರೆ. ಹಾಗಾಗಿ ಮುಂದುವರೆಯುತ್ತಿರುವ ಬಂಡವಾಳ ಕಾಮಗಾರಿ ಎಂದು ಪರಿಗಣಿಸಲಾಗಿರುವ

ಈ ವೆಚ್ಚವು ಇನ್ನು ಅಸಿಂಧುವಾಗಿದೆ ಮತ್ತು ಇದನ್ನು ತೊಡೆದು ಹಾಕಬೇಕಾಗಿದೆ ಅಥವಾ ಲಾಭ ಮತ್ತು ನಷ್ಟದ ಲೆಕ್ಕದಲ್ಲಿ ಅದಕ್ಕೆ ಏರ್ಪಾಡು ಮಾಡಬೇಕಿದೆ. ಇದರಿಂದಾಗಿ 19.07 ಲಕ್ಷ ರೂ.ಗಳಷ್ಟು ಲಾಭವನ್ನು ಅಧಿಕವಾಗಿ ತೋರಿಸಲಾಗಿದೆ.

2. (ಎ) ಸುವರ್ಣ ಆರೋಗ್ಯ ಸುರಕ್ಷಾ ನ್ಯಾಸ(ಎಸ್ಎಎಸ್ಟಿ)ದಿಂದ ಸ್ವೀಕರಿಸಬೇಕಿರುವ 100.00 ಲಕ್ಷ ರೂ.ಗಳೆಡೆಗೆ ಕಂಪನಿಯು ಯಾವುದೇ ಲಿಖಿತ ಸ್ಥಿರೀಕರಣವನ್ನು ಪಡೆದಿಲ್ಲ ಮತ್ತು ಇದು ನವೆಂಬರ್ 2021ರಿಂದಲೂ ಬಾಕಿ ಇರುತ್ತದೆ. ಈ ಮೊತ್ತವು ಸ್ವೀಕೃತಿಗಾಗಿ 3 ವರ್ಷಗಳಿಗಿಂತ ಅಧಿಕವಾಗಿ ಬಾಕಿ ಇರುವುದರಿಂದ ಇದರ ಸ್ವೀಕೃತಿಯು ಸಂದೇಹಾತ್ಮಕವಾಗಿದ್ದು, ಇದರೆಡೆಗೆ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳಲ್ಲಿ ಅಗತ್ಯವಾದ ಏರ್ಪಾಡನ್ನು ಮಾಡಲಾಗಿಲ್ಲ.

(ಬಿ) ವಿವಿಧ ಇಲಾಖೆಗಳಿಗೆ ಹಂಚಿಕೆ ಮಾಡಿರುವ ವಸತಿಗಳ ಬಗೆಗಿನ ಬಾಡಿಗೆ, ವಿದ್ಯುತ್ ಮತ್ತು ಇತರೇ ಬಾಕಿಗಳಡೆಗೆ 120.54 ಲಕ್ಷ ರೂ.ಗಳನ್ನು ವಸೂಲು ಮಾಡಿರುವುದಿಲ್ಲ. ಈ ಮೊಬಲಗು ಹಲವು ವರ್ಷಗಳಿಂದ (3 ವರ್ಷಗಳಿಗೂ ಮೇಲ್ಪಟ್ಟು) ಬಾಕಿ ಇದ್ದು, ನಮ್ಮ ದೃಷ್ಟಿಯಲ್ಲಿ ಈ ಬಾಕಿಯ ವಸೂಲಾತಿಯು ಸಂದೇಹಾತ್ಮಕವಾಗಿದೆ. ಆದಾಗ್ಯೂ, ಕಂಪನಿಯ ಇಂತಹ ಸಂದೇಹಾತ್ಮಕ ಬಾಕಿಯೆಡೆಗೆ ಆರ್ಥಿಕ ಸ್ಥಿತಿ ಪಟ್ಟಿಗಳಲ್ಲಿ ಏರ್ಪಾಡನ್ನು ಮಾಡಿರುವುದಿಲ್ಲ. ತತ್ಪರಿಣಾಮವಾಗಿ ವರ್ಷದ ಆಸ್ತಿಗಳು ಮತ್ತು ಲಾಭವನ್ನು, ಈ ಮೊತ್ತದಷ್ಟು ಅಧಿಕವಾಗಿ ತೋರಿಸಲಾಗಿದೆ.

3. 31.03.2025ರಂದಿನ ಕಂಪನಿಯ ಬಂಡವಾಳ ಸಾಲಗಾರ ಬಗೆಗಿನ 1928.11 ಲಕ್ಷ ರೂ.ಗಳು (ಟಿಪ್ಪಣಿ ಸಂಖ್ಯೆ 21), ವ್ಯಾಪಾರಿ/ಭದ್ರತಾ ಠೇವಣಿಗಳೆಡೆಗಿನ 4197.52 ಲಕ್ಷ ರೂ.ಗಳು, ಮತ್ತು ವೆಚ್ಚಗಳೆಡೆಗಿನ ಸಾಲಗಾರರು 10,017.82 ಲಕ್ಷ ರೂ.ಗಳು, (ಟಿಪ್ಪಣಿ ಸಂಖ್ಯೆ–22), ವ್ಯಾಪಾರಿ ದಾಯಿತ್ವಗಳು 2125.76 ಲಕ್ಷ ರೂ.ಗಳ (ಟಿಪ್ಪಣಿ ಸಂಖ್ಯೆ–20) ಬಗೆಗಿನ ಶಿಲ್ಕು ದೃಢೀಕರಣವನ್ನು ಪಡೆದುಕೊಂಡಿರುವುದಿಲ್ಲ. ಮೇಲ್ಕಂಡವುಗಳ ಬಗೆಗಿನ ಪರಿಶೋಧನಾ ಸಾಕ್ಷ್ಯಗಳ ಕೊರತೆಯಿಂದಾಗಿ ಇಂಡ್–ಎಎಸ್ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳ ನಿಖರತೆ ಮತ್ತು ಅವುಗಳ ಮೇಲೆ ಇವು ಬೀರುವ ಪರಿಣಾಮವೇನಾದರು ಇದ್ದಲ್ಲಿ ನಾವು ಅವುಗಳ ಬಗೆಗೆ ಟೀಕೆ ಮಾಡಲು ಅಸಮರ್ಥರಾಗಿದ್ದೇವೆ. ಆಡಳಿತ ವರ್ಗವು ತಾನು ವಿವಿಧ ಪಕ್ಷಾಕಾರರುಗಳಿಂದ ದೃಢೀಕರಣ ಸ್ವೀಕರಿಸುವ ಪ್ರಕ್ರಿಯೆಯಲ್ಲಿ ತೊಡಗಿದೆ ಮತ್ತು ಸುಮಾರು ಶೇ. 20–25ರಷ್ಟು ವ್ಯಾಪಾರಿ ಬಾಕಿದಾರರಿಂದ ದೃಢೀಕರಣಗಳನ್ನು ಸ್ವೀಕರಿಸಲಾಗಿದೆ ಎಂದು ನಿವೇದಿಸಿದೆ.

4. ಕಂಪನಿಯು ಅನುಗ್ರಹ ಧನದ ಪಾವತಿಗಾಗಿ ಒಟ್ಟು 1763.10 ಲಕ್ಷ ರೂ.ಗಳ ಏರ್ಪಾಡನ್ನು ಟಿಪ್ಪಣಿ ಸಂಖ್ಯೆ–35(5) ಮಾಡಿದ್ದು, ಇದು 2022–23ನೇ ವರ್ಷಕ್ಕೆ 597.87 ಲಕ್ಷ ರೂ.ಗಳಾಗಿದ್ದು, 2023–34ನೇ ವರ್ಷಕ್ಕೆ 587.34 ಲಕ್ಷ ರೂ.ಗಳಾಗಿದ್ದು ಮತ್ತು 2024–25ನೇ ವರ್ಷಕ್ಕೆ 577.89 ಲಕ್ಷ ರೂ.ಗಳಾಗಿದ್ದು ಇದನ್ನು ಕರ್ನಾಟಕ ಸರ್ಕಾರದ ಅನುಮೋದನೆ ಬಾಕಿ ಇರುವಂತೆಯೇ ಲೆಕ್ಕ ಪುಸ್ತಕಗಳಲ್ಲಿ ಪರಿಗಣಿಸಲಾಗಿದೆ.

5. ಕಂಪನಿಯು, 339.09 ಲಕ್ಷ ರೂ.ಗಳ 8 ಸ್ಥಾಯಿ ಬಾಡಿಗೆಯನ್ನು ಕರ್ನಾಟಕ ಸರ್ಕಾರದ ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಪಾವತಿಸಿರುವುದಿಲ್ಲ. ಗಣಿಗಳು ಮತ್ತು ಖನಿಜಗಳು (ಅಭಿವೃದ್ಧಿ ಮತ್ತು ನಿಬಂಧನೆ) ಕಾನೂನು 1957 ಮತ್ತು ಖನಿಜ (ಸರ್ಕಾರಿ ಕಂಪನಿಯಿಂದ ಗಣಿಗಾರಿಕೆ) ನಿಯಮ 2015ರ ರೀತ್ಯ ಎಲ್ಲಾ ಗಣಿ ಗುತ್ತಿಗೆಗಳನ್ನು 50 ವರ್ಷಗಳಿಗೆ ನೀಡಲಾಗುವುದು ಮತ್ತು ಗಣಿ ಗುತ್ತಿಗೆದಾರರು ಸ್ಥಾಯಿ ಬಾಡಿಗೆ ಅಥವಾ ರಾಜಧನದಲ್ಲಿ ಯಾವುದು ಅಧಿಕವೋ ಅದನ್ನು ಪಾವತಿಸಬೇಕಿದೆ. ಆಚರಣೆಯಲ್ಲಿ ಇಲ್ಲದ ಗಣಿಗಳ ಸ್ಥಾಯಿ ಬಾಡಿಗೆಯನ್ನು ಕೇಂದ್ರ ಸರ್ಕಾರದ ತಾ. 02.09.2019ರ ರಾಜ್ಯ ಪತ್ರದಲ್ಲಿ ಸ್ಥಾಯಿ ಬಾಡಿಗೆಯನ್ನು ಪ್ರತಿ ಹೆಕ್ಟೇರಿಗೆ ವಾರ್ಷಿಕ ರೂ. 2000 ದಿಂದ 4000 ರೂ.ಗಳಿಗೆ ಪರಿಷ್ಕರಣೆ ಮಾಡಲಾಗಿದೆ. (5ನೇ ವರ್ಷದಿಂದ ಮುಂದಕ್ಕೆ)

ಯಾವುದೇ ಚಟುವಟಿಕೆಗಳಿಲ್ಲದ 6 ಗಣಿ ಗುತ್ತಿಗೆಗಳನ್ನು ಕಂಪನಿಯು ಹೊಂದಿದ್ದು ಸ್ಥಾಯಿ ಬಾಡಿಗೆಯನ್ನು ಪ್ರತಿ ಹೆಕ್ಟೇರಿಗೆ ವಾರ್ಷಿಕ 2000 ರೂ. ದರದಲ್ಲಿಯೇ 02.09.2019ರಿಂದ 31.03.2025ರವರೆಗೆ ಲೆಕ್ಕ ಹಾಕಲಾಗಿದೆ. ತತ್ಪರಿಣಾಮವಾಗಿ ಪರಿಷ್ಕೃತ ಸ್ಥಾಯಿ ಬಾಡಿಗೆಯನ್ನು

ಪಾವತಿ ಮಾಡಿಲ್ಲ ಅಥವಾ ಅದಕ್ಕಾಗಿ ಏರ್ಪಾಡನ್ನು ಲೆಕ್ಕಪುಸ್ತಕಗಳಲ್ಲಿ ಮಾಡಿರುವುದಿಲ್ಲ. ತತ್ಪರಿಣಾಮವಾಗಿ, ಪಾವತಿಸಿದ/ಪಾವತಿಸಬೇಕಾದ ಸ್ಥಾಯಿ ಬಾಡಿಗೆಯನ್ನು ಕಡಿಮೆ ತೋರಿಸಲಾಗಿದ್ದು ಇದರಿಂದಾಗಿ ಲಾಭವನ್ನು 339.09 ರೂ.ಗಳಷ್ಟು ಅಧಿಕವಾಗಿ ತೋರಿಸಲಾಗಿದೆ.

6. ಎ) ಹಿಂದಿನ ಆರ್ಥಿಕ ವರ್ಷ 2023–24ರಲ್ಲಿ ಕಂಪನಿಯು ಆದಾಯ ತೆರಿಗೆಗಾಗಿ 8600.00 ಲಕ್ಷ ರೂ.ಗಳನ್ನು ಅಂದಾಜು ಭಾದ್ಯತೆಯ ಆಧಾರದ ಮೇಲೆ ಏರ್ಪಾಡು ಮಾಡಿತ್ತು. ಆದಾಯ ತೆರಿಗೆ ಲೆಕ್ಕಪತ್ರಗಳ ಪರಿಶೋಧನೆ ಮತ್ತು ಪ್ರಸ್ತುತ ವರ್ಷಗಳಲ್ಲಿನ ಲೆಕ್ಕಾಚಾರದ ನಂತರ ವಾಸ್ತವವಾದ ತೆರಿಗೆ ಭಾದ್ಯತೆಯು 8288.00 ಲಕ್ಷ ರೂ.ಗಳೆಂದು ತೀರ್ಮಾನಿಸಲಾಯಿತು. ಇದರಿಂದಾಗಿ 312.00 ಲಕ್ಷ ರೂ.ಗಳಷ್ಟು ಅಧಿಕವಾದ ಏರ್ಪಾಡನ್ನು ಪ್ರಸ್ತುತ ವರ್ಷದ ಲಾಭ ಮತ್ತು ನಷ್ಟದ ಲೆಕ್ಕದಲ್ಲಿ ತೋರಿಸಬೇಕಾಗಿದ್ದಾಗ್ಯೂ ಅದು ಹಿಂದಿನ ವರ್ಷಕ್ಕೆ ಸಂಬಂಧಪಟ್ಟಿದ್ದೆಂದು ಪರಿಭಾವಿಸಿ ಅದನ್ನು ಲಾಭ ಮತ್ತು ನಷ್ಟದ ಲೆಕ್ಕದಲ್ಲಿ ತೋರಿಸದೇ ಉಳಿಸಿಕೊಂಡ ಗಳಿಕೆಗಳೆಡೆಗೆ ಹೊಂದಾಣಿಕೆ ಮಾಡಲಾಗಿದೆ. ಇದರಿಂದಾಗಿ ತೆರಿಗೆ ನಂತರದ ಲಾಭದಲ್ಲಿ 312.00 ಲಕ್ಷ ರೂ.ಗಳಷ್ಟು ಕಡಿಮೆಯಾಗಿದೆ.

ಬಿ) 2008–09ನೇ ಕರ ನಿರ್ಧಾರಣಾ ವರ್ಷದಲ್ಲಿ, ಕಂಪನಿಯು ಸ್ವೀಕರಿಸಬೇಕಿರುವ 6,70,19,264 ರೂ.ಗಳ ಆದಾಯ ತೆರಿಗೆ ಹಿಂಪಡೆತವನ್ನು ಪರಿಗಣಿಸಿತ್ತು. ಆದಾಯ ತೆರಿಗೆಯ ಡೆಪ್ಯುಟಿ ಕಮೀಷನರ್ – ವೃತ್ತ 7(1)(1), ಬೆಂಗಳೂರುರವರ 25ನೇ ಜೂನ್ 2024ರ ಆದೇಶ ರೀತ್ಯ, ಆದಾಯ ತೆರಿಗೆ ಹಿಂಪಡೆತವನ್ನು 10,21,41,149 ರೂ. ಎಂದು ನಿರ್ಧರಿಸಲಾಗಿದ್ದು. ಇದರಿಂದ 3,51,21,885 ರೂ.ಗಳಷ್ಟು ವ್ಯತ್ಯಾಸ ಏರ್ಪಟ್ಟಿದೆ. ಈ ವ್ಯತ್ಯಾಸಕ್ಕೆ ನಿರ್ದಿಷ್ಟವಾದ ವಿಂಗಡಣಾ ವಿವರಗಳ ಅಲಭ್ಯತೆಯಿಂದಾಗಿ ಮತ್ತು ಈ ಹಿಂಪಡೆತವು ಹಿಂದಿನ ವರ್ಷಕ್ಕೆ ಸಂಬಂಧಪಟ್ಟಿದ್ದೆಂದು ಭಾವಿಸಿ, ಪ್ರಸ್ತುತ ವರ್ಷದ ಫಲಿತಾಂಶವನ್ನು ಅಪಹೇಳಿಕೆಗಳಿಂದ ಮುಕ್ತವಾಗಿರಿಸಲು, ಕಂಪನಿಯು ಲಾಭ ಮತ್ತು ನಷ್ಟದ ಲೆಕ್ಕದ ಮೂಲಕ ಪರಿಗಣಿಸದೇ, ಉಳಿಸಿಕೊಂಡ ಗಳಿಕೆಗಳೆಡೆಗೆ ಹೊಂದಾಣಿಕೆ ಮಾಡಿದೆ. ಇದರಿಂದಾಗಿ ಲಾಭವನ್ನು 351.21 ಲಕ್ಷ ರೂ.ಗಳಷ್ಟು ಕಡಿಮೆ ತೋರಿಸಲಾಗಿದೆ.

ಸಿ) ಪ್ರಸ್ತುತ ಆರ್ಥಿಕ ವರ್ಷದಲ್ಲಿ ಕಂಪನಿಯು 85.01 ಲಕ್ಷ ರೂ.ಗಳನ್ನು ಕೂಡಿ ಬಂದ ಬಡ್ಡಿಯ ವಿಪರ್ಯಯವನ್ನು ನೇರವಾಗಿ ಉಳಿಸಿಕೊಂಡ ಗಳಿಕೆಗಳೆಡೆಗೆ ಹೊಂದಾಣಿಕೆ ಮಾಡಿದೆ. ಈ ಬಡ್ಡಿಯನ್ನು ಹಿಂದಿನ ವರ್ಷಗಳಲ್ಲಿ ಆದಾಯವೆಂದು ಪರಿಗಣಿಸಲಾಗಿದ್ದು. ಈ ವಿಪರ್ಯಯವು ಬಡ್ಡಿಯ ಮನ್ನಾ ಆಗಿರುವುದರಿಂದ ಮತ್ತು ಅದು ಹಣಕಾಸು ಆಸ್ತಿಗಳಿಗೆ ಸಂಬಂಧಿಸಿರುವುದರಿಂದ ಅದನ್ನು ಲಾಭ ಮತ್ತು ನಷ್ಟದ ಲೆಕ್ಕಕ್ಕೆ ಹಾಕಬೇಕಾಗಿದ್ದು, ಅದನ್ನು ಇತರೇ ಈಕ್ವಿಟಿ/ಉಳಿಸಿಕೊಂಡ ಗಳಿಕೆಗಳೆಡೆಗೆ ಹೊಂದಾಣಿಕೆ ಮಾಡುವಂತಿಲ್ಲ. ಇದರಿಂದಾಗಿ ಲಾಭವನ್ನು 85.01 ಲಕ್ಷ ರೂ.ಗಳಷ್ಟು ಅಧಿಕವಾಗಿ ತೋರಿಸಲಾಗಿದೆ.

ಮುಂದುವರೆದು, ಮೇಲ್ಕಂಡ ಹೊಂದಾಣಿಕೆಗಳನ್ನು ಪರಿಗಣಿಸಿದಾಗ, ಅವುಗಳ ಒಟ್ಟು ನಿವ್ವಳ ಪರಿಣಾಮದಲ್ಲಿ ವರ್ಷದ ಲಾಭವನ್ನು 80.68 ಲಕ್ಷ ರೂ.ಗಳಷ್ಟು ಅಧಿಕವಾಗಿ ತೋರಿಸಲಾಗಿದೆ.

ಏಕಸ್ಥಾಯಿ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳ ಪರಿಶೋಧನೆಯನ್ನು ನಾವು ಕಾಯಿದೆ 2013ರ ಸೆಕ್ಷನ್ 143(10)ರಲ್ಲಿ ನಿರ್ದಿಷ್ಟಪಡಿಸಲಾದ ಪರಿಶೋಧನಾ ಮಾನದಂಡಗಳನ್ನಾಧರಿಸಿ ನಡೆಸಿದ್ದೇವೆ. ಏಕಸ್ಥಾಯಿ ಲೆಕ್ಕಗಳ ಪರಿಶೋಧನೆಡೆಯಲ್ಲಿ ಲೆಕ್ಕ ಪರಿಶೋಧಕರ ಜವಾಬ್ದಾರಿಯಡಿಯಲ್ಲಿ, ನಮ್ಮ ಜವಾಬ್ದಾರಿಯ ಬಗೆಗಿನ ವಿವರಗಳನ್ನು ನೀಡಲಾಗಿದೆ. ಭಾರತೀಯ ಛಾರ್ಟರ್ಡ್ ಅಕೌಂಟೆಂಟ್ ಸಂಸ್ಥೆಯವರು(ಐಸಿಎಐ) ಹೊರಡಿಸಿರುವ ನೀತಿ ಸಂಹಿತೆ ಮತ್ತು ನೈತಿಕ ಅವಶ್ಯಕತೆಗಳಿಗನುಗುಣವಾಗಿ, ಏಕಸ್ಥಾಯಿ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳ ಪರಿಶೋಧನೆಯಲ್ಲಿ, ಕಾಯಿದೆ ಮತ್ತು ಅದರಡಿಯಲ್ಲಿನ ನಿಯಮಗಳ ರೀತ್ಯ, ನಾವು ಕಂಪನಿಯಿಂದ ಸ್ವತಂತ್ರರಾಗಿರುತ್ತೇವೆ ಮತ್ತು ನಾವು ಐಸಿಎಐ ರವರ ನೀತಿ ಸಂಹಿತೆಯಲ್ಲಿರುವ ನೈತಿಕ ಹೊಣೆಗಾರಿಕೆಗಳನ್ನು ಪಾಲಿಸಿದ್ದೇವೆ. ಏಕಸ್ಥಾಯಿ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳ

ಮೇಲೆ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಆಧಾರ ಒದಗಿಸುವಲ್ಲಿ ಪರಿಶೋಧನಾ ಸಾಕ್ಷ್ಯಗಳು ಸಾಕಷ್ಟಿದ್ದು. ಅವು ಉಚಿತವಾಗಿವೆ ಎಂದು ನಾವು ನಂಬುತ್ತೇವೆ.

ಪ್ರಮುಖ ಪರಿಶೋಧನಾ ವಿಷಯಗಳು :

ಲೆಕ್ಕಪತ್ರಗಳ ಪರಿಶೋಧನೆಯಲ್ಲಿ, ನಮ್ಮ ವೃತ್ತಿಪರ ನಿರ್ಣಯಗಳ ಪ್ರಕಾರ ಪ್ರಸ್ತುತ ವರ್ಷದ ಪ್ರಮುಖ ಪರಿಶೋಧನಾ ವಿಷಯಗಳೆಂದರೆ, ಅವು ಬಹಳ ಪ್ರಾಮುಖ್ಯತೆ ಹೊಂದಿರುವ ವಿಷಯಗಳಾಗಿವೆ. ಈ ವಿಷಯಗಳನ್ನು ಲೆಕ್ಕಪತ್ರಗಳ ನಮ್ಮ ಪರಿಶೋಧನೆಯ ಸಂದರ್ಭದಲ್ಲಿ ಸಮಗ್ರವಾಗಿ ಪರಿಶೀಲಿಸಲಾಗಿದ್ದು, ಅವುಗಳ ಮೇಲೆ ನಮ್ಮದೇ ಆದ ಅಭಿಪ್ರಾಯಗಳನ್ನು ರೂಪಿಸಿಕೊಳ್ಳಲಾಗಿದ್ದು ಅವುಗಳ ಮೇಲೆ ನಾವು ಪ್ರತ್ಯೇಕವಾದ ಅಭಿಪ್ರಾಯಗಳನ್ನು ಒದಗಿಸಿಲ್ಲ.

ಎಸ್ಎ 701ರ ಪ್ರಕಾರ, ಪ್ರಮುಖ ಪರಿಶೋಧನಾ ವಿಷಯಗಳ ವರದಿಗಾರಿಕೆ – ಕಂಪನಿಯು ಲಿಸ್ಟ್ ಆಗದಿರುವ ಕಾರಣ, ಪ್ರಮುಖ ಪರಿಶೋಧನಾ ವಿಷಯಗಳು, ಕಂಪನಿಗೆ ಅನ್ವಯವಾಗುವುದಿಲ್ಲ.

ವಿಷಯಗಳ ಮೇಲಿನ ಒತ್ತು :

1. ಕರ್ನಾಟಕ ಸರ್ಕಾರವು ತಾ. 06.–12–2024ರಂದು ಅನುಮೋದಿಸಿದ ವೇತನ ಪರಿಷ್ಕರಣೆ ಮತ್ತು ಕಾರ್ಮಿಕರೊಂದಿಗೆ ದಿ. 23–12–2024ರಂದು ಸಹಿ ಮಾಡಲಾದ ಒಡಂಬಡಿಕೆ ಬಗೆಗೆ ಟಿಪ್ಪಣಿ ಸಂಖ್ಯೆ 22ರೆಡೆಗೆ ಗಮನ ಸೆಳೆಯುತ್ತೇವೆ. 01–04–2021 ರಿಂದ 30–11–2024ರ ಅವಧಿಯ ಬಾಕಿ ವೇತನಕ್ಕಾಗಿ ಕಂಪನಿಯು 84.22 ಕೋಟಿ ರೂ.ಗಳ ಏರ್ಪಾಡನ್ನು ಮಾಡಿದ್ದು, ಅದರಲ್ಲಿ ಭವಿಷ್ಯನಿಧಿ ಮೊಬಲಗನ್ನು ಕಳೆದಿಲ್ಲ. ಈ ವಿಷಯದಲ್ಲಿ ನಮ್ಮ ಅಭಿಪ್ರಾಯವು ಮಾರ್ಪಾಡಾಗಿರುವುದಿಲ್ಲ.

ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳು ಮತ್ತು ಅವುಗಳ ಮೇಲಿನ ಲೆಕ್ಕ ಪರಿಶೋಧಕರ ವರದಿಯಲ್ಲದೇ ಇರುವ ಮಾಹಿತಿಗಳು :

ಇತರೇ ಮಾಹಿತಿಗಳ ತಯಾರಿಕೆಯು ಕಂಪನಿಯ ನಿರ್ದೇಶಕ ಮಂಡಳಿಯ ಜವಾಬ್ದಾರಿಯಾಗಿರುತ್ತದೆ. ಇತರೇ ಮಾಹಿತಿಗಳು ನಿರ್ದೇಶಕರ ವರದಿಯಲ್ಲಿದ್ದು ಮತ್ತು ಆ ವರದಿಯು ಆಡಳಿತ ವರ್ಗದ ಚರ್ಚೆ ಮತ್ತು ವಿಶ್ಲೇಷಣೆಯನ್ನು ಒಳಗೊಂಡಿರುವ ಮಾಹಿತಿಗಳಾಗಿವೆ. ಅವು ನಿರ್ದೇಶಕರ ವರದಿ ಮತ್ತು ಅದರ ಅನುಬಂಧಗಳು, ವ್ಯಾಪಾರ ಜವಾಬ್ದಾರಿ ಮತ್ತು ಸಂರಕ್ಷಣಾ ವರದಿ, ಸಾಂಸ್ಥಿಕ ಆಳ್ವಿಕೆ ಮತ್ತು ಷೇರುದಾರರ ಮಾಹಿತಿಗಳನ್ನೊಳಗೊಂಡಿದ್ದು, ಅವುಗಳಲ್ಲಿ ಏಕಸ್ಥಾಯಿ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿ ಮತ್ತು ಲೆಕ್ಕ ಪರಿಶೋಧಕರ ವರದಿಯು ಒಳಗೊಂಡಿರುವುದಿಲ್ಲ.

ಏಕಸ್ಥಾಯಿ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳ ಮೇಲಿನ ನಮ್ಮ ವರದಿಯು ಇತರೇ ಮಾಹಿತಿಗಳ ಬಗೆಗಿನ ಅಭಿಪ್ರಾಯವನ್ನು ಒಳಗೊಂಡಿರುವುದಿಲ್ಲ ಮತ್ತು ಅವುಗಳ ಮೇಲೆ ಯಾವುದೇ ಭರವಸೆಯುಳ್ಳ ಅಭಿಪ್ರಾಯಗಳನ್ನು ನಾವು ವ್ಯಕ್ತಗೊಳಿಸುವುದಿಲ್ಲ.

ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳ ನಮ್ಮ ಪರಿಶೋಧನೆಗೆ ಸಂಬಂಧಿಸಿದಂತೆ ನಮ್ಮ ಜವಾಬ್ದಾರಿಯು ಇತರೇ ಮಾಹಿತಿಗಳನ್ನು ಗಮನಿಸುವುದಾಗಿದ್ದು ಮತ್ತು ಹಾಗೆ ಮಾಡುವಲ್ಲಿ ಇತರೇ ಮಾಹಿತಿಗಳು. ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಯ ಬಗೆಗೆ ಗುರುತರ ಅಸಾಂಗತ್ಯಗಳನ್ನು ಹೊಂದಿವೆಯೇ ಅಥವಾ ನಮ್ಮ ಲೆಕ್ಕ ಪರಿಶೋಧನೆಯ ಕಾರ್ಯದಲ್ಲಿ ನಾವು ಗಳಿಸಿದ ಜ್ಞಾನವು ಗುರುತರ ಅಪಹೇಳಿಕೆಗಳನ್ನು ಹೊಂದಿದೆಯೇ ಎಂಬುದನ್ನು ಪರಿಗಣಿಸುವುದೇ ಆಗಿದೆ.

ನಾವು ನಿರ್ವಹಿಸಿದ ಲೆಕ್ಕ ಪರಿಶೋಧನಾ ಕಾರ್ಯದಲ್ಲಿ ಈ ಇತರೇ ಮಾಹಿತಿಗಳು ಗುರುತರ ಅಪಹೇಳಿಕೆಗಳನ್ನು ಹೊಂದಿವೆ ಎಂದು ಅಭಿಪ್ರಾಯ ಪಟ್ಟಿರೆ ಆ ವಾಸ್ತವವನ್ನು ನಾವು ವರದಿ ಮಾಡಬೇಕಾಗಿರುತ್ತದೆ. ಆ ಬಗೆಗೆ ನಾವು ವರದಿ ಮಾಡಬೇಕಾಗಿರುವುದು ಏನೂ ಇರುವುದಿಲ್ಲ.

ಏಕಸ್ಥಾಯಿ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳಡೆಗೆ ಆಡಳಿತ ವರ್ಗ ಮತ್ತು ನಿರ್ದೇಶಕ ಮಂಡಳಿಯ ಜವಾಬ್ದಾರಿಗಳು :

ಕಂಪನಿ ಕಾಯಿದೆ ಸೆಕ್ಷನ್ 134(5)ರಡಿಯಲ್ಲಿ ಹೆಸರಿಸಲಾದ ವಿಷಯಗಳೆಡೆಗೆ, ಏಕಸ್ಥಾಯಿ ಆರ್ಥಿಕ ಸ್ಥಿತಿ ನಿರ್ವಹಣಾ ಪಟ್ಟಿಗಳು, ಕಂಪನಿಯ ಆರ್ಥಿಕಸ್ಥಿತಿ, ಆರ್ಥಿಕ ನಿರ್ವಹಣೆಯೂ ಸೇರಿ ವಿಸ್ತೃತ ಆದಾಯ ಈಕ್ವಿಟಿಯಲ್ಲಿನ ಬದಲಾವಣೆ ಮತ್ತು ಹಣ ಹರಿವಿನ ಬಗೆಗೆ, ಲೆಕ್ಕಶಾಸ್ತ್ರಗಳ ತತ್ವಗಳನ್ನೂ ಒಳಗೊಂಡಂತೆ ಭಾರತದಲ್ಲಿ ಒಪ್ಪಿತವಾದ ಲೆಕ್ಕಾಚಾರ ಮಾನದಂಡಗಳಿಗನುಸಾರವಾಗಿ ಮತ್ತು ಕಾಯಿದೆ ಸೆಕ್ಷನ್ 133ರಲ್ಲಿ ನಿರ್ದಿಷ್ಟಪಡಿಸಲಾದಂತೆ, ನೈಜವಾದ ಮತ್ತು ನ್ಯಾಯಯುತ ನೋಟವನ್ನು ನೀಡುವ ಇಂಡ್–ಎಎಸ್ ಆಧಾರಿತ ಏಕಸ್ಥಾಯಿ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳ ತಯಾರಿಕೆಯು ಕಂಪನಿಯ ಆಡಳಿತ ಮಂಡಳಿಯ ಜವಾಬ್ದಾರಿಯಾಗಿದ್ದು, ಇದರಲ್ಲಿ ವಂಚನೆ ಮತ್ತು ಇತರ ಅಕ್ರಮಗಳನ್ನು ಪತ್ತೆ ಮಾಡುವುದು ಮತ್ತು ತಡೆಯುವುದು, ಉಚಿತ ಲೆಕ್ಕಾಚಾರ ನೀತಿಗಳನ್ನು ಆಯ್ದುಕೊಂಡು ಅಳವಡಿಸಿಕೊಳ್ಳುವುದು, ಉಚಿತ ಅಂದಾಜುಗಳನ್ನು ವಿನ್ಯಾಸಗೊಳಿಸುವುದು, ಸಾಕಷ್ಟು ಆಂತರಿಕ ನಿಯಂತ್ರಕಗಳನ್ನು ಅನುಷ್ಠಾನಗೊಳಿಸುವುದು, ಮತ್ತು ಇವುಗಳಿಂದಾಗಿ ಲೆಕ್ಕಪತ್ರಗಳು ನಿಖರವಾಗಿ ಮತ್ತು ಸಂಪೂರ್ಣವಾಗಿರುವಂತೆ ಖಾತ್ರಿ ಪಡಿಸಿಕೊಂಡು ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳು ವಂಚನೆ ಅಥವಾ ತಪ್ಪುಗಳಿಂದಾಗಿಲ್ಲದೆ ನೈಜವಾದ ಮತ್ತು ನ್ಯಾಯಯುತ ನೋಟವನ್ನು ನೀಡುವಂತೆ ತಯಾರಿಸುವುದೂ ಸೇರಿರುತ್ತದೆ.

ಇಂಡ್–ಎಎಸ್ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳ ತಯಾರಿಕೆ ಮತ್ತು ಅದರಲ್ಲಿ ಕಂಪನಿಯು ಮುಂದುವರೆಯುವ ಕಂಪನಿಯಾಗಿ ಮುಂದುವರೆಯುವ ಕ್ಷಮತೆ, ಅದಕ್ಕೆ ಸಂಬಂಧಿಸಿದಂತೆ, ಅನ್ವಯವಾಗುವ ಮಾಹಿತಿಗಳ ಪ್ರಕಟಣೆ, ಮುಂದುವರೆಯುವ ಕಂಪನಿಯ ಆಧಾರದಲ್ಲಿ ಲೆಕ್ಕಪತ್ರಗಳ ತಯಾರಿಕೆ, ಮುಂದುವರೆಯುವ ಕಾರ್ಯಾಚರಣೆಯನ್ನು ನಿಲ್ಲಿಸುವ ಉದ್ದೇಶವನ್ನು ಹೊರತು ಪಡಿಸಿದಂತೆ ಅಥವಾ ಹಾಗೆ ಮಾಡಲು ಬೇರೆ ನಿರ್ವಾಹವಿಲ್ಲದಂತೆ ನಿರ್ಧರಿಸುವುದೂ ಕಂಪನಿಯ ಆಡಳಿತ ವರ್ಗದ ಜವಾಬ್ದಾರಿಯಾಗಿರುತ್ತದೆ.

ಆರ್ಥಿಕ ವರದಿಗಾರಿಕೆಯ ಕಾರ್ಯ ವಿಧಾನಗಳ ಮೇಲ್ವಿಚಾರಣೆಯೂ ಕಂಪನಿಯ ನಿರ್ದೇಶಕ ಮಂಡಳಿಯ ಜವಾಬ್ದಾರಿಯಾಗಿರುತ್ತದೆ.

ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳ ಪರಿಶೋಧನೆಯೆಡೆಗೆ ಲೆಕ್ಕ ಪರಿಶೋಧಕರ ಜವಾಬ್ದಾರಿಗಳು :

ಸಮಗ್ರವಾಗಿ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳು ವಂಚನೆ ಅಥವಾ ತಪ್ಪುಗಳಿಂದಾಗಿ ಗುರುತರ ಅಪಹೇಳಿಕೆಗಳಿಂದ ಮುಕ್ತವಾಗಿವೆಯೆಂಬ ಸಮಂಜಸ ಆಶ್ವಾಸನೆಯನ್ನು ಹೊಂದುವುದೇ ನಮ್ಮ ಲೆಕ್ಕ ಪರಿಶೋಧನೆಯ ಉದ್ದೇಶವಾಗಿದೆ ಮತ್ತು ಈ ಬಗ್ಗೆ ಲೆಕ್ಕಪರಿಶೋಧಕರು ತಮ್ಮ ಅಭಿಪ್ರಾಯ ಸಹಿತ ವರದಿಯನ್ನು ನೀಡುವುದೇ ಆಗಿದೆ. ಸಮಂಜಸ ಆಶ್ವಾಸನೆಯೆಂದರೆ ಉನ್ನತಮಟ್ಟದ ಆಶ್ವಾಸನೆಯಾಗಿದ್ದು, ಆದರೆ ಲೆಕ್ಕಪರಿಶೋಧನೆಯ ಮಾನದಂಡಗಳ ಪ್ರಕಾರ ಮಾಡಲಾದ ಲೆಕ್ಕ ಪರಿಶೋಧನೆಯು ಸರ್ವದಾ ಗುರುತರ ಅಪಹೇಳಿಕೆಗಳೇನಾದರೂ ಇದ್ದಾಗ, ಅವುಗಳನ್ನು ಪತ್ತೆ ಮಾಡುವುದೆಂಬ ಖಾತರಿ ನೀಡುವುದಿಲ್ಲ. ಅಪಹೇಳಿಕೆಗಳು ವಂಚನೆ ಅಥವಾ ತಪ್ಪುಗಳಿಂದ ಉಂಟಾಗಬಹುದು ಮತ್ತು ಗುರುತರವೆಂದು ಪರಿಭಾವಿಸಲು ಅವು ಪ್ರತ್ಯೇಕವಾಗಿ ಅಥವಾ ಒಟ್ಟಾರೆಯಾಗಿ, ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳನ್ನು ಬಳಸುವವರ ಆರ್ಥಿಕ ನಿರ್ಧಾರಗಳ ಮೇಲೆ ಪ್ರಭಾವ ಬೀರಬಲ್ಲವಾಗಿವೆ ಎಂದು ಸಮಂಜಸವಾಗಿ ನಿರೀಕ್ಷಿಸುವಂತಿರಬೇಕು.

ಲೆಕ್ಕ ಪರಿಶೋಧನಾ ಮಾನದಂಡಗಳ ಪ್ರಕಾರದ ಪರಿಶೋಧನಾ ಕಾರ್ಯದ ಭಾಗವಾಗಿ, ಪರಿಶೋಧನಾ ಕಾರ್ಯದ ಪರ್ಯಂತ, ನಾವು ವೃತ್ತಿಪರ ನಿರ್ಧಾರಗಳನ್ನು ಕೈಗೊಂಡಿದ್ದು ವೃತ್ತಿಪರ ಸಂದೇಹಗಳನ್ನೂ ನಿರ್ವಹಿಸಿದ್ದೇವೆ. ಇದಲ್ಲದೇ ನಾವು :

- ಗುರುತರ ಅಪಹೇಳಿಕೆಗಳ ಅಪಾಯಗಳನ್ನು ಗುರುತಿಸಿ ಮತ್ತು ಮೌಲ್ಯೀಕರಿಸಿ, ಅವು ವಂಚನೆ ಅಥವಾ ತಪ್ಪುಗಳಿಂದಾಗಿವೆಯೇ ಎಂದು ಲೆಕ್ಕಪರಿಶೋಧನಾ ಪ್ರಕ್ರಿಯೆಗಳನ್ನು ವಿನ್ಯಾಸಗೊಳಿಸಿ ಮತ್ತು ನಿರ್ವಹಿಸಿ, ಅವು ಆ ಅಪಾಯಗಳಿಗೆ ಸ್ಪಂದಿಸಿವೆಯೇ ಎಂದು ಮತ್ತು ಪರಿಶೋಧನಾ ಪ್ರಕ್ರಿಯೆಗಳಲ್ಲಿ ಪರಿಶೋಧನಾ ಸಾಕ್ಷ್ಯಗಳು ಸಾಕಷ್ಟು ಇದೆಯೇ ಮತ್ತು ಸಮುಚಿತವಾಗಿದೆಯೇ ಎಂದೂ ಅವು ನಮ್ಮ ಅಭಿಪ್ರಾಯಗಳೆಡೆಗೆ ಆಧಾರ ಒದಗಿಸುತ್ತವೆಯೇ ಎಂದೂ ಗಮನಿಸಿದ್ದೇವೆ.
- ಲೆಕ್ಕ ಪರಿಶೋಧನಾ ಕಾರ್ಯಗಳ ಸಂದರ್ಭದಲ್ಲಿ ಸೂಕ್ತವಾದ ಪ್ರಕ್ರಿಯೆಗಳನ್ನು ವಿನ್ಯಾಸಗೊಳಿಸಲೋಸುಗ, ಆಂತರಿಕ ನಿಯಂತ್ರಣಗಳ ಬಗೆಗೆ ತಿಳುವಳಿಕೆಯನ್ನು ಪಡೆದುಕೊಂಡಿದ್ದೇವೆ. ಕಂಪನಿ ಕಾಯಿದೆ 2013ರ ಸೆಕ್ಷನ್ 143(3)(i)ರ ರೀತ್ಯ ಈ ಕೆಳಕಂಡವುಗಳ ಬಗೆಗೂ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ನಮ್ಮ ಜವಾಬ್ದಾರಿಯಾಗಿರುತ್ತದೆ. ಕಂಪನಿಯು ಸಾಕಷ್ಟು ಆಂತರಿಕ ನಿಯಂತ್ರಕಗಳನ್ನು ಹೊಂದಿದೆಯೇ ಮತ್ತು ಅವುಗಳ ನಿರ್ವಹಣೆ ಪರಿಣಾಮಕಾರಿಯಾಗಿದೆಯೇ ಎಂಬುದನ್ನು ತಿಳಿದಿದ್ದೇವೆ.

- ಅಳವಡಿಸಿಕೊಂಡಿರುವ ಲೆಕ್ಕಾಚಾರ ಶಾಸ್ತ್ರಗಳ ಮಾನದಂಡಗಳ ಸೂಕ್ತತೆ ಮತ್ತು ಆಡಳಿತ ವರ್ಗವು ಮಾಡಿದ ಲೆಕ್ಕಾಚಾರದ ಅಂದಾಜುಗಳ ಮತ್ತು ಸಂಬಂಧಿತ ಪ್ರಕಟಣೆಗಳ ಸೂಕ್ತತೆಗಳನ್ನು ಮೌಲ್ಯೀಕರಿಸಿದ್ದೇವೆ,

- ಆಡಳಿತ ವರ್ಗವು ಬಳಸಿಕೊಂಡ "ಮುಂದುವರೆಯುತ್ತಿರುವ ಕಂಪನಿ" ಆಧಾರದ ಸೂಕ್ತತೆಯ ಬಗೆಗೆ ತೀರ್ಮಾನ ಮತ್ತು ಈ ಆಧಾರಕ್ಕೆ ಸಂಬಂಧಿಸಿದಂತೆ ಯಾವುದೇ ಗುರುತರ ಸಂದೇಹಗಳಿವೆಯೇ ಎಂಬುದರ ಬಗೆಗಿನ ತೀರ್ಮಾನ ತೆಗೆದುಕೊಳ್ಳುವಿಕೆ,

- ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳು ನ್ಯಾಯಯುತ ನೋಟವನ್ನು ನೀಡುವಲ್ಲಿ, ಅವುಗಳ ಸಂಪೂರ್ಣ ಪ್ರಕಟಣೆ, ನಿರ್ಮಿತಿ ಮತ್ತು ವಿಷಯಗಳು, ಅವುಗಳಲ್ಲಿರುವ ವ್ಯವಹಾರಗಳನ್ನು ಪ್ರತಿನಿಧಿಸುತ್ತದೆಯೇ ಎಂಬುದರ ಬಗೆಗಿನ ತೀರ್ಮಾನ,

  ಗುರುತರವೆನ್ನುವುದು ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳಲ್ಲಿನ ಅಪಹೇಳಿಕೆಗಳ ಗಾತ್ರವಾಗಿದ್ದು, ಅದರಿಂದಾಗಿ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳ ಸಾಕಷ್ಟು ಜ್ಞಾನವಿರುವ ಅದರ ಬಳಕೆದಾರನ ಆರ್ಥಿಕ ನಿರ್ಧಾರಗಳ ಮೇಲೆ ಪರಿಣಾಮ ಬೀರುವಂತಹವು. ನಾವು ಈ ಕೆಳಗಿನವುಗಳ ಪರಿಮಾಣಾತ್ಮಕ ಮತ್ತು ಗುಣಾತ್ಮಕ ಅಂಶಗಳನ್ನು ಪರಿಗಣಿಸುತ್ತೇವೆ (i) ಪರಿಶೋಧನೆಯ ವ್ಯಾಪ್ತಿಯನ್ನು ಯೋಜಿಸುವುದು ಮತ್ತು ನಮ್ಮ ಕಾರ್ಯದ ಪರಿಣಾಮವನ್ನು ಮೌಲ್ಯಮಾಪನ ಮಾಡುವುದು ಮತ್ತು (ii) ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳ ಮೇಲೆ ಗುರುತಿಸಲ್ಪಟ್ಟ ಅಪಹೇಳಿಕೆಗಳ ಪರಿಣಾಮವನ್ನು ಮೌಲ್ಯಮಾಪನ ಮಾಡುವುದು.

  ಆಳ್ವಿಕೆಯ ಜವಾಬ್ದಾರಿ ಹೊಂದಿರುವುದರೊಂದಿಗೆ ನಮ್ಮ ಯೋಜಿತ ಲೆಕ್ಕಪರಿಶೋಧನೆ, ಗುರುತರ ಕಂಡಿಕೆಗಳು ಮತ್ತು ಲೆಕ್ಕಪರಿಶೋಧನೆಯಲ್ಲಿ ನಾವು ಗುರುತಿಸಿದ ಆಂತರಿಕ ನಿಯಂತ್ರಕಗಳ ಗುರುತರ ನ್ಯೂನ್ಯತೆಗಳನ್ನೂ ಕುರಿತು ನಾವು ಸಂವಹನ ನಡೆಸುತ್ತೇವೆ.

  ಆಳ್ವಿಕೆಯ ಹೊಣೆ ಹೊತ್ತವರಿಗೆ ನಾವು ಪಾಲಿಸಿದ ಸೂಕ್ತ ನೈತಿಕ ಅವಶ್ಯಕತೆಗಳೆಡೆಗಿನ ಸ್ವಾತಂತ್ರ್ಯದ ಬಗೆಗಿನ ಹೇಳಿಕೆಗಳನ್ನು ನೀಡುತ್ತೇವೆ ಮತ್ತು ಅವರೊಂದಿಗೆ ಎಲ್ಲಾ ಸಂಬಂಧಗಳು ಮತ್ತು ನಮ್ಮ ಸ್ವಾತಂತ್ರ್ಯದ ಬಗೆಗಿನ ಮಾಹಿತಿಗಳನ್ನು ಎಲ್ಲಿ ಅನ್ವಯವಾಗುವುದೋ ಅಲ್ಲಿ ಸಂಬಂಧಿಸಿದ ಸಂರಕ್ಷಣಾ ವಿಷಯಗಳ ಬಗೆಗೂ ಸಂವಹನ ನಡೆಸುತ್ತೇವೆ.

ಇತರೇ ನ್ಯಾಯಿಕ ಮತ್ತು ನಿಯಂತ್ರಕಗಳ ಅವಶ್ಯಕತೆಗಳ ಬಗೆಗೆ ವರದಿ :

ಕಂಪನಿ ಕಾಯಿದೆ 2013ರ ಸೆಕ್ಷನ್ 143(11)ರಡಿಯಲ್ಲಿ ಕೇಂದ್ರ ಸರ್ಕಾರವು ಹೊರಡಿಸಿದ ಕಂಪನಿಗಳ (ಲೆಕ್ಕ ಪರಿಶೋಧಕರ ವರದಿ) ಆದೇಶ 2016ರಲ್ಲಿನ ಅವಶ್ಯಕತೆಯಂತೆ ಪ್ಯಾರಾ 3 ಮತ್ತು 4ರಲ್ಲಿ ನಿಗದಿಪಡಿಸಿದ ವಿಷಯಗಳನ್ನು ಈ ವರದಿಯ ಭಾಗವಾಗುವ **ಅನುಬಂಧ–ಎ** ನಲ್ಲಿ ನೀಡಲಾಗಿದೆ.

ಕಾಯಿದೆಯ ಸೆಕ್ಷನ್ 143(3)ರಡಿಯಲ್ಲಿ, ಈ ಕೆಳಗಿನಂತೆ ವರದಿ ನೀಡುತ್ತೇವೆ.

ಎ) ಮೇಲ್ಕಂಡ ಷರತ್ತುಬದ್ಧ ಅಭಿಪ್ರಾಯಗಳ ವಿಷಯವನ್ನು ಹೊರತುಪಡಿಸಿ, ನಮ್ಮ ಪರಿಶೋಧನೆಗಾಗಿ, ನಮ್ಮ ತಿಳುವಳಿಕೆ ಮತ್ತು ನಂಬಿಕೆಗೆ ಅವಶ್ಯಕವೆನಿಸುವ ಎಲ್ಲಾ ಮಾಹಿತಿಗಳನ್ನು ಮತ್ತು ವಿವರಣೆಗಳನ್ನು ಕೋರಿದ್ದೇವೆ ಮತ್ತು ಪಡೆದಿದ್ದೇವೆ.

ಬಿ) ಮೇಲ್ಕಂಡ ಷರತ್ತುಬದ್ಧ ಅಭಿಪ್ರಾಯಗಳ ವಿಷಯವನ್ನು ಹೊರತುಪಡಿಸಿ ನಮ್ಮ ಅಭಿಪ್ರಾಯದಲ್ಲಿ ಕಾನೂನು ಪ್ರಕಾರ ಇಡಬೇಕಾದ ಲೆಕ್ಕಪುಸ್ತಕಗಳನ್ನು ಕಂಪನಿಯು ಇಟ್ಟಿದೆ ಎಂದು ಆ ಲೆಕ್ಕ ಪುಸ್ತಕಗಳ ಪರೀಕ್ಷೆಯಿಂದ ವ್ಯಕ್ತವಾಗುತ್ತದೆ.

ಸಿ) ಈ ವರದಿಯಲ್ಲಿ ವ್ಯವಹರಿಸಿರುವ ಸ್ಥಿತಿ ವಿವರಣಾ ಪಟ್ಟಿ, ಲಾಭ ಮತ್ತು ನಷ್ಟದ ಲೆಕ್ಕ ಮತ್ತು ಹಣ ಹರಿವಿನ ತಪ್ಸೀಲುಗಳು ಲೆಕ್ಕ ಪುಸ್ತಕಗಳೊಂದಿಗೆ ಹೊಂದಾಣಿಕೆಯಾಗುತ್ತವೆ.

ಡಿ) ನಮ್ಮ ಅಭಿಪ್ರಾಯದಲ್ಲಿ ಮೇಲ್ಕಂಡ ಆರ್ಥಿಕಸ್ಥಿತಿ ವಿವರಣಾ ಪಟ್ಟಿಗಳು ಕಾಯಿದೆಯ ಸೆಕ್ಷನ್ 133ರೊಂದಿಗೆ ಓದಲಾದ ತಿದ್ದುಪಡಿಗೊಂಡ ಕಂಪನಿಗಳ (ಲೆಕ್ಕಪತ್ರಗಳು) ನಿಯಮ 2015ರನ್ನು ಪರಿಪಾಲಿಸುತ್ತವೆ.

ಇ) 'ಮೇಲ್ಕಂಡ ಷರತ್ತು ಬದ್ಧ ಅಭಿಪ್ರಾಯಗಳ ಪ್ರಕಾರ' ಪ್ಯಾರಾದಲ್ಲಿ ತಿಳಿಸಿರುವ ವಿಷಯಗಳು, ನಮ್ಮ ಅಭಿಪ್ರಾಯದಲ್ಲಿ ಕಂಪನಿಯ ಕಾರ್ಯಾಚರಣೆಗಳ ಮೇಲೆ ಯಾವುದೇ ವ್ಯತಿರಿಕ್ತ ಪರಿಣಾಮವನ್ನು ಬೀರುವುದಿಲ್ಲ.

ಎಫ್) ನಿರ್ದೇಶಕರುಗಳ ಅನರ್ಹತೆಯ ಬಗೆಗಿನ ಕಾಯಿದೆಯ ಸೆಕ್ಷನ್ 164(2). ಕಾರ್ಪೋರೇಟ್ ಮಂತ್ರಾಲಯದ ತಾ. 5–6–2015ರ ಅಧಿಸೂಚನೆ ಜಿಎಸ್ಆರ್ 463(ಇ)ರ ರೀತ್ಯ ಕಂಪನಿಗೆ ಅನ್ವಯವಾಗುವುದಿಲ್ಲ.

ಜಿ) ಆರ್ಥಿಕ ವರದಿಗಾರಿಕೆಯ ಮೇಲೆ ಆಂತರಿಕ ಆರ್ಥಿಕ ನಿಯಂತ್ರಕಗಳ ಪರ್ಯಾಪ್ತತೆ ಮತ್ತು ಆ ನಿಯಂತ್ರಕಗಳ ಫಲೋತ್ಪಾದಕತೆಯ ಬಗೆಗೆ, 'ಅನುಬಂಧ–ಬಿ'ರಲ್ಲಿನ ನಮ್ಮ ಪ್ರತ್ಯೇಕ ವರದಿಯನ್ನು ಗಮನಿಸಿರಿ. ಏಕಸ್ಥಾಯಿ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳೆಡೆಗೆ ಆಂತರಿಕ ಆರ್ಥಿಕ ನಿಯಂತ್ರಕಗಳ ಪರ್ಯಾಪ್ತತೆ ಮತ್ತು ಫಲೋತ್ಪಾದಕತೆಯ ಬಗೆಗೆ ನಮ್ಮ ವರದಿಯು ಪರಿಷ್ಕೃತವಾಗಿಲ್ಲದ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತದೆ.

ಹೆಚ್) ಕಾಯಿದೆಯ ಪರಿಷ್ಕೃತ ಸೆಕ್ಷನ್ 197(16)ರ ರೀತ್ಯ, ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ನೀಡಲಾದ ಮಾಹಿತಿಗಳು ಮತ್ತು ವಿವರಣೆಗಳಿಗನುಸಾರವಾಗಿ, ನಿರ್ದೇಶಕರುಗಳಿಗೆ ಪಾವತಿಸಿದ ಸಂಭಾವನೆಯು ಕಾಯಿದೆಯ ಸೆಕ್ಷನ್ 197ರ ಪ್ರಕಾರ ಇದೆ.

ಐ) ಕಂಪನಿಗಳ (ಲೆಕ್ಕ ಪರಿಶೋಧನೆ ಮತ್ತು ಪರಿಶೋಧಕರು) ನಿಯಮಗಳು 2014ರ ನಿಯಮ 11ರಲ್ಲಿ ಹೇಳಿರುವಂತೆ ಲೆಕ್ಕ ಪರಿಶೋಧಕರ ವರದಿಯಲ್ಲಿ ಸೇರಿಸಬೇಕಾದ ವಿಷಯಗಳ ಬಗೆಗೆ, ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಗಳಿಗನುಸಾರವಾಗಿ

i ಏಕಸ್ಥಾಯಿ ಇಂಡ್–ಎಎಸ್ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳ ಮೇಲೆ ಬಾಕಿ ಇರುವ ವ್ಯಾಜ್ಯಗಳ ಆರ್ಥಿಕ ಪರಿಣಾಮವನ್ನು ಕಂಪನಿಯು ತನ್ನ ಇಂಡ್ಎಎಸ್ ಆಧಾರಿತ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳ ಮೇಲಿನ ಟಿಪ್ಪಣಿ ಸಂಖ್ಯೆ 35(2)(ಬಿ)ರಲ್ಲಿ ತೋರಿಸಿದೆ.

ii ಅಗ್ರಗಾಮಿಯಾಗಿ ನಷ್ಟವುಂಟುಮಾಡಬಲ್ಲ ಯಾವುದೇ ದೀರ್ಘಕಾಲೀನ ಗುತ್ತಿಗೆಗಳು ಅಥವಾ ಅವುಗಳಿಂದ ವ್ಯುತ್ಪತ್ತಿಯಾಗುವ ಯಾವುದೇ ಗುತ್ತಿಗೆಗಳನ್ನು ಕಂಪನಿಯು ಹೊಂದಿರಲಿಲ್ಲ.

iii ಹೂಡಿಕೆದಾರರ ಶಿಕ್ಷಣ ಮತ್ತು ಸುರಕ್ಷಾ ನಿಧಿಗೆ ವರ್ಗಾಯಿಸಬೇಕಾದ ಮೊಬಲಗನ್ನು ವರ್ಗಾಯಿಸಲು ಕಂಪನಿಯು ಯಾವುದೇ ವಿಳಂಬವನ್ನು ಮಾಡಿರುವುದಿಲ್ಲ.

iv (a) ಸಾಲವಾಗಿ ಸ್ವೀಕರಿಸಿದ ಅಥವಾ ಷೇರು ಪ್ರೀಮಿಯಂ ಆಗಿ ಸ್ವೀಕರಿಸಿದ ಅಥವಾ ಬೇರೆ ಮೂಲಗಳಿಂದ ಅಥವಾ ಬೇರೆ ರೀರಿಯಲ್ಲಿ ಸ್ವೀಕರಿಸಿದ ಯಾವುದೇ ಹಣವನ್ನು ಗುರುತರವಾಗಿ ಪ್ರತ್ಯೇಕವಾಗಿ ಅಥವಾ ಒಟ್ಟಾರೆಯಾಗಿ ಬರವಣಿಗೆಯಲ್ಲಿ ದಾಖಲಿಸಿದ ಅಥವಾ ದಾಖಲಿಸದ ತಿಳುವಳಿಕೆಯೊಂದಿಗೆ ಯಾವುದೇ ವ್ಯಕ್ತಿಗೆ, ಸಂಸ್ಥೆಗೆ, ವಿದೇಶಿ ಸಂಸ್ಥೆಗೆ(ಮಧ್ಯವರ್ತಿಗಳು), ಸಾಲವಾಗಿಯಾಗಲಿ ಅಥವಾ ಹೂಡಿಕೆಯಾಗಿಯಾಗಲಿ, ಕಂಪನಿಯು (ಅಂತಿಮ ಫಲಾನುಭವಿ) ಅಥವಾ ಅಂತಿಮ ಫಲಾನುಭವಿಯ ಪರವಾಗಿ ನೀಡಿಲ್ಲವೆಂದು ಆಡಳಿತ ವರ್ಗವು ತನ್ನ ಉತ್ತಮ ತಿಳುವಳಿಕೆ ಮತ್ತು ನಂಬಿಕೆಗಳ ಪ್ರಕಾರ ನಿರೂಪಿಸುತ್ತದೆ.

(b) ಗುರುತರವಾಗಿ, ಪ್ರತ್ಯೇಕವಾಗಿ ಅಥವಾ ಒಟ್ಟಾರೆಯಾಗಿ ಯಾವುದೇ ನಿಧಿಯನ್ನು, ಕಂಪನಿಯು, ಯಾವುದೇ ವ್ಯಕ್ತಿಯಿಂದ, ಸಂಸ್ಥೆಯಿಂದ, ವಿದೇಶಿ ಸಂಸ್ಥೆಯಿಂದಲೂ (ನಿಧಿ ನೀಡುವ ಪಾರ್ಟಿಗಳು) ಬರವಣಿಗೆಯಲ್ಲಿ ದಾಖಲಿಸಿದ ಅಥವಾ ದಾಖಲಿಸದ ಒಪ್ಪಂದದಂತೆ, ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಯಾವುದೇ ನಿಧಿ ನೀಡುವ ಪಾರ್ಟಿಗಳಿಂದ(ಅಂತಿಮ ಫಲಾನುಭವಿಗಳು) ಗುರುತಿಸಲ್ಪಟ್ಟ ಇತರೇ ವ್ಯಕ್ತಿ, ಸಂಸ್ಥೆಗಳಿಗೆ, ಸಾಲವಾಗಿಯಾಗಲಿ, ಹೂಡಿಕೆಯಾಗಿ ಆಗಲಿ ಅಥವಾ ಖಾತರಿಯಾಗಿ ಆಗಲಿ, ಭದ್ರತೆಯಾಗಿ ಆಗಲಿ ಅಥವಾ ಆ ತರಹದ ಇತರೇ ಯಾವ ರೂಪದಲ್ಲೇ ಆಗಲಿ ನೀಡಲು ತಾನು ಅಥವಾ ನಿಧಿ ನೀಡುವ ಪಾರ್ಟಿಗಳ ಪರವಾಗಿ (ಅಂತಿಮ ಫಲಾನುಭವಿಗಳು) ಸ್ವೀಕರಿಸಿಲ್ಲವೆಂದು ಆಡಳಿತ ವರ್ಗವು ತನ್ನ ಉತ್ತಮ ತಿಳುವಳಿಕೆ ಮತ್ತು ನಂಬಿಕೆಗಳ ಪ್ರಕಾರ ನಿರೂಪಿಸುತ್ತದೆ.

(c) ಮೇಲ್ಕಂಡ (ಎ) ಮತ್ತು (ಬಿ)ರಲ್ಲಿ ತಿಳಿಸಿರುವಂತೆ, ನಿಯಮ 11(ಇ)ರ ಉಪ ಕಲಮು (i) ಮತ್ತು (ii)ರಡಿಯಲ್ಲಿನ ನಿರೂಪಣೆಗಳ ಯಾವುದೇ ಗುರುತರ ಅಪಹೇಳಿಕೆಗಳಿಂದ ಕೂಡಿವೆಯೆಂದು ನಮ್ಮ ಸಮಂಜಸವಾದ ಪರಿಶೋಧನಾ ಪ್ರಕ್ರಿಯೆಗಳಿಂದ ಮತ್ತು ಯುಕ್ತ ಸಂದರ್ಭಗಳ ಪ್ರಕಾರ ನಮ್ಮ ಗಮನಕ್ಕೆ ಬಂದಿರುವುದಿಲ್ಲ.

v ಪ್ರಸ್ತುತ ವರ್ಷದಲ್ಲಿ ಘೋಷಿಸಿದ ಅಥವಾ ಪಾವತಿಸಿದ ಲಾಭಾಂಶವು ಕಂಪನಿ ಕಾಯಿದೆ 2013ರ ಸೆಕ್ಷನ್ 123ರ ಪರಿಪಾಲನೆಯಲ್ಲಿದೆ.

vi ಪರೀಕ್ಷಾ ತನಿಖೆಗಳನ್ನೊಳಗೊಂಡ ನಮ್ಮ ಪರಿಶೋಧನೆಯಲ್ಲಿ, ಲೆಕ್ಕಪತ್ರಗಳ ನಿರ್ವಹಣೆಯಲ್ಲಿ ಪರಿಶೋಧನಾ ಜಾಡು(ಎಡಿಟ್ ಲಾಗ್) ಲಕ್ಷಣ ಹೊಂದಿರುವ ಲೆಕ್ಕಪತ್ರಗಳ ಸಾಫ್ಟ್‌ವೇರನ್ನು ಹೊಂದಿದ್ದು, ಅದನ್ನು ವರ್ಷವಿಡೀ ಎಲ್ಲಾ ಸಂಬಂಧಿತ ವಹಿವಾಟುಗಳಿಗೆ ಅಳವಡಿಸಿಕೊಳ್ಳಲಾಗಿದೆ. ಮುಂದುವರೆದಂತೆ, ನಮ್ಮ ಪರಿಶೋಧನೆಯಲ್ಲಿ ಪರಿಶೋಧನಾ ಜಾಡಿನಲ್ಲಿ ಹಸ್ತಕ್ಷೇಪ ಮಾಡಿರುವ ಯಾವುದೇ ಪ್ರಕರಣಗಳನ್ನು ನಾವು ಗಮನಿಸಿರುವುದಿಲ್ಲ ಮತ್ತು ಪರಿಶೋಧನಾ ಜಾಡಿನ (ಎಡಿಟ್ ಲಾಗ್) ದಾಖಲೆಗಳನ್ನು ಕಾಪಾಡಿಕೊಳ್ಳಲೋಸುಗ ಕಾನೂನಿನ ರೀತ್ಯ ಸಂರಕ್ಷಿಸಲಾಗಿದೆ.

ಪಿ.ಕೆ. ರುಂಗ್ಟ ಮತ್ತು ಕಂಪನಿ ಪರವಾಗಿ
ಛಾರ್ಟರ್ಡ್ ಅಕೌಂಟೆಂಟ್ಸ್
ಸಂಸ್ಥೆ ನೋಂದಣಿ ಸಂಖ್ಯೆ 003498S

ಸಹಿ/–
ಸಿಎ ಆಶಿಶ್ ರುಂಗ್ಟ
ಪಾಲುದಾರರು
ಸದಸ್ಯತ್ವ ಸಂಖ್ಯೆ–236749

ಸ್ಥಳ : ಬೆಂಗಳೂರು
ದಿನಾಂಕ : 10.11.2025
ಯುಡಿಐಎನ್ – 25236749BMISLK3197

ಪಿ.ಕೆ. ರುಂಗ್ಟ & ಕಂ.
ಛಾರ್ಟರ್ಡ್ ಅಕೌಂಟೆಂಟ್ಸ್

ಸಂ. 598/599, 1ನೇ ಮುಖ್ಯರಸ್ತೆ, 15ನೇ ಅಡ್ಡರಸ್ತೆ, ಹೆಚ್ಎಸ್ಆರ್ ಲೇಔಟ್, ಸೆಕ್ಟರ್–6, ಬೆಂಗಳೂರು – 560102
ದೂರವಾಣಿ : 080–25723074
ಇಮೇಲ್ : capkrungta@gmail.com
ಕಂಪನಿ ರಿಜಿಸ್ಟರ್ ಸಂಖ್ಯೆ : 003498S

ಅನುಬಂಧ – 'ಎ' ಸ್ವತಂತ್ರ ಲೆಕ್ಕ ಪರಿಶೋಧಕರ ವರದಿಗೆ ಅನುಬಂಧ

ದಿ ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತದ ಸದಸ್ಯರಿಗೆ, 31ನೇ ಮಾರ್ಚ್ 2025ಕ್ಕೆ ಕೊನೆಗೊಂಡ ವರ್ಷದ ಏಕಸ್ಥಾಯಿ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳ ಮೇಲೆ ನಮ್ಮ ಸ್ವತಂತ್ರ ಲೆಕ್ಕಪರಿಶೋಧಕರ ವರದಿಯಲ್ಲಿ ಉಲ್ಲೇಖಿಸಲಾದ ಅನುಬಂಧ – 'ಎ'

ನಾವು ಈ ಕೆಳಕಂಡಂತೆ ವರದಿ ಮಾಡುತ್ತೇವೆ.

i. ಎ. (A) ಆಸ್ತಿಗಳು, ಯಂತ್ರೋಪಕರಣಗಳು ಇರುವ ಸ್ಥಳ ಮತ್ತು ಅವುಗಳ ಪರಿಮಾಣಾತ್ಮಕ ವಿವರಗಳನ್ನು ನೀಡುವ ಉಚಿತ ದಾಖಲೆಗಳನ್ನು ಕಂಪನಿಯು ನಿರ್ವಹಿಸಿದೆ.

(B) ಅಮೂರ್ತ ಆಸ್ತಿಗಳ ಪೂರ್ಣ ವಿವರಗಳನ್ನು ನೀಡುವ ಉಚಿತ ದಾಖಲೆಗಳನ್ನು ಕಂಪನಿಯು ಇಟ್ಟಿದೆ.

ಬಿ. ನಮಗೆ ನೀಡಲಾದ ಮಾಹಿತಿಗಳು ಮತ್ತು ವಿವರಣೆಗಳಿಗನುಗುಣವಾಗಿ ಮತ್ತು ಕಂಪನಿಯು ಸ್ಥಾವರ ಮತ್ತು ಯಂತ್ರೋಪಕರಣಗಳ ಭೌತಿಕ ಪರಿಶೀಲನೆಗಾಗಿ ಕ್ರಮಬದ್ಧ ಕಾರ್ಯಸೂಚಿಯನ್ನು ಹೊಂದಿದೆ. ಈ ಸ್ಥಿರಾಸ್ತಿಗಳನ್ನು ಹಂತ ಹಂತವಾಗಿ 3 ವರ್ಷಗಳ ಅವಧಿಯಲ್ಲಿ ಪರಿಶೀಲನೆ ಮಾಡಲಾಗುವುದು. ಈ ಕಾರ್ಯಸೂಚಿಯ ಆಧಾರದಲ್ಲಿ ಕೆಲವು ಸ್ಥಿರಾಸ್ತಿಗಳ ಪರಿಶೀಲನೆಯನ್ನು ಪ್ರಸ್ತುತ ವರ್ಷದಲ್ಲಿ ಮಾಡಲಾಗಿದ್ದು, ಯಾವುದೇ ಗುರುತರ ಅಸಾಂಗತ್ಯಗಳು ಕಂಡು ಬಂದಿರುವುದಿಲ್ಲ. ನಮ್ಮ ಅಭಿಪ್ರಾಯದಲ್ಲಿ, ಈ ಭೌತಿಕ ಪರಿಶೀಲನಾ ಅವಧಿಯು ಸಮಂಜಸವಾಗಿದ್ದು, ಅದು ಕಂಪನಿಯ ಗಾತ್ರ ಮತ್ತು ಆಸ್ತಿಗಳ ಸ್ವರೂಪಕ್ಕನುಗುಣವಾಗಿದೆ.

ಸಿ. ನಮಗೆ ನೀಡಲಾದ ಮಾಹಿತಿಗಳು ಮತ್ತು ವಿರಣೆಗಳಿಗನುವಾಗಿ ಮತ್ತು ದಾಖಲೆಗಳ ನಮ್ಮ ಪರಿಶೀಲನೆಯ ಆಧಾರದಲ್ಲಿ, ಕಂಪನಿಯ ಹೆಸರಿನಲ್ಲಿರುವ ಸ್ಥಿರಾಸ್ತಿಗಳ ಹಕ್ಕುಪತ್ರಗಳು(ಎಲ್ಲಿ ಕಂಪನಿಯು ಗುತ್ತಿಗೆದಾರನಾಗಿದೆಯೋ ಮತ್ತು ಗುತ್ತಿಗೆ ಒಪ್ಪಂದಗಳನ್ನು ಕಂಪನಿಯ ಪರವಾಗಿ ಮಾಡಲಾಗಿದೆಯೋ ಅವುಗಳನ್ನು ಹೊರತು ಪಡಿಸಿದಂತೆ), ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳಲ್ಲಿ ಯಥೋಚಿತವಾಗಿ ತೋರಿಸಲಾಗಿ, ಅವು ಕಂಪನಿಯ ಹೆಸರಿನಲ್ಲಿವೆ.

ಡಿ. ನಮಗೆ ನೀಡಿದ ಮಾಹಿತಿಗಳು ಮತ್ತು ವಿವರಣೆಗಳಿಗನುಗುಣವಾಗಿ ಮತ್ತು ದಾಖಲೆಗಳ ನಮ್ಮ ಪರಿಶೋಧನೆಯ ಆಧಾರದಲ್ಲಿ, ಕಂಪನಿಯು ಪ್ರಸ್ತುತ ವರ್ಷದಲ್ಲಿ ತನ್ನ ಎಲ್ಲಾ ಆಸ್ತಿಗಳು, ಸ್ಥಾವರ ಮತ್ತು ಯಂತ್ರೋಪಕರಣಗಳು ಮತ್ತು ಅಮೂರ್ತ ಆಸ್ತಿಗಳ ಪುನರ್ಮೌಲ್ಯೀಕರಣ ಮಾಡಿಲ್ಲ.

ಇ. ನಮಗೆ ನೀಡಲಾದ ಮಾಹಿತಿಗಳು ಮತ್ತು ವಿವರಣೆಗಳಿಗನುಗುಣವಾಗಿ ಮತ್ತು ದಾಖಲೆಗಳ ಪರಿಶೀಲನೆಯ ಆಧಾರದಲ್ಲಿ ಕಂಪನಿಯ ವಿರುದ್ಧ ಬೇನಾಮಿ ವ್ಯವಹಾರಗಳು (ನಿಷೇಧ) ಕಾಯಿದೆ 1988 (1988ರ 45) ನಿಯಮಗಳಡಿಯಲ್ಲಿ ಕಂಪನಿಯ ವಿರುದ್ಧವಾಗಿ ಯಾವುದೇ ಬೇನಾಮಿ ಆಸ್ತಿಗಳ ಬಗೆಗೆ ನಡವಳಿಕೆಗಳನ್ನು ಪ್ರಾರಂಭಿಸಿರುವುದಾಗಲೀ ಅಥವಾ ಬಾಕಿ ಇರುವ ಪ್ರಕರಣಗಳಾಗಲೀ ಇರುವುದಿಲ್ಲ.

ii. ಎ. ನಮಗೆ ನೀಡಲಾದ ಮಾಹಿತಿಗಳು ಮತ್ತು ವಿವರಣೆಗಳಿಗನುಗುಣವಾಗಿ ಮತ್ತು ದಾಖಲೆಗಳ ನಮ್ಮ ಪರಿಶೋಧನೆಯ ಆಧಾರದಲ್ಲಿ ಸರಕು ಸಾಮಗ್ರಿಗಳ ಭೌತಿಕ ಪರಿಶೀಲನೆಯನ್ನು ಆಡಳಿತ ವರ್ಗವು ಸಮಯೋಚಿತ ಮಧ್ಯಂತರಗಳಲ್ಲಿ ನಡೆಸಿದೆ ಮತ್ತು ಈ ಪರಿಶೀಲನೆಯ ಪ್ರಕ್ರಿಯೆಗಳು ಕಂಪನಿಯ ಗಾತ್ರ ಮತ್ತು ವ್ಯವಹಾರ ಸ್ವರೂಪಕ್ಕನುಗುಣವಾಗಿವೆ.

ಬಿ. ನಮಗೆ ನೀಡಲಾದ ಮಾಹಿತಿಗಳು ಮತ್ತು ವಿವರಣೆಗಳಿಗನುಗುಣವಾಗಿ ಮತ್ತು ದಾಖಲೆಗಳ ನಮ್ಮ ಪರಿಶೋಧನೆಯ ಆಧಾರದಲ್ಲಿ, ಕಂಪನಿಯ ಚಾಲ್ತಿ ಆಸ್ತಿಗಳ ಆಧಾರದ ಮೇಲೆ ಬ್ಯಾಂಕುಗಳು ಮತ್ತು ವಿತ್ತೀಯ ಸಂಸ್ಥೆಗಳ ಐದು ಕೋಟಿ ರೂ.ಗಳಿಗೂ ಮೀರಿದ ಕಾರ್ಯಕಾರಿ ಸಾಲ ಮಿತಿಗಳನ್ನು ಮಂಜೂರು ಮಾಡಿರುವುದಿಲ್ಲ. ಬ್ಯಾಂಕುಗಳು ಮತ್ತು ವಿತ್ತೀಯ ಸಂಸ್ಥೆಗಳಿಗೆ ಕಂಪನಿಯು ಸಲ್ಲಿಸಿರುವ ತ್ರೈಮಾಸಿಕ ರಿಟರ್ನ್ಗಳು ಮತ್ತು ವಿವರಣಾ ಪಟ್ಟಿಗಳು ಕಂಪನಿಯ ಲೆಕ್ಕ ಪುಸ್ತಕಗಳೊಂದಿಗೆ ತಾಳೆ ಹೊಂದುತ್ತವೆ.

iii. ಪ್ರಸ್ತುತ ವರ್ಷದಲ್ಲಿ ಕಂಪನಿಯು ಯಾವುದೇ ಕಂಪನಿ, ಫರ್ಮುಗಳು, ನಿಯಮಿತ ಭಾದ್ಯತಾ ಪಾಲುದಾರಿಕಾ ಸಂಸ್ಥೆಗಳಿಗೆ ಅಥವಾ ಇತರೇ ಪಕ್ಷಾಕಾರರುಗಳಲ್ಲಿ ಯಾವುದೇ ಹೂಡಿಕೆಯನ್ನಾಗಲಿ, ಖಾತರಿಯಾಗಲಿ ಅಥವಾ ಸಾಲರೂಪದಲ್ಲಿನ ಭದ್ರತೆಯಿರುವ ಅಥವಾ ಇಲ್ಲದಿರುವ ಮುಂಗಡಗಳನ್ನಾಗಲಿ ನೀಡಿರುವುದಿಲ್ಲ. ಹಾಗಾಗಿ ಆದೇಶದ ವಾಕ್ಯವೃಂದ 3(iii)ರ ಕಲಮುಗಳು ಕಂಪನಿಗೆ ಅನ್ವಯವಾಗುವುದಿಲ್ಲ.

iv. ಕಂಪನಿಯು ಕಂಪನಿಗಳ ಕಾಯಿದೆ 2013ರ ರೀತ್ಯ ಸಾಲಗಳು, ಖಾತರಿಗಳು ಅಥವಾ ಭದ್ರತೆಗಳೆಡೆ ಅನ್ವಯವಾಗುವ ಸೆಕ್ಷನ್ 185 ಮತ್ತು 186ನ್ನು ಪರಿಪಾಲಿಸಿದೆ. ಮುಂದುವರೆದಂತೆ, ಕಂಪನಿಯು ಯಾವುದೇ ಸಾಲಗಳನ್ನು, ಖಾತರಿಗಳನ್ನು ಅಥವಾ ಭದ್ರತೆಗಳನ್ನು ನೀಡಿರುವುದಿಲ್ಲ ಅಥವಾ ಹೂಡಿಕೆಗಳನ್ನು ಮಾಡಿರುವುದಿಲ್ಲ.

v. ಕಂಪನಿಯು ಸಾರ್ವಜನಿಕರಿಂದ ಯಾವುದೇ ಠೇವಣಿಗಳನ್ನು ಸ್ವೀಕರಿಸಿಲ್ಲ. ಹಾಗಾಗಿ ಆದೇಶದ ಕಲಮು 3(v) ಕಂಪನಿಗೆ ಅನ್ವಯವಾಗುವುದಿಲ್ಲ.

vi. ನಮಗೆ ನೀಡಿದ ಮಾಹಿತಿಗಳು ಮತ್ತು ವಿವರಣೆಗಳಿಗನುಗುಣವಾಗಿ ಕೇಂದ್ರ ಸರ್ಕಾರವು ವೆಚ್ಚ ದಾಖಲೆಗಳ ನಿರ್ವಹಣೆಯನ್ನು ಕಂಪನಿ ಕಾಯಿದೆ 2013ರ ಸೆಕ್ಷನ್ 148(1)ರಡಿಯಲ್ಲಿ ನಿಯಮಿಸಿರುವುದಿಲ್ಲ. ಹಾಗಾಗಿ ವೆಚ್ಚ ದಾಖಲೆಗಳ ನಿರ್ವಹಣೆಯು ಕಂಪನಿಗೆ ಅನ್ವಯವಾಗುವುದಿಲ್ಲ.

vii. ಎ) ನಮಗೆ ನೀಡಿದ ಮಾಹಿತಿಗಳು ಮತ್ತು ವಿವರಣೆಗಳಿಗನುಗುಣವಾಗಿ ಮತ್ತು ಕಂಪನಿಯ ದಾಖಲೆಗಳ ನಮ್ಮ ಪರಿಶೋಧನೆಯ ಆಧಾರದಲ್ಲಿ ಕಂಪನಿಯು ಲೆಕ್ಕ ಪುಸ್ತಕಗಳಲ್ಲಿ ಕಡಿತಗೊಳಿಸಲಾದ/ಒದಗಿಬಂದ ಭವಿಷ್ಯ ನಿಧಿ, ಕಾರ್ಮಿಕರ ರಾಜ್ಯವಿಮೆ, ಆದಾಯ ತೆರಿಗೆ, ಸೀಮಾ ಶುಲ್ಕ, ಸರಕು ಮತ್ತು ಸೇವಾ ತೆರಿಗೆ ಮತ್ತು ಇತರೇ ನಿರ್ವಿವಾದಾತಾತ್ಮಕ ಬಾಕಿಗಳನ್ನು ಪ್ರಸ್ತುತ ವರ್ಷದಲ್ಲಿ ಸಮುಚಿತ ಪ್ರಾಧಿಕಾರಗಳಲ್ಲಿ ಕ್ರಮಬದ್ಧವಾಗಿ ಠೇವಣಿ ಇಟ್ಟಿರುತ್ತದೆ.

ನಮಗೆ ನೀಡಲಾದ ಮಾಹಿತಿಗಳು ಮತ್ತು ವಿವರಣೆಗಳಿಗನುಗುಣವಾಗಿ ನಿರ್ವಿವಾದಾತ್ಮಕವಾಗಿ ಬಾಕಿ ಇರುವ ಭವಿಷ್ಯ ನಿಧಿ, ಕಾರ್ಮಿಕರ ರಾಜ್ಯ ವಿಮೆ, ಆದಾಯ ತೆರಿಗೆ, ಸೀಮಾ ಶುಲ್ಕ ಮತ್ತು ಇತರೇ ಕಾನೂನಾತ್ಮಕ ಬಾಕಿಗಳು 31ನೇ ಮಾರ್ಚ್ 2025ರಂದು ಅವನ್ನು ಪಾವತಿಸಬೇಕಾದ ದಿನಾಂಕದಿಂದ ಆರು ತಿಂಗಳಿಗೂ ಅಧಿಕವಾಗಿ ಬಾಕಿ ಇರುವುದಿಲ್ಲ.

ಬಿ) ನಮಗೆ ನೀಡಲಾದ ಮಾಹಿತಿಗಳು ಮತ್ತು ವಿವರಣೆಗಳಿಗನುಸಾರವಾಗಿ, ವ್ಯಾಜ್ಯಗಳಿಂದಾಗಿ ಠೇವಣಿ ಇಡದಿರುವ ಆದಾಯ ತೆರಿಗೆ, ಸೇವಾ ತೆರಿಗೆ, ಕೇಂದ್ರ ಅಬ್ಕಾರಿ ಸುಂಕದೆಡೆಗಿನ ಬಾಕಿಗಳ ಬಗೆಗೆ ವಿವರಗಳು ಈ ಕೆಳಕಂಡಂತಿವೆ :

ಕ್ರಮ ಸಂಖ್ಯೆ	ಕಾಯಿದೆಯ ಸ್ವರೂಪ	ಬಾಕಿಯಿರುವ ಮೊತ್ತದ ಸ್ವರೂಪ	ತಕರಾರು ಬಾಕಿಯಿರುವ ಸಂಸ್ಥೆ	ಮೊತ್ತ (ಲಕ್ಷಗಳಲ್ಲಿ)	ಷರಾ
1	**2**	**3**	**4**	**5**	**6**
1.	ಆದಾಯ ತೆರಿಗೆ	ಕರ ನಿರ್ಧರಣಾ ವರ್ಷ ಎ) 2010–11 ಬಿ) 2017–18 ಸಿ) 2018–19 ಡಿ) 2020–21	 ಕರ್ನಾಟಕ ಉಚ್ಚ ನ್ಯಾಯಾಲಯ ಆದಾಯ ತೆರಿಗೆ ಕಮೀಷನರ್(ಮೇಲ್ಮನವಿ) ಆದಾಯ ತೆರಿಗೆ ಕಮೀಷನರ್(ಮೇಲ್ಮನವಿ) ಆದಾಯ ತೆರಿಗೆ ಕಮೀಷನರ್(ಮೇಲ್ಮನವಿ)	 ಎ) 776.00 ಬಿ) 256.23 ಸಿ) 24.3 ಡಿ) 16.43	ಇಲಾಖೆಯು ಮೇಲ್ಮನವಿ ಸಲ್ಲಿಸಿದೆ
2.	ಸೇವಾ ತೆರಿಗೆ ಕಾಯಿದೆ	ಎ) 2012–14ರ ಅವಧಿಯಲ್ಲಿನ ಕೆಲವು ಸೆನ್‌ವ್ಯಾಟ್ ಕ್ರೆಡಿಟ್‌ಗಳನ್ನು ನಿರಾಕರಿಸಿರುವುದು ಬಿ) ದಂಡ	ಅಬ್ಕಾರಿ ಸುಂಕ ಕಮೀಷನರ್ (ಮೇಲ್ಮನವಿ) ಬೆಳಗಾಂ	ಎ) 93.32 ಬಿ) 50.88	ಪ್ರಕರಣವು ಕೇಂದ್ರ ಸುಂಕ ಮತ್ತು ಸೇವಾ ತೆರಿಗೆ ಮೇಲ್ಮನವಿ ಮಂಡಳಿಯ ಮುಂದೆ ಬಾಕಿ ಇದೆ
3.	ಸೇವಾ ತೆರಿಗೆ ಕಾಯಿದೆ	ಜುಲೈ 2014 ರಿಂದ ಡಿಸೆಂಬರ್ 15ರ ಅವಧಿಯಲ್ಲಿ ಕಂಪನಿಯು ತೆಗೆದುಕೊಂಡ ವರ್ತುಲ ಷಾಫ್ಟ್‌ನ ನಿರ್ಮಾಣದ ಸೇವೆಗಳ ಮೇಲಿನ ಕೆಲವು ಸೆನ್‌ವ್ಯಾಟ್ ಕ್ರೆಡಿಟ್‌ಗಳನ್ನು ನಿರಾಕರಿಸಿರುವುದು	ಕೇಂದ್ರ ಅಬ್ಕಾರಿ ಸುಂಕ ಕಮೀಷನರ್, ಬೆಳಗಾಂ	258.48	30–1–2017ರಂದು ಕಂಪನಿಯು ತನ್ನ ಉತ್ತರವನ್ನು ಸಲ್ಲಿಸಿದೆ. ವಿಚಾರಣೆಯು ಫೆಬ್ರವರಿ 2017ರಲ್ಲಿ ಮುಕ್ತಾಯಗೊಂಡಿದ್ದು, ಆದೇಶಕ್ಕಾಗಿ ಕಾಯ್ದಿರಿಸಲಾಗಿದೆ.

4.	ಕೇಂದ್ರ ಅಬ್ಕಾರಿ ಸುಂಕ ಕಾಯಿದೆ	1–7–2012 ರಿಂದ 30–06–2017 ರವರೆಗೆ ಚಿನ್ನದ ಮಾರಾಟದ ಮೇಲೆ ವಿನಾಯಿತ ಅಬ್ಕಾರಿ ಸುಂಕವನ್ನು ಪಾವತಿಸಿದ ಬಗೆಗೆ	ಕೇಂದ್ರ ತೆರಿಗೆ ಮತ್ತು ಅಬ್ಕಾರಿ ಸುಂಕ ಕಮೀಷನರ್	2,440.73 ಮತ್ತು ಅನ್ವಯವಾಗುವ ಬಡ್ಡಿ	ಕರ್ನಾಟಕ ಉಚ್ಚನ್ಯಾಯಾಲಯದ ಧಾರವಾಡ ಪೀಠದ ಮುಂದೆ ತಾ. 12.9.2024ರ FRN ಸಂ. 100010/24ರ ಮೇಲ್ಮನವಿಯನ್ನು ಸಲ್ಲಿಸಿದ್ದು ಮೊಬಲಗನ್ನು ಪ್ರತಿಭಟನೆಯಡಿಯಲ್ಲಿ ಪಾವತಿಸಿದೆ.
5.	ಕೇಂದ್ರ ಸೇವಾ ತೆರಿಗೆ ಕಾಯಿದೆ	ಜನವರಿ 2016 ರಿಂದ ಜೂನ್ 2017ರವರೆಗೆ ವರ್ತುಲಷಾಫ್ಟ್‌ನ ನಿರ್ಮಾಣದ ಸೇವೆಗಳ ಮೇಲೆ ಸೆನ್‌ವ್ಯಾಟ್ ಕ್ರೆಡಿಟ್‌ಗಳನ್ನು ತಿರಸ್ಕರಿಸುವುದರ ಬಗೆಗೆ	ಅಬ್ಕಾರಿ ಸುಂಕ ಕಮೀಷನರ್, (ಅಪರ) ಬೆಳಗಾಂ	183.96	ಕಂಪನಿಯು ಕಾರಣ ಕೇಳಿದ ನೋಟೀಸ್‌ಗೆ ಉತ್ತರಿಸಿದೆ. ಪ್ರಕರಣವು ವಿಚಾರಣೆಗಾಗಿ ಬಾಕಿಯಿದೆ.
6.	ಕೇಂದ್ರೀಯ ಸರಕು ಮತ್ತು ಸೇವಾ ತೆರಿಗೆ ಕಾಯಿದೆ 2017	ನಮೂನೆ ಟಿಆರ್‌ಎಎನ್–1 ರಡಿಯಲ್ಲಿ ಕಂಪನಿಯು ಬಳಸಿಕೊಂಡ ಸೆನ್‌ವ್ಯಾಟ್ ಕ್ರೆಡಿಟ್‌ನ್ನು ತಿರಸ್ಕರಿಸಿದ ಬಗೆಗೆ	ಸಹಾಯಕ ಕಮೀಷನರ್ ಕೇಂದ್ರ ತೆರಿಗೆ	24.22	ಕಂಪನಿಯು ತನ್ನ ಉತ್ತರವನ್ನು ಸಲ್ಲಿಸಿದ್ದು, ಅಂತಿಮ ತೀರ್ಪು ಬಾಕಿಯಿದೆ
7.	ಕೇಂದ್ರ ಸರಕು ಮತ್ತು ಸೇವಾ ತೆರಿಗೆ ಕಾಯಿದೆ 2017	ರಾಜಧನ, ಡಿಎಂಎಫ್ ಮತ್ತು ಎನ್‌ಎಂಇಟಿ ಮೇಲಿನ ಸರಕು ಮತ್ತು ಸೇವಾ ತೆರಿಗೆ	ಕರ್ನಾಟಕ ರಾಜ್ಯ ಉಚ್ಚನ್ಯಾಯಾಲಯ ಧಾರವಾಡ ಪೀಠ	641.73	ಕಂಪನಿಯು ರಿಟ್ ಅರ್ಜಿಯನ್ನು ದಾಖಲಿಸಿದ್ದು, ಅಂತಿಮ ತೀರ್ಪು ಬಾಕಿಯಿದೆ.

viii. ನಮಗೆ ನೀಡಲಾದ ಮಾಹಿತಿಗಳು ಮತ್ತು ವಿವರಣೆಗಳಿಗನುಸಾರವಾಗಿ ಮತ್ತು ನಮ್ಮ ಪರಿಶೀಲನೆಯ ಆಧಾರದಲ್ಲಿ, ಪ್ರಸ್ತುತ ವರ್ಷದ ಆದಾಯ ತೆರಿಗೆ ನಿರ್ಧಾರಣೆಗಳಲ್ಲಿ, ಹಿಂದಿನ ವರ್ಷಗಳಲ್ಲಿ ದಾಖಲಿಸಿಲ್ಲದ ಆದಾಯಗಳನ್ನು ಬಿಟ್ಟುಕೊಡುವ ಅಥವಾ ಬಹಿರಂಗಗೊಳಿಸಿರುವ ಯಾವುದೇ ವ್ಯವಹಾರಗಳಿರುವುದಿಲ್ಲ.

ix. ಎ) ನಮಗೆ ನೀಡಿದ ಮಾಹಿತಿಗಳು ಮತ್ತು ವಿವರಣೆಗಳಿಗನುಸಾರವಾಗಿ ಮತ್ತು ದಾಖಲೆಗಳ ನಮ್ಮ ಪರಿಶೋಧನೆಯ ಆಧಾರದಲ್ಲಿ, ಕಂಪನಿಯು ಯಾವುದೇ ಸಾಲಗಾರರಿಂದ ಸಾಲವನ್ನು ಪಡೆದಿಲ್ಲ. ಹಾಗಾಗಿ ಆದೇಶದ ಈ ಕಲಮು ಕಂಪನಿಗೆ ಅನ್ವಯವಾಗುವುದಿಲ್ಲ.

ಬಿ) ಯಾವುದೇ ಬ್ಯಾಂಕ್ ಅಥವಾ ವಿತ್ತೀಯ ಸಂಸ್ಥೆಗಳು ಅಥವಾ ಸಾಲ ನೀಡಿಕಾ ಸಂಸ್ಥೆಗಳು, ಕಂಪನಿಯನ್ನು ಉದ್ದೇಶಪೂರ್ವಕ ಸುಸ್ತಿದಾರರೆಂದು ಘೋಷಿಸಿಲ್ಲ

ಸಿ) ನಮಗೆ ನೀಡಿದ ಮಾಹಿತಿಗಳು ಮತ್ತು ವಿವರಣೆಗಳಿಗನುಸಾರವಾಗಿ ಮತ್ತು ಕಂಪನಿಯ ದಾಖಲೆಗಳ ನಮ್ಮ ಪರಿಶೋಧನೆಯ ಆಧಾರದಲ್ಲಿ, ಕಂಪನಿಯ ಯಾವುದೇ ಸಾವಧಿ ಸಾಲಗಳನ್ನು ಹೊಂದಿಲ್ಲ.

ಡಿ) ನಮಗೆ ನೀಡಲಾದ ಮಾಹಿತಿಗಳು ಮತ್ತು ವಿವರಣೆಗಳಿಗನುಗುಣವಾಗಿ ಮತ್ತು ಕಂಪನಿಯ ದಾಖಲೆಗಳ ನಮ್ಮ ಪರಿಶೋಧನೆಯ ಆಧಾರದಲ್ಲಿ, ಅಲ್ಪಾವಧಿ ಆಧಾರದಲ್ಲಿ ಸ್ವೀಕರಿಸಲಾದ ಯಾವುದೇ ಫಂಡುಗಳನ್ನು ದೀರ್ಘಾವಧಿ ಉದ್ದೇಶಕ್ಕಾಗಿ ಬಳಸಿಕೊಂಡಿಲ್ಲ.

ಇ) ಕಂಪನಿಯು ಯಾವುದೇ ಅಧೀನ ಸಂಸ್ಥೆಗಳು, ಸಹವರ್ತಿ ಸಂಸ್ಥೆಗಳು ಅಥವಾ ಜಂಟಿ ಉದ್ಯಮಗಳನ್ನು ಹೊಂದಿರುವುದಿಲ್ಲ. ಹಾಗಾಗಿ ಆದೇಶದ ಪ್ಯಾರಾ 3 (x) (e) ಮತ್ತು (f) ಕಂಪನಿಗೆ ಅನ್ವಯವಾಗುವುದಿಲ್ಲ.

x. ಎ) ಕಂಪನಿಯು ಪ್ರಾಥಮಿಕ ಸಾರ್ವಜನಿಕ ನೀಡಿಕೆ ಅಥವಾ ಮುಂದುವರೆದ ಸಾರ್ವಜನಿಕ ನೀಡಿಕೆಗಳ (ಸಾಲಪತ್ರಗಳೂ ಸೇರಿದಂತೆ) ರೂಪದಲ್ಲಿ ಯಾವುದೇ ಹಣವನ್ನು ಪ್ರಸ್ತುತ ವರ್ಷದಲ್ಲಿ ಸ್ವೀಕರಿಸಿಲ್ಲ. ಹಾಗಾಗಿ ಆದೇಶದ ಪ್ಯಾರಾ 3 (x) (a) ಕಂಪನಿಗೆ ಅನ್ವಯವಾಗುವುದಿಲ್ಲ.

ಬಿ) ಪ್ರಸ್ತುತ ವರ್ಷದಲ್ಲಿ ಕಂಪನಿಯು ಯಾವುದೇ ಷೇರುಗಳನ್ನು ಅಥವಾ ಪರಿವರ್ತನಾ ಸಾಲಪತ್ರಗಳನ್ನು (ಸಂಪೂರ್ಣವಾಗಿ ಅಥವಾ ಭಾಗಶಃ ಪರಿವರ್ತನೆಗೊಳ್ಳಲು ಆಯ್ಕೆಯುಳ್ಳವು) ಪ್ರಾಶಸ್ತ್ಯ ನೀಡಿಕೆ ಅಥವಾ ಖಾಸಗಿ ನೀಡಿಕೆ ಆಧಾರದಲ್ಲಿ ನೀಡಿಲ್ಲ. ಹಾಗಾಗಿ ಆದೇಶದ ಪ್ಯಾರಾ ಸಂಖ್ಯೆ 3 (x) (b) ಕಂಪನಿಗೆ ಅನ್ವಯವಾಗುವುದಿಲ್ಲ

xi. ಎ) ನಮಗೆ ನೀಡಿದ ಮಾಹಿತಿಗಳು ಮತ್ತು ವಿವರಣೆಗಳಿಗನುಗುಣವಾಗಿ ಕಂಪನಿಯಿಂದ ಅಧಿಕಾರಿಗಳು ಅಥವಾ ನೌಕರರ ಮೇಲೆ ಅಥವಾ ಅವರಿಂದ ಕಂಪನಿಯ ಮೇಲೆ ಯಾವುದೇ ವಂಚನೆಗಳನ್ನು ಪ್ರಸ್ತುತ ವರ್ಷದಲ್ಲಿ ನಾವು ಗಮನಿಸಿಲ್ಲ ಅಥವಾ ವರದಿ ಮಾಡಿಲ್ಲ

ಬಿ) ಪ್ರಸ್ತುತ ವರ್ಷದಲ್ಲಿ ಮತ್ತು ಈ ವರದಿಯ ದಿನಾಂಕದವರೆಗೂ ಕಂಪನಿ ಕಾಯಿದೆಯ ಸೆಕ್ಷನ್ 143ರ ಉಪಸೆಕ್ಷನ್(12)ರ ರೀತ್ಯ, ಯಾವುದೇ ವರದಿಯನ್ನು ಕಂಪನಿಗಳ (ಪರಿಶೋಧನೆ ಮತ್ತು ಪರಿಶೋಧಕರು) ನಿಯಮ 2013ರ ನಿಯಮ 13ರಡಿಯಲ್ಲಿ ನಮೂನೆ ಎಡಿಟಿ–4 ರಲ್ಲಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿಲ್ಲ.

ಸಿ) ಆಡಳಿತ ವರ್ಗವು ನಮಗೆ ನೀಡಿದ ಮಾಹಿತಿ ಮತ್ತು ವಿವರಣೆಗಳಿಗನುಗುಣವಾಗಿ ಕಂಪನಿಯು ಯಾವುದೇ ಮುನ್ನಚ್ಚರಿಕಾ ದೂರುಗಳನ್ನು ಸ್ವೀಕರಿಸಿಲ್ಲ.

xii. ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ನೀಡಲಾದ ಮಾಹಿತಿ ಮತ್ತು ವಿವರಣೆಗಳಿಗನುಸಾರವಾಗಿ ಕಂಪನಿಯು ನಿಧಿ ಕಂಪನಿಯಾಗಿಲ್ಲದಿರುವುದರಿಂದ ಆದೇಶದ ಪ್ಯಾರಾ ಸಂಖ್ಯೆ 3(xii) ಅನ್ವಯವಾಗುವುದಿಲ್ಲ.

xiii. ಲೆಕ್ಕ ಪರಿಶೋಧನಾ ಪ್ರಕ್ರಿಯೆಗಳ ಆಧಾರದ ಮೇಲೆ ಮತ್ತು ನಮಗೆ ನೀಡಲಾದ ಮಾಹಿತಿಗಳು ಮತ್ತು ವಿವರಣೆಗಳ ಆಧಾರದ ಮೇಲೆ ಸಂಬಂಧಿತ ಪಕ್ಷಾಕಾರರುಗಳ ಜತೆಗಿನ ಎಲ್ಲಾ ವ್ಯವಹಾರಗಳನ್ನು ಕಂಪನಿ ಕಾಯಿದೆ 2013ರ ಸೆಕ್ಷನ್ 177 ಮತ್ತು 188ರ ಪ್ರಕಾರ ನಡೆಸಲಾಗಿದೆ ಮತ್ತು ಅನ್ವಯವಾಗುವ ವ್ಯವಹಾರ ವಿವರಗಳನ್ನು ಅನ್ವಯವಾಗುವ ಲೆಕ್ಕಶಾಸ್ತ್ರ ಮಾನದಂಡಗಳಿಗನುಸಾರವಾಗಿ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳಲ್ಲಿ ತೋರಿಸಲಾಗಿದೆ.

xiv. ಎ) ನಮ್ಮ ಅಭಿಪ್ರಾಯದಲ್ಲಿ ಕಂಪನಿಯು ತನ್ನ ಗಾತ್ರ ಮತ್ತು ವ್ಯವಹಾರ ಸ್ವರೂಪಕ್ಕನುಗುಣವಾಗಿ ಆಂತರಿಕ ಲೆಕ್ಕಪರಿಶೋಧನಾ ವ್ಯವಸ್ಥೆಯನ್ನು ಹೊಂದಿದೆ.

ಬಿ) ಪರಿಶೋಧನಾ ಅವಧಿಯಲ್ಲಿ ಮತ್ತು ಈ ದಿನಾಂಕದವರೆಗೂ ಕಂಪನಿಗೆ ನೀಡಲಾದ ಆಂತರಿಕ ಲೆಕ್ಕ ಪರಿಶೋಧನಾ ವರದಿಗಳನ್ನು, ನಾವು ನಮ್ಮ ಲೆಕ್ಕಪರಿಶೋಧನೆಯ ಸ್ವರೂಪ ಸಾಮಯಿಕತೆ ಮತ್ತು ವ್ಯಾಪ್ತಿಯನ್ನು ನಿರ್ಧರಿಸಲೋಸುಗ ಪರಿಗಣಿಸಿದ್ದೇವೆ.

xv. ನಮಗೆ ನೀಡಲಾದ ಮಾಹಿತಿಗಳು ಮತ್ತು ವಿವರಣೆಗಳಿಗನುಸಾರವಾಗಿ ಮತ್ತು ಕಂಪನಿಯ ದಾಖಲೆಗಳ ನಮ್ಮ ಪರಿಶೋಧನೆಯ ಆಧಾರದಲ್ಲಿ ಕಂಪನಿಯು ನಿರ್ದೇಶಕರೊಂದಿಗೆ ಅಥವಾ ಅವರಿಗೆ ಸಂಬಂಧಿಸಿದ ವ್ಯಕ್ತಿಗಳೊಂದಿಗೆ ಯಾವುದೇ ನಗದಲ್ಲದ ವ್ಯವಹಾರಗಳನ್ನು ನಡೆಸಿಲ್ಲ. ಹಾಗಾಗಿ ಕಂಪನಿಯ ಕಾಯಿದೆ 2013ರ ಸೆಕ್ಷನ್ 192 ಕಂಪನಿಗೆ ಅನ್ವಯವಾಗುವುದಿಲ್ಲ.

xvi. ಕಂಪನಿಯು ಭಾರತೀಯ ರಿಜ಼ರ್ವ್ ಬ್ಯಾಂಕ್ ಕಾನೂನು 1934ರ ಸೆಕ್ಷನ್ 45–IA ರೀತ್ಯ ನೋಂದಣಿಯಾಗಬೇಕಾಗಿಲ್ಲ.

xvii. ಕಂಪನಿಯು ಪ್ರಸ್ತುತ ವರ್ಷದಲ್ಲಿ ಮತ್ತು ನಿಕಟ ಪೂರ್ವ ವರ್ಷದಲ್ಲಿ ನಗದು ನಷ್ಟವನ್ನು ಅನುಭವಿಸಿಲ್ಲ.

xviii. ಪ್ರಸ್ತುತ ವರ್ಷದಲ್ಲಿ ಶಾಸನಬದ್ಧ ಲೆಕ್ಕ ಪರಿಶೋಧಕರ ಯಾವುದೇ ರಾಜೀನಾಮೆಯೂ ಇರುವುದಿಲ್ಲ.

xix ನಮಗೆ ನೀಡಲಾದ ಮಾಹಿತಿಗಳು ಮತ್ತು ವಿವರಣೆಗಳಿಗನುಸಾರವಾಗಿ ಮತ್ತು ಕಂಪನಿಯ ದಾಖಲೆಗಳ ನಮ್ಮ ಪರಿಶೋಧನೆಯ ಆಧಾರದಲ್ಲಿ ಆರ್ಥಿಕ ಅನುಪಾತಗಳು, ಆರ್ಥಿಕ ಆಸ್ತಿಗಳು, ಅವುಗಳ ವಯೋಮಾನ ಮತ್ತು ಅವುಗಳನ್ನು ಸ್ವೀಕರಿಸಲಿರುವ ದಿನಾಂಕ ಮತ್ತುಆರ್ಥಿಕ ದಾಯಿತ್ವಗಳ ಪಾವತಿ ಮತ್ತು ಇತರೇ ಮಾಹಿತಿಗಳು, ಆರ್ಥಿಕ ಸ್ಥಿತಿ ವಿವರಣಾ ಪಟ್ಟಿ, ನಿರ್ದೇಶಕ ಮಂಡಳಿಯ ಬಗೆಗೆ ಮತ್ತು ಆಡಳಿತ ವರ್ಗದ ಯೋಜನೆಗಳೂ ಸೇರಿದಂತೆ ಲೆಕ್ಕ ಪರಿಶೋಧಕರ ತಿಳುವಳಿಕೆಯಲ್ಲಿ, ಲೆಕ್ಕ ಪರಿಶೋಧಕರ ವರದಿಯ ದಿನಾಂಕದಂದು ಕಂಪನಿಯ ಸ್ಥಿತಿ ವಿವರಣಾ ಪಟ್ಟಿಯ ದಿನದಂದಿನ ಒಂದು ವರ್ಷ ಅವಧಿಯೊಳಗೆ ಪೂರೈಸಬೇಕಿರುವ ತನ್ನ ದಾಯಿತ್ವಗಳನ್ನು ಕಂಪನಿಯು ಪೂರೈಸುತ್ತದೆ ಎಂಬುದರ ಬಗೆಗೆ ಯಾವುದೇ ಗುರುತರ ಅನಿಶ್ಚಿತತೆಯೂ ಇರುವುದಿಲ್ಲ.

xx. ಎ) ಸಾಂಸ್ಥಿಕ, ಸಾಮಾಜಿಕ ಜವಾಬ್ದಾರಿಯೆಡೆಗೆ ವ್ಯಯ ಮಾಡಿಲ್ಲದ ಯಾವುದೂ ಮೊಬಲಗು ಇರುವುದಿಲ್ಲ. ಹಾಗಾಗಿ ಆದೇಶದ ಕಲಮು 3(xx) ಈ ವರ್ಷಕ್ಕೆ ಅನ್ವಯವಾಗುವುದಿಲ್ಲ.

ಬಿ) ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ನೀಡಲಾದ ಮಾಹಿತಿಗಳು ಮತ್ತು ವಿವರಣೆಗಳಿಗನುಗುಣವಾಗಿ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿಯ ಪ್ರತಿಯೊಂದು ಫಲಾನುಭವಿಗಳಿಂದ ವರ್ಷದಲ್ಲಿ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿಯೆಡೆಗೆ ಬಳಸಿಕೊಳ್ಳಲಾದ ಹಣದ ಬಗೆಗಿನ ಸರ್ಟಿಫಿಕೇಟುಗಳನ್ನು ಸಿಎಸ್ಆರ್–1 ನಮೂನೆಯಲ್ಲಿ ಪಡೆದುಕೊಂಡಿಲ್ಲ. ಹಿಂದಿನ ವರ್ಷದಲ್ಲಿಯೂ ಸಹ ಬಳಸಿಕೊಳ್ಳಲಾದ ಹಣದ ಬಗೆಗಿನ ಸರ್ಟಿಫಿಕೇಟುಗಳನ್ನು ಕಂಪನಿಯು ಪಡೆದುಕೊಂಡಿಲ್ಲದಿರುವುದರಿಂದ, ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿಯೆಡೆಗೆ ವರ್ಷದಲ್ಲಿ ವ್ಯಯಿಸಬೇಕಿರುವ ಮೊಬಲಗಿನ ಯಾವುದೇ ಕೊರತೆಯಿದ್ದಲ್ಲಿ, ಅದನ್ನು ನಿಖರತೆಯಿಂದ ಪರಿಮಾಣೀಕರಿಸಲು ನಮಗೆ ಸಾಧ್ಯವಿಲ್ಲ. ನಮ್ಮ ಪರಿಶೋಧನೆಗೆ ಒಳಪಟ್ಟ ವರ್ಷದಲ್ಲಿ ಮುಂದುವರೆಯುತ್ತಿರುವ ಪ್ರಾಯೋಜನೆಗಳು ಅಥವಾ ಅದರ ಅತಿರಿಕ್ತ ಪ್ರಾಯೋಜನೆಗಳೆಡೆಗೆ ವ್ಯಯಿಸಲಾಗಿಲ್ಲದ ಮೊಬಲಗಿನ ಬಗೆಗೆ, ಕಂಪನಿ ಕಾಯಿದೆ 2013ರ ಸೆಕ್ಷನ್ 135(5)ರಡಿಯಲ್ಲಿ ಟೀಕೆ ಮಾಡಲು ನಮಗೆ ಸಾಧ್ಯವಿಲ್ಲ.

ಪಿ.ಕೆ. ರುಂಗ್ಟ ಮತ್ತು ಕಂಪನಿ ಪರವಾಗಿ
ಛಾರ್ಟರ್ಡ್ ಅಕೌಂಟೆಂಟ್ಸ್
ಸಂಸ್ಥೆ ನೋಂದಣಿ ಸಂಖ್ಯೆ 003498S

ಸಹಿ/–
ಸಿಎ ಆಶಿಶ್ ರುಂಗ್ಟ
ಪಾಲುದಾರರು
ಸದಸ್ಯತ್ವ ಸಂಖ್ಯೆ–236749

ಸ್ಥಳ : ಬೆಂಗಳೂರು
ದಿನಾಂಕ : 10.11.2025
ಯುಡಿಐಎನ್ – 25236749BMISLK3197

ಪಿ.ಕೆ. ರುಂಗ್ಟ & ಕಂ.
ಛಾರ್ಟರ್ಡ್ ಅಕೌಂಟೆಂಟ್ಸ್

ಸಂ. 598/599, 1ನೇ ಮುಖ್ಯರಸ್ತೆ, 15ನೇ ಅಡ್ಡರಸ್ತೆ, ಹೆಚ್ಎಸ್ಆರ್ ಲೇಔಟ್, ಸೆಕ್ಟರ್–6, ಬೆಂಗಳೂರು – 560102
ದೂರವಾಣಿ : 080–25723074
ಇಮೇಲ್ : capkrungta@gmail.com
ಕಂಪನಿ ರಿಜಿಸ್ಟರ್ ಸಂಖ್ಯೆ : 003498S

ಅನುಬಂಧ – 'ಬಿ'

ಲೆಕ್ಕಪರಿಶೋಧಕರ ವರದಿಯಲ್ಲಿ ಉಲ್ಲೇಖಿಸಿರುವ ಅನುಬಂಧ – ಬಿ
ಕಂಪನಿ ಕಾಯಿದೆ ಸೆಕ್ಷನ್ 143(3)ರಡಿಯಲ್ಲಿನ ಕಲಂ (i)ರಡಿಯಲ್ಲಿ ಆಂತರಿಕ ಆರ್ಥಿಕ ನಿಯಂತ್ರಕಗಳ ಬಗೆಗಿನ ವರದಿ

1. 31ನೇ ಮಾರ್ಚ್ 2025ರಂದಿನ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳ ಪರಿಶೋಧನೆಯ ಜತೆಗೆ ನಾವು ಕಂಪನಿಯ ಇಂಡ್ ಎಎಸ್ ಆಧಾರಿತ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳ ವರದಿಗಾರಿಕೆಯ ಮೇಲೆ ಆಂತರಿಕ ಆರ್ಥಿಕ ನಿಯಂತ್ರಕಗಳನ್ನು ಪರಿಶೋಧಿಸಿದ್ದೇವೆ.

ಆಂತರಿಕ ಆರ್ಥಿಕ ನಿಯಂತ್ರಕಗಳ ಬಗೆಗೆ ಆಡಳಿತ ವರ್ಗದ ಜವಾಬ್ದಾರಿ:

2. ಭಾರತೀಯ ಛಾರ್ಟರ್ಡ್ ಅಕೌಂಟೆಂಟ್ಸ್ ಸಂಸ್ಥೆ(ಐಸಿಎಐ)ರವರು ಹೊರಡಿಸಿರುವ ಮಾರ್ಗದರ್ಶಿಯ ಪ್ರಕಾರ, ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳ ವರದಿಗಾರಿಕೆಯಲ್ಲಿ ಆಂತರಿಕ ಆರ್ಥಿಕ ನಿಯಂತ್ರಕಗಳನ್ನು ಸ್ಥಾಪಿಸಿ ಅವುಗಳನ್ನು ನಿರ್ವಹಿಸುವುದು ಆಡಳಿತ ವರ್ಗದ ಜವಾಬ್ದಾರಿಯಾಗಿದೆ. ಈ ಜವಾಬ್ದಾರಿಯಲ್ಲಿ ಸಾಕಷ್ಟು ಆಂತರಿಕ ಆರ್ಥಿಕ ನಿಯಂತ್ರಕಗಳ ವಿನ್ಯಾಸ, ಅಳವಡಿಕೆ ಮತ್ತು ಅವುಗಳ ಸಮರ್ಪಕ ನಿರ್ವಹಣೆಯೂ ಒಳಗೊಂಡಂತೆ, ಕಂಪನಿಯ ನೀತಿಗಳು, ಆಸ್ತಿಗಳ ರಕ್ಷಣೆ ಹಾಗೂ ವಂಚನೆ ಮತ್ತು ತಪ್ಪುಗಳಿಂದ ಹೊರತಾದ ಮತ್ತು ನಿಖರವಾಗಿ ಮತ್ತು ಪರ್ಯಾಪ್ತವಾಗಿ ಮತ್ತು ಕಂಪನಿ ಕಾಯಿದೆ 2013ರ ಪ್ರಕಾರ ಆರ್ಥಿಕ ಮಾಹಿತಿಗಳ ಸಾಮಯಿಕ ತಯಾರಿಕೆಯೂ ಒಳಗೊಂಡಿರುತ್ತವೆ.

ಲೆಕ್ಕ ಪರಿಶೋಧಕರ ಜವಾಬ್ದಾರಿ :

3. ಆರ್ಥಿಕ ವರದಿಗಾರಿಕೆಯ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಕಗಳ ಬಗೆಗೆ, ನಮ್ಮ ಲೆಕ್ಕ ಪರಿಶೋಧನೆಯ ಆಧಾರದ ಮೇಲೆ, ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ನಮ್ಮ ಜವಾಬ್ದಾರಿಯಾಗಿದೆ. ಭಾರತೀಯ ಛಾರ್ಟರ್ಡ್ ಅಕೌಂಟೆಂಟ್ಸ್ ಸಂಸ್ಥೆಯವರು ಆರ್ಥಿಕ ವರದಿಗಾರಿಕೆಯ ಮೇಲಿನ ಆಂತರಿಕ ನಿಯಂತ್ರಕಗಳ ಬಗೆಗೆ ಹೊರಡಿಸಿದ ಮಾರ್ಗದರ್ಶಿಕೆಗಳ ಪ್ರಕಾರ ನಾವು ನಮ್ಮ ಲೆಕ್ಕ ಪರಿಶೋಧನೆಯನ್ನು ನಡೆಸಿದ್ದೇವೆ ಮತ್ತು ಅವರು ಹೊರಡಿಸಿದ ಕಂಪನಿಯ ಕಾಯಿದೆ 2013ರ ಸೆಕ್ಷನ್ 143(10)ರಡಿಯಲ್ಲಿ ಹೊರಡಿಸಲಾಗಿದೆಯೆಂದು ಭಾವಿಸಿಲಾದ ಲೆಕ್ಕ ಪರಿಶೋಧನಾ ಮಾನದಂಡಗಳ ಪ್ರಕಾರ, ಅವು ಅನ್ವಯವಾಗುವಷ್ಟರ ಮಟ್ಟಿಗೆ ಆಂತರಿಕ ಆರ್ಥಿಕ ನಿಯಂತ್ರಕಗಳ ಪರಿಶೋಧನೆಯನ್ನು ನಾವು ನಡೆಸಿದ್ದೇವೆ. ಈ ಮಾನದಂಡಗಳು ಮತ್ತು ಮಾರ್ಗದರ್ಶಿಗಳು ನಾವು ನೈತಿಕತೆಗಳನ್ನು ಪಾಲಿಸಬೇಕೆಂದು ಅವಶ್ಯಕಗೊಳಿಸುತ್ತವೆ ಮತ್ತು ನಾವು ನಮ್ಮ ಪರಿಶೋಧನೆಯನ್ನು ಆರ್ಥಿಕ ನಿಯಂತ್ರಕಗಳು ಸಾಕಷ್ಟು ಇವೆಯೇ ಮತ್ತು ಗುರುತರ ವಿಚಾರಗಳಲ್ಲಿ ಪರಿಣಾಮಕಾರಿಯಾಗಿ ಅವು ಕಾರ್ಯ ನಿರ್ವಹಿಸುತ್ತಿವೆಯೇ ಎಂಬುದರ ಬಗೆಗೆಯೂ ಸಾಕಷ್ಟು ಆಶ್ವಾಸನೆ ಪಡೆಯುವುದನ್ನು ಅವಶ್ಯಕಗೊಳಿಸುತ್ತವೆ.

4. ಆರ್ಥಿಕ ವರದಿಗಾರಿಕೆಯ ಮೇಲೆ ಆಂತರಿಕ ಆರ್ಥಿಕ ನಿಯಂತ್ರಣಗಳ ಪರ್ಯಾಪ್ತತೆ ಮತ್ತು ಅವುಗಳ ನಿರ್ವಹಣಾ ಫಲೋತ್ಪಾದಕತೆಗಳ ಬಗೆಗೆ ಪರಿಶೋಧನಾ ಸಾಕ್ಷಿಗಳನ್ನು ಪಡೆಯುವುದಕ್ಕಾಗಿ ಪ್ರಕ್ರಿಯೆಗಳನ್ನು ನಡೆಸುವುದನ್ನು ನಮ್ಮ ಪರಿಶೋಧನೆಯು ಒಳಗೊಂಡಿದೆ. ಆರ್ಥಿಕ ವರದಿಗಾರಿಕೆಯ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಣಗಳ ನಮ್ಮ ಪರಿಶೋಧನೆಯು, ಆ ನಿಯಂತ್ರಣಗಳನ್ನು ಅರ್ಥೈಸಿಕೊಂಡು, ಗುರುತರ ದೌರ್ಬಲ್ಯಗಳು ಇವೆಯೇ ಎಂದು ನಿರ್ಧರಿಸಿಕೊಂಡು ಅವುಗಳ ಪರೀಕ್ಷೆ, ವಿನ್ಯಾಸ ಮತ್ತು ನಿರ್ವಹಣಾ ಫಲೋತ್ಪಾದಕತೆಗಳ ಮೌಲ್ಯೀಕರಣವನ್ನು ಒಳಗೊಂಡಿರುತ್ತದೆ

5. ಆರ್ಥಿಕ ವರದಿಗಾರಿಕೆಯ ಮೇಲೆ ಕಂಪನಿಯ ಆಂತರಿಕ ಆರ್ಥಿಕ ನಿಯಂತ್ರಕಗಳು, ಪರಿಶೋಧನಾ ಸಾಕ್ಷ್ಯಗಳು ಸಾಕಷ್ಟಿವೆ ಮತ್ತು ಸೂಕ್ತವಾಗಿವೆ ಎಂದು ನಾವು ನಂಬುತ್ತೇವೆ ಹಾಗೂ ಅವು ನಮ್ಮ ಪರಿಶೋಧನಾ ವರದಿಯ ನೀಡುವಿಕೆಯಲ್ಲಿ, ಆಂತರಿಕ ಆರ್ಥಿಕ ನಿಯಂತ್ರಕಗಳ ಸೂಕ್ತತೆಯ ಬಗೆಗೆ ಅಭಿಪ್ರಾಯಕ್ಕೆ ಬರಲು ಅವು ಆಧಾರ ಒದಗಿಸುತ್ತವೆ ಎಂದು ನಾವು ನಂಬಿರುತ್ತೇವೆ.

ಆರ್ಥಿಕ ವರದಿಗಾರಿಕೆಯ ಮೇಲೆ ಆಂತರಿಕ ಆರ್ಥಿಕ ನಿಯಂತ್ರಕಗಳ ಅರ್ಥ :

6. ಒಂದು ಕಂಪನಿಯ ಆಂತರಿಕ ಆರ್ಥಿಕ ನಿಯಂತ್ರಕಗಳು, ಆರ್ಥಿಕ ವರದಿಗಾರಿಕೆಯ ಮೇಲೆ ವಿನ್ಯಾಸಗೊಳಿಸಲಾದ ಪ್ರಕ್ರಿಯೆಯಾಗಿದ್ದು, ಅವು ಬಾಹ್ಯ ಉದ್ದೇಶಗಳಿಗಾಗಿ ಸಾಮಾನ್ಯವಾಗಿ ಅಂಗೀಕೃತಗೊಂಡ ಲೆಕ್ಕಾರ ಶಾಸ್ತ್ರದ ತತ್ವಗಳಿಗನುಗುಣವಾಗಿಯೇ ಎಂಬುದರ ಬಗೆಗೆ ಯುಕ್ತ ಆಶ್ವಾಸನೆ ನೀಡುವುದೇ ಆಗಿದೆ. ಆರ್ಥಿಕ ವರದಿಗಾರಿಕೆಯ ಮೇಲೆ ಆಂತರಿಕ ಆರ್ಥಿಕ ನಿಯಂತ್ರಕಗಳು ಆ ನೀತಿಗಳನ್ನು ಒಳಗೊಂಡಿದ್ದು ಮತ್ತು ಈ ಪ್ರಕ್ರಿಯೆಗಳನ್ನು ಒಳಗೊಂಡಿದೆ. (1) ಕಂಪನಿಯ ಆಸ್ತಿಗಳ ಬಗೆಗಿನ ನಿಖರವಾದ ಮತ್ತು ನ್ಯಾಯೋಚಿತವಾದ ವ್ಯವಹಾರಗಳನ್ನು ತೋರಿಸುವ ದಾಖಲೆಗಳ ಸಮರ್ಪಕ ನಿರ್ವಹಣೆ. (2) ಸಾಮಾನ್ಯವಾಗಿ ಅಂಗೀಕೃತಗೊಂಡ ಲೆಕ್ಕಾಚಾರ ಶಾಸ್ತ್ರಗಳ ತತ್ವಗಳಿಗನುಗುಣವಾಗಿ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳನ್ನು ತಯಾರಿಸಲಾಗಿದೆ ಎಂಬ ಸೂಕ್ತ ಆಶ್ವಾಸನೆ ನೀಡುವ ಮತ್ತು ಕಂಪನಿಯ ಹಣ ಸ್ವೀಕೃತಿ ಮತ್ತು ವೆಚ್ಚಗಳನ್ನು ಕಂಪನಿಯ ಆಡಳಿತ ವರ್ಗ ಮತ್ತು ನಿರ್ದೇಶಕರ ಅಧಿಕರಣಗಳ ಮೇಲೆಯೇ ಮಾಡುವುದು. (3) ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳ ಮೇಲೆ ಗುರುತರ ಪರಿಣಾಮ ಬೀರುವಂತಹ ಕಂಪನಿಯ ಆಸ್ತಿಗಳ ಅನಧಿಕೃತ ಗಳಿಸುವಿಕೆ, ಬಳಕೆ ಮತ್ತು ಮಾರಾಟ ಮಾಡುವಿಕೆಗಳನ್ನು ಸಮಯಕ್ಕೆ ಸರಿಯಾಗಿ ಪತ್ತೆ ಹಚ್ಚುವುದು ಮತ್ತು ತಡೆಯುವುದು.

ಆರ್ಥಿಕ ವರದಿಗಾರಿಕೆಯ ಮೇಲೆ ಆಂತರಿಕ ಆರ್ಥಿಕ ನಿಯಂತ್ರಕಗಳ ಅಂತರ್ಗತ ಇತಿಮಿತಿಗಳು :

7. ಆರ್ಥಿಕ ವರದಿಗಾರಿಕೆಯ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಕಗಳ ಅಂತರ್ಗತ ಇತಿಮಿತಿಗಳು ಸೇರಿದಂತೆ ಆಡಳಿತ ವರ್ಗದ ಉಚಿತವಲ್ಲದ ನಿಯಂತ್ರಕಗಳನ್ನೂ ತಳ್ಳಿ ಹಾಕುವಂತಹ ಒಳಸಂಚಿನ ಕ್ರಮಗಳಿಂದ ಗುರುತರದ ಅಪಹೇಳಿಕೆಗಳಿಂದ ಉಂಟಾದ ತಪ್ಪುಗಳು ಮತ್ತು ವಂಚನೆಗಳನ್ನು ಪತ್ತೆ ಹಚ್ಚಲು ಸಾಧ್ಯವಾಗದೇ ಇರಬಹುದು ಹಾಗೂ ಆರ್ಥಿಕ ವರದಿಗಾರಿಕೆಯ ಮೇಲಿನ ಆಂತರಿಕ ಆರ್ಥಿಕ ನಿಯಂತ್ರಕಗಳ ಪ್ರಕ್ಷೇಪಗಳ ಮೌಲ್ಯೀಕರಣವು ಕುಂಠಿತವಾಗಿರಬಹುದಾದ ನೀತಿಗಳು ಮತ್ತು ಪ್ರಕ್ರಿಯೆಗಳು, ವಸ್ತುಸ್ಥಿತಿಗಳ ಬದಲಾವಣೆಯೂ ಒಳಗೊಂಡಂತೆ, ಅವುಗಳ ಅಪಾಯದ ಸಾಧ್ಯತೆಗಳು ಸಾಕಷ್ಟಿವೆಯೇ ಎಂಬುದಕ್ಕೆ ಒಳಪಟ್ಟಿರುತ್ತದೆ.

ಅಭಿಪ್ರಾಯ

8. ನಮ್ಮ ಅಭಿಪ್ರಾಯದಲ್ಲಿ, ಕಂಪನಿಯು ಎಲ್ಲಾ ಗುರುತರ ವಿಷಯಗಳಲ್ಲಿ ಆರ್ಥಿಕ ವರದಿಗಾರಿಕೆಯ ಮೇಲೆ ಸಾಕಷ್ಟು ಆಂತರಿಕ ಆರ್ಥಿಕ ನಿಯಂತ್ರಗಳನ್ನು ಹೊಂದಿದೆ ಮತ್ತು ಕಂಪನಿಯು ಸ್ಥಾಪಿಸಿರುವ ಆಂತರಿಕ ಆರ್ಥಿಕ ನಿಯಂತ್ರಕಗಳ ಅವಶ್ಯಕ ಭಾಗಗಳನ್ನು ಭಾರತೀಯ ಚಾರ್ಟರ್ಡ್ ಅಕೌಂಟೆಂಟ್ಸ್ ಸಂಸ್ಥೆಯವರು ಹೊರಡಿಸಿರುವ ಮಾರ್ಗದರ್ಶಿಕೆಯಡಿಯಲ್ಲಿ ಪರೀಕ್ಷಿಸಿ ಅವು 31–3–2025ರಂದು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿವೆ ಎಂದು ನಾವು ಅಭಿಪ್ರಾಯಪಡುತ್ತೇವೆ.

ಪಿ.ಕೆ. ರುಂಗ್ಟ ಮತ್ತು ಕಂಪನಿ ಪರವಾಗಿ
ಛಾರ್ಟರ್ಡ್ ಅಕೌಂಟೆಂಟ್ಸ್
ಸಂಸ್ಥೆ ನೋಂದಣಿ ಸಂಖ್ಯೆ 003498S

ಸಹಿ/–
ಸಿಎ ಆತಿಶ್ ರುಂಗ್ಟ
ಪಾಲುದಾರರು
ಸದಸ್ಯತ್ವ ಸಂಖ್ಯೆ–236749

ಸ್ಥಳ : ಬೆಂಗಳೂರು
ದಿನಾಂಕ : 10.11.2025
ಯುಡಿಐಎನ್ – 25236749BMISLK3197

ಪಿ.ಕೆ. ರುಂಗ್ಟ & ಕಂ.
ಛಾರ್ಟರ್ಡ್ ಅಕೌಂಟೆಂಟ್ಸ್

ಸಂ. 598/599, 1ನೇ ಮುಖ್ಯರಸ್ತೆ, 15ನೇ ಅಡ್ಡರಸ್ತೆ, ಹೆಚ್ಎಸ್ಆರ್ ಲೇಔಟ್, ಸೆಕ್ಟರ್–6, ಬೆಂಗಳೂರು – 560102
ದೂರವಾಣಿ : 080–25723074
ಇಮೇಲ್ : capkrungta@gmail.com
ಕಂಪನಿ ರಿಜಿಸ್ಟರ್ ಸಂಖ್ಯೆ : 003498S

ಅನುಬಂಧ – 'ಸಿ'

I ಕಂಪನಿ ಕಾಯಿದೆ 2013ರ ಸೆಕ್ಷನ್ 143(5)ರ ಅನ್ವಯ ನಿರ್ದೇಶನಗಳು

ಕ್ರಮ ಸಂ.	ನಿರ್ದೇಶನಗಳು	ಪರಿಶೋಧಕರ ಟಿಪ್ಪಣಿಗಳು
1	ನೌಕರರ ನಿವೃತ್ತಿ ನಂತರದ ಸೌಲಭ್ಯಗಳೆಡೆಗೆ ಕಂಪನಿಯು ನೇರವಾಗಿ ಅಥವಾ ನ್ಯಾಸಗಳ ಮೂಲಕ ಮಾಡಿರುವ ಎಲ್ಲಾ ನಮೂದಿತ ಮತ್ತು ಅನಮೂದಿತ ಹೂಡಿಕೆಗಳ ನ್ಯಾಯಯುತ ಮೌಲ್ಯವನ್ನು ನಿರ್ಧಾರಣೆ ಮಾಡಿ. ಇದು ಮೌಲ್ಯೀಕರಣದ ವಿಧಾನ ಕ್ರಮಗಳ ಪರಿಶೀಲನೆಯನ್ನೂ ಒಳಗೊಂಡಿದ್ದು, ಇಂಡ್–ಎಎಸ್‌ನೊಂದಿಗೆ ಸುಸಂಗತವಾಗಿದೆ ಎಂದು ಖಾತರಿ ಪಡಿಸಿಕೊಂಡು ಮತ್ತು ಅದಕ್ಕೆ ಸಮರ್ಥನೆ ನೀಡುವ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ ಮೌಲ್ಯೀಕರಣದ ದೃಷ್ಟಿಕೋನ ಅದರ ಯುಕ್ತತೆಯ ಬಗೆಗೆ ಮತ್ತು ಎಲ್ಲಾ ನಿಯಮಗಳ ಪರಿಪಾಲನೆ ಮತ್ತು ಗುರುತರ ಉಲ್ಲಂಘನೆ ಅಥವಾ ಅಪಹೇಳಿಕೆಗಳನ್ನು ಒಳಗೊಂಡ ಒಂದು ಸಂಕ್ಷಿಪ್ತ ಟಿಪ್ಪಣಿ ನೀಡುವುದೂ ಸೇರಿದೆ	ಶಾಸನಬದ್ಧ ಲೆಕ್ಕ ಪರಿಶೋಧಕರಾಗಿ, ನಮ್ಮ ಪರಿಶೋಧನೆಯ ವ್ಯಾಪ್ತಿಯು ಆರ್ಥಿಕ ಸ್ಥಿತಿ ವಿವರಣಾಪಟ್ಟಿಗಳೆಡೆಗೆ ಸೀಮಿತವಾಗಿದೆ. ಕಂಪನಿಯು ಸ್ವೀಕೃತವಾದ ವಿಮಾ ಗಣಕದ ವರದಿಯ ಆಧಾರದ ಮೇರೆಗೆ ಮೊಬಲಗುಗಳನ್ನು ಆಯಾ ನೌಕರರ ಸೌಲಭ್ಯ ನ್ಯಾಸಗಳಿಗೆ ವರ್ಗಾಯಿಸುತ್ತದೆ. ಆಯಾ ನ್ಯಾಸಗಳು ಸ್ವತಂತ್ರ ಸಂಸ್ಥೆಗಳಾಗಿದ್ದು, ಅವು ತಮ್ಮದೇ ಆದ ನ್ಯಾಸ ಪತ್ರಗಳ ಆಧಾರದಲ್ಲಿ ನಿರ್ವಹಣೆ ಮಾಡುತ್ತಾ ಮೊಬಲಗುಗಳನ್ನು ತಮ್ಮದೇ ಆದ ಹೂಡಿಕಾ ಮಾರ್ಗದರ್ಶಿಗಳ ಪ್ರಕಾರ ಮತ್ತು ಅನ್ವಯವಾಗುವ ಕಾಯಿದೆಯ ರೀತ್ಯ ಹೂಡಿಕೆ ಮಾಡುವ ಜವಾಬ್ದಾರಿಯನ್ನು ಹೊಂದಿರುತ್ತದೆ. ಈ ಸ್ವತಂತ್ರ ನ್ಯಾಸ ಸಂಸ್ಥೆಗಳು ಮಾಡುವ ಹೂಡಿಕೆಗಳ ಪರಿಶೋಧನೆಯ ಶಾಸನಬದ್ಧ ಲೆಕ್ಕಪರಿಶೋಧಕರ ಕಂಪನಿಯ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳ ಪರಿಶೋಧನಾ ವ್ಯಾಪ್ತಿಗೆ ಬರದೇ ಇರುವುದರಿಂದ ಈ ನ್ಯಾಸಗಳು ಮಾಡುವ ಹೂಡಿಕೆಗಳ ಬಗೆಗೆ ನಾವು ವ್ಯಾಖ್ಯಾನ ಮಾಡಲು ಅಸಮರ್ಥರಾಗಿದ್ದೇವೆ.
2	ಕಂಪನಿಯು ಎಲ್ಲಾ ಲೆಕ್ಕಪತ್ರಗಳ ಕಾರ್ಯಾಚರಣೆಗಳನ್ನು ವಿದ್ಯುನ್ಮಾನ ಯಂತ್ರಗಳ ಮೂಲಕ ನಡೆಸುವ ಪ್ರಕ್ರಿಯೆಗಳನ್ನು ಹೊಂದಿದೆಯೇ? ಹಾಗಿದ್ದಲ್ಲಿ ಗಣಕಯಂತ್ರಗಳ ಹೊರಗೆ ಲೆಕ್ಕಪತ್ರಗಳ ಕಾರ್ಯಾಚರಣೆಗಳನ್ನು ನಡೆಸುವ ಕಾರ್ಯವಿಧಾನಗಳು, ಲೆಕ್ಕಪತ್ರಗಳ ಪ್ರಾಮಾಣಿಕತೆ ಮತ್ತು ಅವುಗಳ ಆರ್ಥಿಕ ಪರಿಣಾಮಗಳೇನಾದರೂ ಇದ್ದಲ್ಲಿ ತಿಳಿಸಿರಿ.	ಕೆಳಕಂಡ ಟಿಪ್ಪಣಿ ಸಂಖ್ಯೆ 1ನ್ನು ಹೊರತುಪಡಿಸಿದಂತೆ, ಎಲ್ಲಾ ಲೆಕ್ಕಪತ್ರಗಳ ಕಾರ್ಯಾಚರಣೆಗಳನ್ನು ವಿದ್ಯುನ್ಮಾನ ಪ್ರಕ್ರಿಯೆಗೆ ಒಳಪಡಿಸಲಾಗಿದೆ. ಹಾಗಿದ್ದಾಗ್ಯೂ, ವಿವಿಧ ಪ್ರಕ್ರಿಯೆಗಳಾದ ಮಾನವ ಸಂಪನ್ಮೂಲ, ವೆಚ್ಚಗಳು, ಸರಕು ಸಾಮಗ್ರಿಗಳು, ಸ್ಥಿರಾಸ್ತಿಗಳು–ಇವುಗಳ ಬಗೆಗೆ ಬೇರೆಬೇರೆ ಸಾಫ್ಟ್‌ವೇರ್‌ಗಳನ್ನು ಹೊಂದಿದ್ದು, ಇದು ಅನಗತ್ಯ ಮಾಹಿತಿಗಳಿಗೆ ಎಡೆ ಮಾಡಿಕೊಟ್ಟು, ತಪ್ಪು ಮಾಹಿತಿಗಳು ಒಂದು ಪ್ರಕ್ರಿಯೆಯಿಂದ ಇನ್ನೊಂದು ಪ್ರಕ್ರಿಯೆಗೆ ಹರಿಯಬಹುದಾಗಿದೆ. ಆದುದರಿಂದ ಉತ್ತಮ ನಿಯಂತ್ರಣಕ್ಕಾಗಿ ಸಮಗ್ರೀಕೃತ ಸಾಫ್ಟ್‌ವೇರನ್ನು ಅನುಷ್ಠಾನಗೊಳಿಸಬಹುದಾಗಿದೆ.

		ಟಿಪ್ಪಣಿ ಸಂಖ್ಯೆ 1 : ಸೌಕರರ ರಜೆಗಳ ಬಗೆಗಿನ ಲೆಕ್ಕಪತ್ರಗಳನ್ನು ಇನ್ನೂ ಭೌತಿಕವಾಗಿಯೇ ಮಾಡಲಾಗುತ್ತಿದ್ದು ಅದನ್ನೂ, ವಿದ್ಯುನ್ಮಾನದೆಡೆಗೆ ತರಬಹುದಾಗಿದೆ. ಸಾಕಷ್ಟು ಮಾಹಿತಿಗಳು ಲಭ್ಯವಿರದ ಕಾರಣ, ಆರ್ಥಿಕ ಪ್ರಕ್ರಿಯೆಗಳ ಮೇಲೆ ಅವುಗಳ ಪರಿಣಾಮವನ್ನು ಹೇಳಲು ಸಾಧ್ಯವಿಲ್ಲ.
3	ಕೇಂದ್ರ / ರಾಜ್ಯ ಸರ್ಕಾರ ಅಥವಾ ಅವುಗಳ ಏಜೆನ್ಸಿಗಳಿಂದ ಧನ ಸಹಾಯವನ್ನು (ಗ್ರಾಂಟುಗಳು/ಸಬ್ಸಿಡಿಗಳು) ಪಡೆಯಲಾಗಿದೆಯೇ?/ಪಡೆಯಬೇಕಿದೆಯೇ? ಅವುಗಳನ್ನು ಉಚಿತ ರೀತಿಯಲ್ಲಿ ಅನ್ವಯವಾಗುವ ಲೆಕ್ಕಶಾಸ್ತ್ರ ಮಾನದಂಡಗಳ ಪ್ರಕಾರ ಲೆಕ್ಕಕ್ಕೆ ಹಾಕಲಾಗಿದೆಯೇ? ಗ್ರಾಂಟುಗಳಿಂದ ಗಳಿಸಿದ ಬಡ್ಡಿಯನ್ನು ಗ್ರಾಂಟುಗಳ ಷರತ್ತುಗಳಿಗೆ ಅನುಗುಣವಾಗಿ ಲೆಕ್ಕಕ್ಕೆ ಹಾಕಲಾಗಿದೆಯೇ? ವಿಚಲಿತವಾದ ಪ್ರಕರಣಗಳನ್ನು ಪಟ್ಟಿ ಮಾಡಿರಿ.	ಕೇಂದ್ರ / ರಾಜ್ಯ ಸರ್ಕಾರ ಅಥವಾ ಅವುಗಳ ಏಜೆನ್ಸಿಗಳಿಂದ ಯಾವುದೇ ಗ್ರಾಂಟುಗಳು/ಸಬ್ಸಿಡಿಗಳು ಸ್ವೀಕರಿಸಲಾಗಿಲ್ಲ
4	ಕಂಪನಿಯು ಪ್ರಮುಖ ಹಾನಿಕಾರಕ ಪ್ರದೇಶಗಳನ್ನು ಗುರುತಿಸಿದೆಯೇ? ಹಾಗಿದ್ದಲ್ಲಿ (ಎ) ಈ ಹಾನಿಗಳಿಂದಾಗುವ ನಷ್ಟಗಳನ್ನು ಕಡಿಮೆ ಮಾಡಲು ಹಾನಿ ನಿರ್ವಹಣಾ ನೀತಿಯನ್ನು ಕಂಪನಿಯು ರೂಪಿಸಿದೆಯೇ? (ಬಿ) ಮಾಹಿತಿ ಆಸ್ತಿಗಳನ್ನು ಕಂಪನಿಯು ಗುರುತಿಸಿದೆಯೇ ಮತ್ತು ಅವನ್ನು ಸಮಂಜಸವಾಗಿ ಮೌಲ್ಯೀಕರಿಸಿದೆಯೇ?	ಗಣಿ ಸುರಕ್ಷಾ ನಿರ್ದೇಶನಾಲಯದ (ಡಿಜಿಎಂಎಸ್) ಮಾರ್ಗದರ್ಶಿಗಳ ಪ್ರಕಾರ ಕಂಪನಿಯು ಸುರಕ್ಷಾ ನಿರ್ವಹಣಾ ನೀತಿಯನ್ನು ರೂಪಿಸಿ ಅನುಷ್ಠಾನಗೊಳಿಸಿದೆ. ಅಪಾಯಗಳ ಗುರುತಿಸುವುಕೆ ಮತ್ತು ಅವುಗಳ ನಿರ್ಧಾರಣೆಗಳನ್ನು, ಕಂಪನಿಯ ಎಲ್ಲಾ ಔದ್ಯೋಗಿಕ ಚಟುವಟಿಕೆಗಳೆಡೆಗೆ ಮಾಡಲಾಗಿದ್ದು, ಅವನ್ನು ಕಡಿಮೆ ಮಾಡುವಲ್ಲಿ ಕಂಪನಿಯು ನಿರತವಾಗಿದ್ದು ಆಚರಣೆ ಮಾಡಲಾಗುತ್ತಿದೆ.
5	ಅನ್ವಯವಾಗುವೆಡೆಗಳಲ್ಲೆಲ್ಲ, ಭಾರತದ ಪ್ರತಿಭೂತಿ ಮತ್ತು ವಿನಿಮಯ ಮಂಡಳಿಯ (SEBI)ರವರ (ಲಿಸ್ಟಿಂಗ್ ದಾಯಿತ್ವಗಳು ಪ್ರಕಟೀಕರಣ ಅವಶ್ಯಕತೆಗಳು) ನಿಯಮ, ಮತ್ತು ಅನ್ವಯವಾಗುವ ಇತರೇ ಹೂಡಿಕಾ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣಾ ಇಲಾಖೆ, ಕಾರ್ಪೋರೇಟ್ ಮಂತ್ರಾಲಯ, ಸಾರ್ವಜನಿಕ ಉದ್ದಿಮೆಗಳ ಇಲಾಖೆ, ಭಾರತೀಯ ರಿಸರ್ವ್ ಬ್ಯಾಂಕ್, ಭಾರತೀಯ ಟೆಲಿಕಾಂ ನಿಯಂತ್ರಣ ಪ್ರಾಧಿಕಾರ, CERT-IN, ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಇಲಾಖೆ, ರಾಷ್ಟ್ರೀಯ ಪಾವತಿ ನಿಗಮಗಳ ನಿಯಮಗಳನ್ನು ಕಂಪನಿಯು ಪರಿಪಾಲಿಸುತ್ತಿದೆಯೇ? ಹಾಗಿಲ್ಲದಿದ್ದಲ್ಲಿ ಉಲ್ಲಂಘನೆಯ ಪ್ರಕರಣಗಳನ್ನು ಎದ್ದು ಗಾಣಿಸಿರಿ.	ದಿ ಹಟ್ಟಿ ಚಿನ್ನದ ಗಣಿ ಕಂಪನಿಯು ಲಿಸ್ಟ್ ಆಗಿರದ ಸಂಸ್ಥೆಯಾಗಿದೆ. ಆದಾಗ್ಯೂ ಕಂಪನಿಯ ಅನ್ವಯವಾಗುವ ಎಲ್ಲಾ ಕಾನೂನಾತ್ಮಕ ಅವಶ್ಯಕತೆಗಳನ್ನು ಪರಿಪಾಲಿಸುತ್ತಿದೆ.

II ಕಂಪನಿಯ ನಿರ್ದಿಷ್ಟ ಅಧಿಕ ನಿರ್ದೇಶನಗಳ ಪಾಲನೆ :

ಕ್ರಮ ಸಂ.	ನಿರ್ದೇಶನಗಳು	ಅನುಸರಣೆಗಳು
i	ಅಡಕ – 1 ರಂತೆ, ಎಲ್ಲಾ ನಗದು ಮತ್ತು ಬ್ಯಾಂಕ್ ಶಿಲ್ಕುಗಳನ್ನು ಪರಿಶೀಲಿಸತಕ್ಕದ್ದು ಮತ್ತು ಪರಿಪಾಲನೆಯಾಗದಿರುವ ನಿರ್ದಿಷ್ಟ ಪ್ರಕರಣಗಳನ್ನು ಮಾಡತಕ್ಕದ್ದು.	**ಅನುಬಂಧ – ಡಿ(1)**ರ ಪ್ರಕಾರ

ii	ದುರುಪಯೋಗ/ವಂಚನೆಗಳನ್ನು ವ್ಯವಹರಿಸಲು ಕಂಪನಿಯು ಪರಿಣಾಮಕಾರಿ ಪದ್ಧತಿಗಳನ್ನು ಹೊಂದಿದೆಯೇ ಮತ್ತು ನಷ್ಟಗಳನ್ನು ಲೆಕ್ಕ ಪತ್ರಗಳಲ್ಲಿ ಸೂಕ್ತವಾಗಿ ಲೆಕ್ಕಕ್ಕೆ ಹಾಕಿದೆಯೇ? ವಿವರಣೆ ನೀಡದ ಯಾವುದಾದರೂ ಶಿಲ್ಕುಗಳನ್ನು "ಅಮಾನತ್ತು ಲೆಕ್ಕ"ದಡಿಯಲ್ಲಿ ನಿರ್ವಹಿಸಲಾಗದವುಗಳ ಬಗೆಗೆ ವಿವರಗಳನ್ನು ನೀಡಬಹುದು.	ಹೌದು, ದುರುಪಯೋಗ/ವಂಚನೆಗಳನ್ನು ವ್ಯವಹರಿಸಲು ಕಂಪನಿಯು ಪರಿಣಾಮಕಾರಿ ಪದ್ಧತಿಗಳನ್ನು ಹೊಂದಿದೆ.
iii	ಕಂಪನಿಯು ಗಣಿಯನ್ನು ಪುನರುತ್ಥಾನ ಚಟುವಟಿಕೆಗಳಿಗಾಗಿ ಮುಚ್ಚುವ ಯೋಜನೆಗಳನ್ನು ಹೊಂದಿದೆಯೇ ಮತ್ತು ಅದರ ಬಗೆಗಿನ ಏರ್ಪಾಡುಗಳು ಸಾಕಷ್ಟಿವೆಯೇ?	ಕಂಪನಿಯು ಗಣಿ ಮುಚ್ಚುವ ಅನುಮೋದಿತ ಯೋಜನೆಯನ್ನು ಹೊಂದಿದೆ. ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತವು ಒಂದು ಭೂ ಕೆಳಮೈ ಗಣಿಗಾರಿಕೆಯಲ್ಲಿ ನಿರತವಾಗಿರುವುದರಿಂದ, ಪುನರುತ್ಥಾನದ ಪ್ರಶ್ನೆಯು ಉದ್ಭವಿಸುವುದಿಲ್ಲ.
iv	ಗಣಿಗಾರಿಕೆ ಮತ್ತು ಪರಿಸರ ನಿಯಮಗಳಡಿಯಲ್ಲಿ ಅವಶ್ಯಕವಿರುವ ಕಾನೂನಾತ್ಮಕ ಅನುಜ್ಞೆಗಳನ್ನು ಕಂಪನಿಯು ಪಡೆದುಕೊಂಡಿದೆಯೇ ಮತ್ತು ಪರಿಸರದ ಮೇಲೆ ಉಂಟಾಗುವ ಪ್ರತಿಕೂಲ ಪರಿಣಾಮಗಳನ್ನು ತಗ್ಗಿಸಲು ಕ್ರಮಗಳನ್ನು ಕೈಗೊಂಡಿದೆಯೇ?	ದಿ ಹಟ್ಟಿ ಚಿನ್ನದ ಗಣಿ ಕಂಪನಿಯು ನಿರಂತರವಾಗಿ ಗಣಿಗಳು ಮತ್ತು ಖನಿಜಗಳು(ಅಭಿವೃದ್ಧಿ ಮತ್ತು ನಿಯಂತ್ರಣ ಕಾಯಿದೆ 1957, ಪರಿಸರ(ಸಂರಕ್ಷಣೆ) ಕಾನೂನು 1966 ಮತ್ತು ಪರಿಸರ ಮಂತ್ರಾಲಯ ಅರಣ್ಯ ಮತ್ತು ಹವಾಮಾನ ಬದಲಾವಣೆ (ಎಂಓಇಎಫ್‌ಸಿಸಿ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್ ಪಿಸಿಬಿ)ರವರ ಎಲ್ಲಾ ಕಾನೂನಾತ್ಮಕ ಅವಶ್ಯಕತೆಗಳನ್ನು ಪಾಲಿಸಿದೆ. ಕಾನೂನಾತ್ಮಕ ಪರಿಪಾಲನೆ : * ಎಲ್ಲಾ ಅವಶ್ಯಕ ಪರಿಸರ ಅನುಮೋದನೆಗಳನ್ನು ಪಡೆಯಲಾಗಿದೆ. * ನಿಯತಕಾಲಿಕ ಪರಿಪಾಲನಾ ವರದಿಗಳು, ಪರಿಸರದ ಪಟ್ಟಿಗಳು ಮತ್ತು ರಿಟರ್ನ್‌ಗಳನ್ನು ಉಚಿತ ಪ್ರಾಧಿಕಾರಗಳಲ್ಲಿ ನಿಗದಿತ ಸಮಯದಲ್ಲಿ ಸಲ್ಲಿಸುತ್ತದೆ. * ಮುಂದುವರೆದ ಪರಿಪಾಲನೆಯನ್ನು ಖಾತ್ರಿ ಪಡಿಸಿಕೊಳ್ಳಲು ಆಂತರಿಕ ಪರಿಶೋಧನೆ ಮತ್ತು ಮೂರನೇ ವ್ಯಕ್ತಿಯ ಮೌಲ್ಯೀಕರಣವನ್ನು ಹೊಂದಿದ್ದು, ಕಂಪನಿಯು ಶೂನ್ಯ ಅಪರಿಪಾಲನಾ ಸಹನೆಯ ದಾಖಲೆಯನ್ನು ಹೊಂದಿದೆ. ಪಾರಿಸಾರಿಕ ಸಂರಕ್ಷಣೆಗಳು : * ವಾಯು ಮತ್ತು ನೀರು ಗುಣಮಟ್ಟ ನಿಯಂತ್ರಣ, ಶಬ್ದ ಮಾಲಿನ್ಯ ನಿಯಂತ್ರಣ ಮತ್ತು ತ್ಯಾಜ್ಯ ನಿರ್ವಹಣೆಗಳನ್ನು ಒಳಗೊಂಡಂತೆ ವಿಸ್ತೃತ ಪರಿಸರ ನಿರ್ವಹಣಾ ಯೋಜನೆಯನ್ನು ಜಾರಿಗೊಳಿಸುವುದು. * ಟೈಲಿಂಗ್‌ಗಳ ವಿಲೇವಾರಿಗಾಗಿ ಉತ್ತಮ ಪದ್ಧತಿಗಳ ಅಳವಡಿಕೆ, ದ್ರವ್ಯ ತ್ಯಾಜ್ಯ ಸಂಸ್ಕರಣೆ ಮತ್ತು ಹಾನಿಕಾರಕ ತ್ಯಾಜ್ಯಗಳನ್ನು ಗುಣಮಟ್ಟದ ಸೂತ್ರಗಳ ರೀತ್ಯ ನಿರ್ವಹಿಸುವುದು.

		* ಸಂರಕ್ಷಿತ ಅಭಿವೃದ್ಧಿಗಾಗಿ, ಕ್ರಿಯಾತ್ಮಕ ವನೀಕರಣ ಯೋಜನೆಗಳು, ಜೈವಿಕ ವೈವಿಧ್ಯ ಸಂರಕ್ಷಣಾ ಪ್ರಯತ್ನಗಳು ಮತ್ತು ಸಮುದಾಯ ಸಂಯೋಜನಾ ಉಪಕ್ರಮಗಳ ನಿರ್ವಹಣೆ. * ಪಾರಿಸಾರಿಕ ಹೆಜ್ಜೆ ಗುರುತುಗಳನ್ನು ಕನಿಷ್ಠೀಕರಿಸಲೋಸುಗ ಶಕ್ತಿ ಸಮರ್ಥ ತಾಂತ್ರಿಕತೆ ಮತ್ತು ಧೂಳು ಅಡಗಿಸುವ ಪದ್ಧತಿಗಳ ನಿಯುಕ್ತಿ. * ಪಾರಿಸಾರಿಕ ಅಗ್ರಣೀತನ ಮತ್ತು ನಿಯಂತ್ರಕಗಳ ಪರಿಪಾಲನೆಗಾಗಿ ಅತ್ಯುನ್ನತ ಶ್ರೇಣಿಯ ಪಾರಿಸಾರಿಕ ಮತ್ತು ಕಾನೂನಾತ್ಮಕ ಮಾನದಂಡಗಳನ್ನು ಎತ್ತಿ ಹಿಡಿಯಲು ನಾವು ಬದ್ಧರಾಗಿದ್ದೇವೆ.
v	ಕಂಪನಿಯು ಮುಂದುವರೆಸದಿರುವ ಗಣಿಗಳನ್ನು ಬಿಟ್ಟುಕೊಟ್ಟಿರುವ ಪ್ರಕರಣಗಳಿವೆಯೇ? ಮತ್ತು ಅದಕ್ಕೆ ಅನುರೂಪವಾದ ಸ್ಥಾಯಿ ಬಾಡಿಗೆಯ ಪಾವತಿಯನ್ನೂ ಪರಿಶೀಲಿಸತಕ್ಕದ್ದು.	ಕಂಪನಿಯು ಯಾವುದೇ ಆಚರಣೆಯಲ್ಲಿಲ್ಲದ ಗಣಿಗಳನ್ನು ಬಿಟ್ಟುಕೊಟ್ಟಿರುವುದಿಲ್ಲ. ಏಕೆಂದರೆ, ಪ್ರಸ್ತುತ ಮಾರುಕಟ್ಟೆ ದರವನ್ನು ಪರಿಗಣಿಸಿದಾಗ, ಈ ಬ್ಲಾಕ್‌ಗಳ ಆರ್ಥಿಕ ಸಾಧ್ಯತಾ ವರದಿಯ ಅಧ್ಯಯನವನ್ನು ಮಾಡಲೋಸುಗ ಕೇಂದ್ರ ಕೇಂದ್ರ ಸರ್ಕಾರದ ಒಂದು ಏಜೆನ್ಸಿಗೆ ವಹಿಸಲಾಗಿದ್ದು, ಈ ವರದಿಯು ಬಂದ ಮೇಲೆ ಗಣಿ ಗುತ್ತಿಗೆಗಳನ್ನು ಮುಂದಿನ ಗಣಿಗಾರಿಕೆಗಾಗಿ ಇಟ್ಟುಕೊಳ್ಳುವುದೋ ಅಥವಾ ಬಿಟ್ಟು ಕೊಡುವುದೋ ಎಂಬುದರ ಬಗೆಗೆ ತೀರ್ಮಾನ ಮಾಡಲಾಗುತ್ತದೆ.

ಪಿ.ಕೆ. ರುಂಗ್ಟ ಮತ್ತು ಕಂಪನಿ ಪರವಾಗಿ
ಛಾರ್ಟರ್ಡ್ ಅಕೌಂಟೆಂಟ್ಸ್
ಸಂಸ್ಥೆ ನೋಂದಣಿ ಸಂಖ್ಯೆ 003498S

ಸಹಿ/–
ಸಿಎ ಆಶಿಶ್ ರುಂಗ್ಟ
ಪಾಲುದಾರರು
ಸದಸ್ಯತ್ವ ಸಂಖ್ಯೆ–236749

ಸ್ಥಳ : ಬೆಂಗಳೂರು
ದಿನಾಂಕ : 10.11.2025
ಯುಡಿಐಎನ್ – 25236749BMISLK3197

ಪಿ.ಕೆ. ರುಂಗ್ಟ & ಕಂ.
ಛಾರ್ಟರ್ಡ್ ಅಕೌಂಟೆಂಟ್ಸ್

ಸಂ. 598/599, 1ನೇ ಮುಖ್ಯರಸ್ತೆ, 15ನೇ ಅಡ್ಡರಸ್ತೆ, ಹೆಚ್‌ಎಸ್‌ಆರ್ ಲೇಔಟ್, ಸೆಕ್ಟರ್–6, ಬೆಂಗಳೂರು – 560102
ದೂರವಾಣಿ : 080–25723074
ಇಮೇಲ್ : capkrungta@gmail.com
ಕಂಪನಿ ರಿಜಿಸ್ಟರ್ ಸಂಖ್ಯೆ : 003498S

ಅನುಬಂಧ – 'ಡಿ'

ಕ್ರ. ಸಂ.	ತನಿಖಾ ಪಟ್ಟಿಯ ಅಂಶಗಳು	ಷರಾ
1.	ಎಲ್ಲಾ ಬ್ಯಾಂಕ್ ಖಾತೆಗಳು/ನಿಶ್ಚಿತ ಠೇವಣಿಗಳನ್ನೂ ಉಚಿತ ಅನುಮತಿಯೊಂದಿಗೆ ಪ್ರತ್ಯಾಯೋಜನಾ ಅಧಿಕಾರಗಳಿಂದ ತೆರೆಯಲಾಗಿದೆಯೇ?	ಹೌದು
2.	ನಿಯತಕಾಲದಲ್ಲಿ ಬ್ಯಾಂಕ್ ಹೊಂದಾಣಿಕೆ ಪಟ್ಟಿಗಳನ್ನು ತಯಾರಿಸುವ ಪದ್ಧತಿ ಇದೆಯೇ ಮತ್ತು ಅವುಗಳನ್ನು ಪರಿಶೋಧನೆಯಲ್ಲಿ ಪ್ರಸ್ತುತಪಡಿಸಲಾಗಿದೆಯೇ?	ಹೌದು
3.	ಮುಖ್ಯ ಬ್ಯಾಂಕ್ ಖಾತೆ ಮತ್ತು ಸಹಾಯಕ ಬ್ಯಾಂಕ್ ಖಾತೆಗಳ ಹೊಂದಾಣಿಕೆಯನ್ನು ಮಾಡಲಾಗಿದೆಯೇ?	ಹೌದು
4.	ಬ್ಯಾಂಕ್ ಖಾತೆಗಳನ್ನು ನಿರ್ವಹಿಸಲು ಏಕ ಸಹಿದಾರನಿಗೆ ಅಧಿಕಾರ ನೀಡಲಾಗಿದೆಯೇ?	ಇಲ್ಲ
5.	ನಿಶ್ಚಿತ ಠೇವಣಿಗಳ ಪೂರ್ಣಾವಧಿಗೆ ಬಡ್ಡಿಯನ್ನು ಲೆಕ್ಕಕ್ಕೆ ಹಾಕಲಾಗಿದೆಯೇ?	ಹೌದು
6.	ನಿಯತಕಾಲದಲ್ಲಿ ನಗದಿನ ಭೌತಿಕ ಪರಿಶೀಲನೆಯಾಗಿದೆಯೇ?	ಹೌದು
7.	ಸ್ಥಿತಿವಿವರಣಾ ಪಟ್ಟಿಯಲ್ಲಿ ತೋರಿಸಿರುವ ಕೈಯಲ್ಲಿರುವ ನಗದು ಭೌತಿಕ ಪರಿಶೀಲನಾ ಸರ್ಟಿಫಿಕೇಟ್‌ನೊಂದಿಗೆ ಹೊಂದಾಣಿಕೆಯಾಗುತ್ತದೆಯೇ?	ಹೌದು
8.	ಮೊಬಲಗು, ತೀರುವಳಿ ದಿನಾಂಕ, ಬಡ್ಡಿಯ ದರ, ಬಡ್ಡಿ ಪಾವತಿಯ ದಿನಾಂಕದ ವಿವರಗಳನ್ನು ತೋರಿಸುವ ನಿಶ್ಚಿತ ಠೇವಣಿಗಳ ರಿಜಿಸ್ಟರ್ ಇದೆಯೇ?	ಹೌದು
9.	ನಿಶ್ಚಿತ ಠೇವಣಿಗಳ ಮೇಲಿನ ಬಡ್ಡಿಯು, ಯುಕ್ತ ಸಮಯಗಳಲ್ಲಿ ಸ್ವೀಕೃತವಾಗಿವೆಯೇ ಎಂದು ಖಾತರಿ ಪಡಿಸಿಕೊಳ್ಳುವ ಅನುಸರಣಾ ಪದ್ಧತಿಯಿದೆಯೇ?	ಹೌದು
10.	ನಿಶ್ಚಿತ ಠೇವಣಿಗಳು ತೀರುವಳಿ ಆದ ಬಳಿಕ ವಿಳಂಬವಿಲ್ಲದೆ, ಅವುಗಳು ಖಾತೆಗೆ ವರ್ಗಾವಣೆಯಾಗುವ ಬಗೆಗೆ ಅನುಸರಣಾ ಪದ್ಧತಿಯಿದೆಯೇ?	ಹೌದು
11.	ಉಳಿತಾಯ ಖಾತೆ, ಚಾಲ್ತಿ ಖಾತೆ, ನಿಶ್ಚಿತ ಠೇವಣಿಗಳ ಬಗೆಗೆ ಬ್ಯಾಂಕ್ ಸ್ಥಿರೀಕರಣ ಪಟ್ಟಿಗಳನ್ನು ನಿಯತಕಾಲಗಳಲ್ಲಿ ಪಡೆಯಲಾಗುತ್ತಿದೆಯೇ?	ಹೌದು
12.	ಎಲ್ಲಾ ಬ್ಯಾಂಕ್ ಶಿಲ್ಕುಗಳ ಸ್ಥಿರೀಕರಣ ಪಟ್ಟಿಗಳು, ಬ್ಯಾಂಕ್ ಪಟ್ಟಿಗಳೊಂದಿಗೆ ಹೊಂದಾಣಿಕೆಯಾಗುತ್ತವೆಯೇ?	ಹೌದು
13.	ನಿಶ್ಚಿತ ಠೇವಣಿಗಳ ರಿಜಿಸ್ಟರ್‌ನಲ್ಲಿನ ನಿಶ್ಚಿತ ಠೇವಣಿಗಳು ಮತ್ತು ಬಡ್ಡಿ, ಬ್ಯಾಂಕುಗಳು ನೀಡಿರುವ ಸ್ಥಿರೀಕರಣ/ಸರ್ಟಿಫಿಕೇಟ್‌ಗಳೊಂದಿಗೆ ಹೊಂದಾಣಿಕೆ ಆಗುತ್ತವೆಯೇ?	ಹೌದು ನಿಶ್ಚಿತ ಠೇವಣಿಗಳು ಮತ್ತು ಬಡ್ಡಿ, ನಿಶ್ಚಿತ ಠೇವಣಿ ರಿಜಿಸ್ಟರ್‌ಗಳ ಪ್ರಕಾರವಿದ್ದು, ಅವು ಬ್ಯಾಂಕ್ ಸ್ಥಿರೀಕರಣ/ ಸರ್ಟಿಫಿಕೇಟ್‌ಗಳೊಂದಿಗೆ ಹೊಂದಾಣಿಕೆ ಆಗುತ್ತವೆ.
14.	ಬ್ಯಾಂಕುಗಳಿಂದ ಪಡೆದ ಸ್ಥಿರೀಕರಣ ಪಟ್ಟಿಗಳು ಅಧಿಕೃತಗೊಂಡಿವೆಯೇ ಮತ್ತು ಅವು ಬ್ಯಾಂಕುಗಳ ಲೆಟರ್–ಹೆಡ್‌ನಲ್ಲಿವೆಯೇ?	ಹೌದು

15.	ಪರೀಕ್ಷಾರ್ಥ–ತನಿಖಾ ಪ್ರಕರಣಗಳಲ್ಲಿ ಗಮನಿಸಲಾದ ವ್ಯತ್ಯಾಸಗಳೇನಾದರೂ ಇದ್ದಲ್ಲಿ ಅವನ್ನು ಮುಂದಿನ ವರ್ಷಗಳಲ್ಲಿ ಹೊಂದಾಣಿಕೆ ಮಾಡಲಾಗಿದೆಯೇ	ಅನ್ವಯಿಸುವುದಿಲ್ಲ
16.	ಲೆಕ್ಕ ಪುಸ್ತಕಗಳಲ್ಲಿ ಲೆಕ್ಕಹಾಕಿರುವ ಬ್ಯಾಂಕ್ ಶಿಲ್ಕುಗಳು, ಲೆಕ್ಕ ಪರಿಶೋಧಕರು ಪಡೆದ ಬಾಹ್ಯ ದೃಢೀಕರಣಗಳೊಂದಿಗೆ ತಾಳೆ ಹೊಂದುತ್ತವೆಯೇ?	ಹೌದು, ವಿವಿಧ ಬ್ಯಾಂಕುಗಳಿಂದ ಬಾಹ್ಯ ದೃಢೀಕರಣಗಳನ್ನು ಪಡೆಯಲಾಯಿತು. ಕೆಲವು ಪರೀಕ್ಷಾರ್ಥ ತನಿಖೆಗಳ ಪ್ರಕರಣಗಳನ್ನೂ ಈ ಕೆಳಗೆ ಕೊಡಲಾಗಿದೆ.
17.	ಮೇಲ್ಕಂಡ ಯಾವುದೇ ಲೋಪಗಳನ್ನು ಆಂತರಿಕ ಆರ್ಥಿಕ ನಿಯಂತ್ರಕಗಳ ವರದಿಯಲ್ಲಿ, ತೋರಿಸಲಾಗಿದೆ ಯೇ?	ಅನ್ವಯವಾಗುವುದಿಲ್ಲ

ಬ್ಯಾಂಕುಗಳಿಂದ ಲೆಕ್ಕಪರಿಶೋಧಕರು ಪಡೆದ ಬಾಹ್ಯ ದೃಢೀಕರಣಗಳ ಪಟ್ಟಿ :

ಕ್ರ.ಸಂ.	ಬ್ಯಾಂಕಿನ ಹೆಸರು	ಖಾತೆ ಸಂಖ್ಯೆ	ಮೊಬಲಗು (ರೂ.)
1	ಕೆನರಾ ಬ್ಯಾಂಕ್	18063070000024	4,08,752
2	ಕೆನರಾ ಬ್ಯಾಂಕ್	18063210000010	12,23,785.10

ಪಿ.ಕೆ. ರುಂಗ್ಟ ಮತ್ತು ಕಂಪನಿ ಪರವಾಗಿ
ಛಾರ್ಟರ್ಡ್ ಅಕೌಂಟೆಂಟ್ಸ್
ಸಂಸ್ಥೆ ನೋಂದಣಿ ಸಂಖ್ಯೆ 003498S

ಸಹಿ/–
ಸಿಎ ಆಶಿಶ್ ರುಂಗ್ಟ
ಪಾಲುದಾರರು
ಸದಸ್ಯತ್ವ ಸಂಖ್ಯೆ–236749

ಸ್ಥಳ : ಬೆಂಗಳೂರು
ದಿನಾಂಕ : 10.11.2025
ಯುಡಿಐಎನ್ – 25236749BMISLK3197

ಸ್ವತಂತ್ರ ಲೆಕ್ಕ ಪರಿಶೋಧಕರ ವರದಿಗೆ ಉತ್ತರಗಳು

ಅನುಬಂಧ – IIIA

ಕ್ರಮ ಸಂ.	ಲೆಕ್ಕ ಪರಿಶೋಧಕರ ಷರತ್ತುಬದ್ಧ ಅಭಿಪ್ರಾಯ	ಕಂಪನಿಯ ಉತ್ತರಗಳು
1.	(ಎ) ಕಂಪನಿಯು 80.18 ಲಕ್ಷ ರೂ.ಗಳನ್ನು ಆಂತರಿಕ ಚಿನ್ನ ಶುದ್ಧೀಕರಣ ಸ್ಥಾವರದ ಸ್ಥಾಪನೆಗಾಗಿ ವ್ಯಯಿಸಿದ್ದು, 2018–19ರಲ್ಲಿ, ಈ ಸ್ಥಾವರದ ಪ್ರಾಯೋಗಿಕ ಪರೀಕ್ಷೆ ನಡೆಸಲಾಯಿತು. ಸ್ಥಾವರವನ್ನು ತಾಂತ್ರಿಕ ಸಮಸ್ಯೆಗಳಿಂದಾಗಿ ನಿಯುಕ್ತಗೊಳಿಸಲಾಗಿಲ್ಲ. ಕಂಪನಿಯು ನೇಮಿಸಿದ ತಜ್ಞರು/ಸಮಾಲೋಚಕರು ಈ ಸ್ಥಾವರದಲ್ಲಿ ಚಿನ್ನದ ಶುದ್ಧೀಕರಣವನ್ನು ಮುಂದುವರೆಸುವುದು ಕಾರ್ಯ ಸಾಧ್ಯವಿಲ್ಲವೆಂದು ವರದಿ ಮಾಡಿದ್ದಾರೆ. ಸ್ಥಾವರವನ್ನು ಬಂಡವಾಳೀಕರಿಸಿಯೂ ಇಲ್ಲ ಅಥವಾ ಅದಕ್ಕೆ ಸವಕಳಿಯನ್ನೂ ಹಾಕದೆ, ಮುಂದುವರೆಯುತ್ತಿರುವ ಬಂಡವಾಳ ಕಾಮಗಾರಿ ಎಂದು ಸ್ಥಿತಿ ವಿವರಣಾ ಪಟ್ಟಿಯ ದಿನಾಂಕದಂದು ತೋರಿಸಲಾಗಿದೆ. ಇದರಿಂದಾಗಿ ಲಾಭವನ್ನು 80.18 ಲಕ್ಷ ರೂ.ಗಳಷ್ಟು ಅಧಿಕವಾಗಿ ತೋರಿಸಲಾಗಿದೆ. (ಬಿ) ತಮಣಕಲ್‌ನಿಂದ ಹಟ್ಟಿಗೆ ನೀರು ಸರಬರಾಜು ಮಾಡುವ ಬಗೆಗೆ ವಿಸ್ತೃತ ಯೋಜನಾ ವರದಿಯ ತಯಾರಿಕೆಗಾಗಿ, ಕಂಪನಿಯು ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ 19.07 ಲಕ್ಷ ರೂ.ಗಳನ್ನು ಪಾವತಿಸಿದೆ. ಈ ಯೋಜನೆಯನ್ನು ಕೈ ಬಿಡಲಾಗಿದ್ದು, ಒಂದು ಹೊಸ ವಿಸ್ತೃತ ಯೋಜನಾ ವರದಿಯನ್ನು ನ್ಯಾಷನಲ್ ಪ್ರಾಜೆಕ್ಟ್ ಕನ್‌ಸ್ಟ್ರಕ್ಷನ್ ಕಾರ್ಪೋರೇಷನ್ ಲಿಮಿಟೆಡ್‌ರವರು (NPCC) ತಯಾರಿಸಿದ್ದಾರೆ. ಹಾಗಾಗಿ, ಮುಂದುವರೆಯುತ್ತಿರುವ ಬಂಡವಾಳ ಕಾಮಗಾರಿ ಎಂದು ಪರಿಗಣಿಸಲಾಗಿರುವ ಈ ವೆಚ್ಚವು ಅಸಿಂಧುವಾಗಿದೆ ಮತ್ತು ಅದನ್ನು ತೊಡೆದು ಹಾಕಬೇಕಾಗಿದೆ ಅಥವಾ ಲಾಭ ಮತ್ತು ನಷ್ಟದ ಲೆಕ್ಕದಲ್ಲಿ, ಅದಕ್ಕೆ ಏರ್ಪಾಡನ್ನು ಮಾಡಬೇಕಿದೆ. ಇದರಿಂದಾಗಿ ಲಾಭವನ್ನು 19.07 ಲಕ್ಷ ರೂ.ಗಳಷ್ಟು ಅಧಿಕವಾಗಿ ತೋರಿಸಲಾಗಿದೆ.	(ಎ) ಕಂಪನಿಯು 15.43 ಲಕ್ಷ ರೂ.ಗಳ ಹೂಡುವಳಿ ತೆರಿಗೆ ಕ್ರೆಡಿಟ್ಟನ್ನು ಬಳಸಿಕೊಂಡು, 65.49 ಲಕ್ಷ ರೂ.ಗಳನ್ನು ಮುಂದುವರೆಯುತ್ತಿರುವ ಬಂಡವಾಳ ಕಾಮಗಾರಿಯಲ್ಲಿ ತೋರಿಸಿದೆ. ಲೆಕ್ಕ ಪರಿಶೋಧನಾ ವರದಿಯಲ್ಲಿ ತೋರಿಸಿರುವ ಮೊತ್ತವು ಹೂಡುವಳಿ ತೆರಿಗೆ ಕ್ರೆಡಿಟ್ಟನ್ನು ಹೊರತುಪಡಿಸಿದ್ದಾಗಿದೆ. ಶುದ್ಧೀಕರಣ ಸ್ಥಾವರದ ಅಧ್ಯಯನ ಮತ್ತು ವರದಿಗಾರಿಕೆಗಾಗಿ ಕಂಪನಿಯು ನಿರ್ದೇಶಕರ ಒಂದು ಉಪಸಮಿತಿಯನ್ನು ರಚಿಸಿದ್ದು, ಉಪಸಮಿತಿಯು ತನ್ನ ವರದಿಯನ್ನು ಸದ್ಯದಲ್ಲಿಯೇ ಸಲ್ಲಿಸಲಿದೆಯೆಂದು ನಿರೀಕ್ಷಿಸಲಾಗಿದೆ. ವರದಿಯನ್ನು ಸಲ್ಲಿಸಿದ ತರುವಾಯ, ಕಂಪನಿಯ ಆಡಳಿತ ವರ್ಗದ ನಿರ್ಧಾರದ ನಂತರ, ಸೂಕ್ತವಾದ ಲೆಕ್ಕಾಚಾರವನ್ನು ಲೆಕ್ಕ ಪುಸ್ತಕಗಳಲ್ಲಿ ಮಾಡಲಾಗುವುದು (ಬಿ) ಕಂಪನಿಯು 19.07 ಲಕ್ಷ ರೂ.ಗಳನ್ನು ಪಾವತಿಸಿರುವುದು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಕೃಷ್ಣಾ ನದಿಯ ನೀರು ಸರಬರಾಜು ಮಾಡುವುದಕ್ಕಾಗಿ ಯೋಜನಾ ವರದಿಗಾಗಿ ಆಗಿದ್ದು, ಈ ಯೋಜನೆಯ ಮುಕ್ತಾಯವಾಗಬೇಕಿದ್ದು ಇದನ್ನು ಮುಂದುವರೆಯುತ್ತಿರುವ ಬಂಡವಾಳ ಕಾಮಗಾರಿ (CWIP) ಎಂದು ತೋರಿಸಲಾಗಿದೆ. ಆದಾಗ್ಯೂ ಕಂಪನಿಯ ಪ್ರಾಜೆಕ್ಟ್ಸ್ ಮ್ಯಾನೇಜ್‌ಮೆಂಟ್ ಕನ್ಸಲ್ಟೆಂಟ್ (PMC), ಟೆಂಡರ್ ಪ್ರಕ್ರಿಯೆಯ ಮೂಲಕ ನೇಮಿಸಿದ್ದು, ಇಚ್ಛಾಪತ್ರವನ್ನು (LOI) ನ್ಯಾಷನಲ್ ಪ್ರಾಜೆಕ್ಟ್ಸ್ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ಗೆ (NPCC) ನೀಡಿದೆ. ಅದರ ಕಾರ್ಯವ್ಯಾಪ್ತಿಯ ಪ್ರಕಾರ, ಎನ್‌ಪಿಸಿಸಿರವರು ಈ ಯೋಜನೆಗಾಗಿ ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಬೇಕಿರುತ್ತದೆಯಲ್ಲದೇ ಇತರೇ ಕಾರ್ಯಗಳಾದ ಟೆಂಡರ್ ಕರೆಯುವ ನೋಟೀಸನ್ನು ತಯಾರಿಸುವುದು, ಯೋಜನೆಯನ್ನು ಮುಕ್ತಾಯಗೊಳಿಸಲೋಸುಗ ಒಂದು ಏಜೆನ್ಸಿಯನ್ನು ಆಯ್ಕೆ ಮಾಡುವುದು, ಅವರ ಬಿಲ್ಲುಗಳನ್ನು ಪ್ರಮಾಣೀಕರಿಸುವುದು ಮತ್ತು ಯೋಜನೆಯ ಮುಕ್ತಾಯದ ಮೇಲ್ವಿಚಾರಣೆಯೂ ಸೇರಿರುತ್ತದೆ. NPCC ರವರಿಂದ ವಿಸ್ತೃತ ಯೋಜನಾ ವರದಿಯನ್ನು ಸ್ವೀಕರಿಸಿದ ನಂತರ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಪಾವತಿಸಲಾದ ಮೊಬಲಗನ್ನು ಲೆಕ್ಕಕ್ಕೆ ಹಾಕುವುದು ಅಥವಾ ಇತರೆ ರೀತಿಯಲ್ಲಿ ವ್ಯವಹರಿಸುವುದನ್ನು ಆ ವರದಿಯ ಆಧಾರದಲ್ಲಿ ಮಾಡಲಾಗುತ್ತದೆ.

ಕ್ರಮ ಸಂ.	ಲೆಕ್ಕ ಪರಿಶೋಧಕರ ಷರತ್ತುಬದ್ಧ ಅಭಿಪ್ರಾಯ	ಕಂಪನಿಯ ಉತ್ತರಗಳು
2.	(ಎ) ಸುವರ್ಣ ಆರೋಗ್ಯ ಸುರಕ್ಷಾ ನ್ಯಾಸ(ಎಸ್‌ಎಎಸ್‌ಟಿ)ದಿಂದ ಸ್ವೀಕರಿಸಬೇಕಿರುವ 100.00 ಲಕ್ಷ ರೂ.ಗಳೆಡೆಗೆ ಕಂಪನಿಯು ಯಾವುದೇ ಲಿಖಿತ ಸ್ಥಿರೀಕರಣವನ್ನು ಪಡೆದಿಲ್ಲ ಮತ್ತು ಇದು ನವೆಂಬರ್ 2021ರಿಂದಲೂ ಬಾಕಿ ಇರುತ್ತದೆ. ಈ ಮೊತ್ತವು ಸ್ವೀಕೃತಿಗಾಗಿ 3 ವರ್ಷಗಳಿಗಿಂತ ಅಧಿಕವಾಗಿ ಬಾಕಿ ಇರುವುದರಿಂದ ಇದರ ಸ್ವೀಕೃತಿಯು ಸಂದೇಹಾತ್ಮಕವಾಗಿದ್ದು, ಇದರೆಡೆಗೆ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳಲ್ಲಿ ಅಗತ್ಯವಾದ ಏರ್ಪಾಡನ್ನು ಮಾಡಿರುವುದಿಲ್ಲ. (ಬಿ) ವಿವಿಧ ಇಲಾಖೆಗಳಿಗೆ ಹಂಚಿಕೆ ಮಾಡಿರುವ ವಸತಿಗಳ ಬಗೆಗಿನ ಬಾಡಿಗೆ, ವಿದ್ಯುತ್ ಮತ್ತು ಇತರೇ ಬಾಕಿಗಳೆಡೆಗೆ 120.54 ಲಕ್ಷ ರೂ.ಗಳನ್ನು ವಸೂಲು ಮಾಡಿರುವುದಿಲ್ಲ. ಈ ಮೊಬಲಗು ಹಲವು ವರ್ಷಗಳಿಂದ (3 ವರ್ಷಗಳಿಗೂ ಮೇಲ್ಪಟ್ಟು) ಬಾಕಿ ಇದ್ದು, ನಮ್ಮ ದೃಷ್ಟಿಯಲ್ಲಿ ಈ ಬಾಕಿಯ ವಸೂಲಾತಿಯು ಸಂದೇಹಾತ್ಮಕವಾಗಿದೆ. ಆದಾಗ್ಯೂ ಕಂಪನಿಯು ಸಂದೇಹಾತ್ಮಕ ಬಾಕಿಯೆಡೆಗೆ ಆರ್ಥಿಕ ಸ್ಥಿತಿ ಪಟ್ಟಿಗಳಲ್ಲಿ ಏರ್ಪಾಡನ್ನು ಮಾಡಿರುವುದಿಲ್ಲ. ತತ್ಪರಿಣಾಮವಾಗಿ, ಪ್ರಸ್ತುತ ವರ್ಷದ ಆಸ್ತಿಗಳು ಮತ್ತು ಲಾಭವನ್ನು ಈ ಮೊತ್ತದಷ್ಟು ಅಧಿಕವಾಗಿ ತೋರಿಸಲಾಗಿದೆ.	(ಎ) ಕಂಪನಿಯು ಸುವರ್ಣ ಆರೋಗ್ಯ ಸುರಕ್ಷಾ ನ್ಯಾಸ(SAST) ಒಂದು ಸರ್ಕಾರಿ ಏಜೆನ್ಸಿಯಾಗಿದೆ. ಕಂಪನಿಯು ಈ ನ್ಯಾಸದೊಂದಿಗೆ ನಿರಂತರವಾಗಿ ಹಿಂಬಾಲಿಕೆಯಲ್ಲಿದ್ದು, ಅದರ ಪ್ರಾಧಿಕಾರಿಗಳು ಈ ಮೊಬಲಗನ್ನು ಹಿಂದಿರುಗಿಸುವ ಪ್ರಕ್ರಿಯೆಯಲ್ಲಿದ್ದಾರೆ. ಮರುಪಾವತಿಯನ್ನು ಶೀಘ್ರದಲ್ಲಿ ಸ್ವೀಕರಿಸಲಾಗುವುದು. (ಬಿ) ಈ ಮೊಬಲಗಿನ ವಸೂಲಾತಿ ಪ್ರಯತ್ನಗಳನ್ನು ಮತ್ತಷ್ಟು ಚುರುಕುಗೊಳಿಸಿ, ಕಾನೂನು ಪ್ರಕ್ರಿಯೆ ಪ್ರಾರಂಭಿಸಿ ಸುಸ್ತಿದಾರರಿಂದ ವಸೂಲು ಮಾಡುವ ಕಾರ್ಯಗತಿಗಳನ್ನು ಬಲಪಡಿಸಿದೆ. ಸರ್ಕಾರಿ ನೌಕರರಿಂದ ಬಾಕಿ ಇರುವ ಮೊಬಲಗಿನ ಬಗೆಗೆ, ಸಂಬಂಧಿತ ವೇತನ ಬಟವಾಡೆ ಅಧಿಕಾರಿಗಳೊಂದಿಗೆ, ಮನೆ ಬಾಡಿಗೆ ಭತ್ಯವನ್ನು ಸ್ವೀಕರಿಸಲೋಸುಗ, ಪತ್ರ ವ್ಯವಹಾರವನ್ನು ಮಾಡಲಾಗುತ್ತಿದೆ.
3.	31–03–2025ರಂದಿನ ಬಂಡವಾಳ ಸಾಲಗಾರರ ಬಗೆಗಿನ 1928.11 ಲಕ್ಷ ರೂ.ಗಳು (ಟಿಪ್ಪಣಿ ಸಂಖ್ಯೆ–21) ವ್ಯಾಪಾರಿ/ಭದ್ರತಾ ಠೇವಣಿಗಳೆಡೆಗಿನ 4197.52 ಲಕ್ಷ ರೂ.ಗಳು ಮತ್ತು ವೆಚ್ಚಗಳೆಡೆಗಿನ ಸಾಲಗಾರರು ರೂ. 10,187.82 ಲಕ್ಷ ರೂ.ಗಳೂ(ಟಿಪ್ಪಣಿ ಸಂಖ್ಯೆ–22), ಪಾವತಿಯಾಗದ ವ್ಯಾಪಾರಿ ದಾಯಿತ್ವಗಳ ರೂ. 2125.76 ಲಕ್ಷ ರೂ.ಗಳು (ಟಿಪ್ಪಣಿ ಸಂಖ್ಯೆ–20) ಬಗೆಗೆ ಶಿಲ್ಕು ದೃಢೀಕರಣವನ್ನು ಪಡೆದುಕೊಂಡಿರುವುದಿಲ್ಲ. ಮೇಲ್ಕಂಡವುಗಳ ಬಗೆಗಿನ ಪರಿಶೋಧನಾ ಸಾಕ್ಷ್ಯಗಳ ಕೊರತೆಯಿಂದಾಗಿ, ಇಂಡ್–ಎಎಸ್ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳ ನಿಖರತೆ ಮತ್ತು ಅವುಗಳ ಮೇಲೆ, ಇವು ಬೀರುವ ಪರಿಣಾಮವೇನಾದರೂ ಇದ್ದಲ್ಲಿ ನಾವು ಅವುಗಳ ಬಗೆಗೆ ಟೀಕೆ ಮಾಡಲು ಅಸಮರ್ಥರಾಗಿದ್ದೇವೆ. ಆಡಳಿತ ವರ್ಗವು ತಾನು ವಿವಿಧ ಪಾಕ್ಷಾಕಾರರುಗಳಿಂದ ದೃಢೀಕರಣ ಸ್ವೀಕರಿಸುವ ಪ್ರಕ್ರಿಯೆಯಲ್ಲಿ ತೊಡಗಿದೆ ಮತ್ತು ಸುಮಾರು ಶೇ. 20–25ರಷ್ಟು ವ್ಯಾಪಾರಿ ಬಾಕಿದಾರರಿಂದ ದೃಢೀಕರಣಗಳನ್ನು ಸ್ವೀಕರಿಸಲಾಗಿದೆಯೆಂದು ನಿವೇದಿಸಿದೆ.	ವಿವಿಧ ಸಾಲಗಾರರಿಂದ ದೃಢೀಕರಣವನ್ನು ಪಡೆಯುವ ಕಾರ್ಯವನ್ನು ಮೂರನೇ ಪಕ್ಷಾಕಾರ ಕಂಪನಿಗೆ, ಎಂದರೆ ಒಂದು ಸಮಾಲೋಚಕ ಕಂಪನಿಗೆ ವಹಿಸಿದೆ. ಈ ಸಮಾಲೋಚಕ ಕಂಪನಿಯ ಪುನರಾವರ್ತಿತ ಹಿಂಬಾಲಿಕೆಯಿಂದಾಗಿಯೂ ಸಹ ಶೇ. 35 ರಷ್ಟು ಸಾಲಗಾರರಿಂದ (ವೆಚ್ಚಗಳೆಡೆಗಿನ ಸಾಲಗಾರರು) ದೃಢೀಕರಣಗಳನ್ನು ಪಡೆಯಲಾಗಿದೆ. ವಿವಿಧ ಸಾಲಗಾರರಿಂದ ಬಂದ ಪ್ರತಿಕ್ರಿಯೆಗಳು ಪ್ರೋತ್ಸಾಹದಾಯಕವಾಗಿರುವುದಿಲ್ಲ. ಈ ಸಮಾಲೋಚಕ ಕಂಪನಿಯು 50.03 ಕೋಟಿ ರೂ.ಗಳ ಬಾಕಿ ಇರುವ 204 ವ್ಯಾಪಾರಿಗಳನ್ನು ತಾನು ತಲುಪಲು ಸಾಧ್ಯವಾಗಿದೆ ಎಂದು ತಿಳಿಸುತ್ತಾ ಅದು 28.86 ಕೋಟಿ ರೂ.ಗಳಷ್ಟು ಎಂದರೆ ಶೇಕಡಾ ಸುಮಾರು 58 ರಷ್ಟು ಮೊತ್ತಕ್ಕೆ ದೃಢೀಕರಣಗಳನ್ನು ಸ್ವೀಕರಿಸಲಾಗಿದೆ ಎಂದು ವರದಿ ಮಾಡಿದೆ. ಸಮಾಲೋಚಕ ಕಂಪನಿಯು, ಇತರೇ ಪ್ರತಿಕ್ರಿಯೆ ನೀಡದ ವ್ಯಾಪಾರಿಗಳ ಪುನರಾವರ್ತಿತ ಹಿಂಬಾಲಿಕೆಯನ್ನು ನಡೆಸಿದೆ. ವ್ಯಾಪಾರಿಗಳಿಂದ ಶಿಲ್ಕು ದೃಢೀಕರಣಗಳನ್ನು ತದನಂತರ ಸ್ವೀಕರಿಸಲಾಗಿದ್ದು, ತದನಂತರದ ಪಾವತಿಗಳನ್ನು ಮುಂದಿನ ವರ್ಷದಲ್ಲಿ ಪರಿಶೀಲಿಸಿದಾಗ ಇದರಿಂದ ಬಹುಪಾಲು ದೃಢೀಕರಣಗಳನ್ನು ಸ್ಥಿರಪಡಿಸಬಹುದಾಗಿದೆ. ವ್ಯಾಪಾರಿ ಪಾವತಿಗಳು ಮತ್ತು ಬಂಡವಾಳ ಸಾಲಗಾರರೆಡೆಗಿನ ಬಾಕಿ ಇರುವ ಬಿಲ್ಲುಗಳು ಮತ್ತು ತದನಂತರದ ತೀರಿಸುವಿಕೆಯ ವಿವರಗಳನ್ನು ಲೆಕ್ಕಪರಿಶೋಧನೆಗೆ ಸಿದ್ಧವಾಗಿ ಲಭ್ಯವಿದ್ದವು. ವ್ಯಾಪಾರಿ ಪಾವತಿಗಳು ರವಾನೆಯಲ್ಲಿರುವ ಸರಕುಗಳೆಡೆಗಿನ ಏರ್ಪಾಡುಗಳನ್ನು ಒಳಗೊಂಡಿದ್ದು ವಿವರಗಳು/ಟಿಪ್ಪಣಿಗಳನ್ನು

ಕ್ರಮ ಸಂ.	ಲೆಕ್ಕ ಪರಿಶೋಧಕರ ಷರತ್ತುಬದ್ಧ ಅಭಿಪ್ರಾಯ	ಕಂಪನಿಯ ಉತ್ತರಗಳು
		ಲೆಕ್ಕ ಪರಿಶೋಧನೆಗೆ ನೀಡಲಾಗಿದೆ. ಸರಕು ಸ್ವೀಕೃತಿ ಚೀಟಿಗಳು, ಖರೀದಿ ವೋಚರುಗಳು ಮತ್ತು ಪಾವತಿ ವೋಚರುಗಳು ಈ ಬಿಲ್ಲುಗಳ ತೀರಿಸುವಿಕೆಯ ವಿವರಗಳೂ ಸಹ ಲೆಕ್ಕಪರಿಶೋಧನೆಗೆ ಸಿದ್ಧವಾಗಿ ಲಭ್ಯವಿದ್ದವು. ವ್ಯಾಪಾರಿ/ಭದ್ರತಾ ಠೇವಣಿಗಳು, ಮುಂಗಡ ಹಣ/ಭದ್ರತಾ ಠೇವಣಿಗಳ ಮೊಬಲಗು ಮತ್ತು ದಾಖಲೆಗಳು, ಮುಂಗಡ ಹಣದ ಸ್ವೀಕೃತಿ, ಭದ್ರತಾ ಠೇವಣಿಯ ವಸೂಲಾತಿ ಬಿಲ್ಲುಗಳು ಮತ್ತು ತದನಂತರ ಕಾರ್ಯಗಳ/ಒಪ್ಪಂದಗಳ ಮುಕ್ತಾಯ ನಂತರ ಇತ್ಯರ್ಥದ ವಿವರಗಳು ಲೆಕ್ಕ ಪರಿಶೋಧನೆಗೆ ಸಿದ್ಧವಾಗಿ ಲಭ್ಯವಿದ್ದವು. ವೆಚ್ಚಗಳಡೆಗಿನ ವಿವಿಧ ಸಾಲಗಾರರಲ್ಲಿ, ಇಂಧನ ಬಳಕೆ, ವೇತನ, ಉದ್ಯೋಗಿಗಳ ಭವಿಷ್ಯ ನಿಧಿ(ಸಾಲ) ಮರುಪಾವತಿ, ನಿವೃತ್ತ ಉದ್ಯೋಗಿಗಳ ವೇತನ ಬಾಕಿಗಳೆಡೆಗಿನ ಬಾಕಿ ಇರುವ ಏರ್ಪಾಡುಗಳೂ ಒಳಗೊಂಡಿವೆ. ಇಂತಹ ಬಾಕಿಗಳೆಡೆಗಿನ ಏರ್ಪಾಡುಗಳ ಬಗೆಗೆ ಸ್ಥಿರೀಕರಣವನ್ನು ಪಡೆಯುವುದು ಸಾಧ್ಯವಿರುವುದಿಲ್ಲ. ಆದಾಗ್ಯೂ, ಕಂಪನಿಯು ಅನುಸೂಚಿಗಳು, ಬಿಲ್ಲುಗಳು, ದಾಖಲೆಗಳು, ಕಾರ್ಯಕಾರಿ ಶೀಟುಗಳು, ಅಂದಾಜುಗಳು ಮತ್ತು ಇತರ ದಸ್ತಾವೇಜುಗಳು ಸಾಕ್ಷ್ಯಗಳನ್ನು ಹೊಂದಿದ್ದು ಅವುಗಳ ತದನಂತರದ ಪಾವತಿಗಳ ವಿವರಗಳನ್ನು ಲೆಕ್ಕಪರಿಶೋಧನೆಗಾಗಿ ಹೊಂದಿದೆ.
4.	ಕಂಪನಿಯು ಅನುಗ್ರಹ ಧನ ಪಾವತಿಗಾಗಿ ಒಟ್ಟು 1763.10 ಲಕ್ಷ ರೂ.ಗಳ ಏರ್ಪಾಡನ್ನು [(ಟಿಪ್ಪಣಿ ಸಂಖ್ಯೆ 35(5)] ಮಾಡಿದ್ದು, ಇದರಲ್ಲಿ 2022–23ನೇ ವರ್ಷಕ್ಕೆ 597.87 ಲಕ್ಷ ರೂ.ಗಳು, 2023–24ನೇ ವರ್ಷಕ್ಕೆ 587.34 ಲಕ್ಷ ರೂ.ಗಳು, 2024–25ನೇ ವರ್ಷಕ್ಕೆ 577.89 ಲಕ್ಷ ರೂ.ಗಳಿದ್ದು ಇವನ್ನು ಕರ್ನಾಟಕ ಸರ್ಕಾರ ಅನುಮೋದನೆ ಬಾಕಿ ಇರುವಂತೆಯೇ ಲೆಕ್ಕ ಪುಸ್ತಕಗಳಲ್ಲಿ ಪರಿಗಣಿಸಲಾಗಿದೆ.	ದಿ ಹಟ್ಟಿ ಚಿನ್ನದ ಗಣಿ ಕಂಪನಿಯು ಒಂದು ಲಾಭಯುತ ಕಂಪನಿಯಾಗಿದ್ದು, ಅದು ತನ್ನ ಉದ್ಯೋಗಿಗಳಿಗೆ ಅನುಗ್ರಹಧನ ಪಾವತಿಗಾಗಿ ಒಂದು ರಚನಾತ್ಮಕ ದಾಯಿತ್ವವನ್ನು ಹೊಂದಿದೆ. ಕಂಪನಿಯು ಅನುಗ್ರಹ ಧನ ಪಾವತಿಗಾಗಿ ಇರುವ ಎಲ್ಲಾ ಷರತ್ತುಗಳನ್ನು ಎಂದರೆ ಲಾಭಾಂಶ ಪಾವತಿ, ಹಂಚಿಕೆಯಾಗಬಲ್ಲ ಹೆಚ್ಚುವರಿ, ಸಾಲ ಮರುಪಾವತಿ ಇತ್ಯಾದಿಗಳನ್ನು ಪೂರೈಸಿದೆ ಮತ್ತು ಅನುಗ್ರಹಧನದ ಪಾವತಿಗೆ ಸರ್ಕಾರಕ್ಕೆ ಅನುಮೋದನೆ ಕೋರಿ ನಿಗದಿತ ರೂಪದಲ್ಲಿ ಅರ್ಜಿ ಸಲ್ಲಿಸಿದೆ. ಈ ಅನುಮೋದನೆ ಪಡೆಯುವತ್ತ ಕಂಪನಿಯು ನಿಯತವಾಗಿ ಸರ್ಕಾರಿ ಅಧಿಕಾರಿಗಳಲ್ಲಿ ಹಿಂಬಾಲಿಕೆ ಪ್ರಯತ್ನಗಳನ್ನು ಮಾಡುತ್ತಿದ್ದು, ಅನುಮೋದನೆಯನ್ನು ಶೀಘ್ರವೇ ಪಡೆಯಲಾಗುವುದು.

ಕ್ರಮ ಸಂ.	ಲೆಕ್ಕ ಪರಿಶೋಧಕರ ಷರತ್ತುಬದ್ಧ ಅಭಿಪ್ರಾಯ	ಕಂಪನಿಯ ಉತ್ತರಗಳು
5.	ಕಂಪನಿಯು 339.09 ಲಕ್ಷ ರೂ.ಗಳ ಸ್ಥಾಯಿ ಬಾಡಿಗೆಯನ್ನು ಕರ್ನಾಟಕ ಸರ್ಕಾರದ ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ಪಾವತಿಸಿರುವುದಿಲ್ಲ. ಗಣಿಗಳು ಮತ್ತು ಖನಿಜಗಳು (ಅಭಿವೃದ್ಧಿ ಮತ್ತು ನಿಬಂಧನೆ) ಕಾನೂನು 1957 ಮತ್ತು ಖನಿಜ (ಸರ್ಕಾರಿ ಕಂಪನಿಯಿಂದ ಗಣಿಗಾರಿಕೆ) ನಿಯಮ 2015ರ ರೀತ್ಯ ಎಲ್ಲಾ ಗಣಿ ಗುತ್ತಿಗೆಗಳನ್ನು 50 ವರ್ಷಗಳಿಗೆ ನೀಡಲಾಗುವುದು ಮತ್ತು ಗುತ್ತಿಗೆದಾರರು ಸ್ಥಾಯಿ ಬಾಡಿಗೆ ಅಥವಾ ರಾಜಧನದಲ್ಲಿ ಯಾವುದು ಅಧಿಕವೋ ಅದನ್ನು ಪಾವತಿಸಬೇಕಿದೆ. ಕೇಂದ್ರ ಸರ್ಕಾರದ ತಾ. 02.09.2019ರ ರಾಜ್ಯ ಪತ್ರದಲ್ಲಿ, ಸ್ಥಾಯಿ ಬಾಡಿಗೆಯನ್ನು ಪ್ರತಿ ಹೆಕ್ಟೇರಿಗೆ ವಾರ್ಷಿಕ 2000 ರೂ.ಗಳಿಂದ 4000 ರೂ.ಗಳಿಗೆ ಪರಿಷ್ಕರಣೆ ಮಾಡಲಾಗಿದೆ (5ನೇ ವರ್ಷದಿಂದ) ಮುಂದಕ್ಕೆ ಯಾವುದೇ ಚಟುವಟಿಕೆಗಳಲ್ಲದ ಆ ಗಣಿ ಗುತ್ತಿಗೆಗಳನ್ನು ಕಂಪನಿಯು ಹೊಂದಿದ್ದು, ಸ್ಥಾಯಿ ಬಾಡಿಗೆಯನ್ನು ಪ್ರತಿ ಹೆಕ್ಟೇರಿಗೆ ವಾರ್ಷಿಕ 2000 ರೂ.ಗಳ ದರದಲ್ಲಿ 02.09.2019 ರಿಂದ 31.03.2025ರವರೆಗೆ ಲೆಕ್ಕ ಹಾಕಲಾಗಿದೆ. ತತ್ಪರಿಣಾಮವಾಗಿ ಪರಿಷ್ಕೃತ ಸ್ಥಾಯಿ ಬಾಡಿಗೆಯ ಪಾವತಿಯನ್ನೂ ಮಾಡಿಲ್ಲ ಅಥವಾ ಅದಕ್ಕಾಗಿ ಏರ್ಪಾಡನ್ನೂ ಲೆಕ್ಕಪುಸ್ತಕಗಳಲ್ಲಿ ಮಾಡಿರುವುದಿಲ್ಲ. ಇದರಿಂದಾಗಿ, ಪಾವತಿಸಬೇಕಾದ ಸ್ಥಾಯಿ ಬಾಡಿಗೆಯನ್ನು ಕಡಿಮೆ ತೋರಿಸಲಾಗಿದ್ದು, ಲಾಭವನ್ನು 339.09 ಲಕ್ಷ ರೂ.ಗಳಷ್ಟು ಅಧಿಕವಾಗಿ ತೋರಿಸಲಾಗಿದೆ.	ಸೆಪ್ಟೆಂಬರ್ 2014ರ ಅಧಿಸೂಚನೆಯ ಮೇಲೆ ಕಂಪನಿಯು ಸ್ಥಾಯಿ ಬಾಡಿಗೆಯನ್ನು ಗಡವು ದಿನದೊಳಗೆ ಪಾವತಿಸುತ್ತಿದೆ. ಗಣಿ ಮತ್ತು ಭೂವಿಜ್ಞಾನ ನಿರ್ದೇಶನಾಲಯವು ವಾರ್ಷಿಕವಾಗಿ ರಾಜಧನ ಮತ್ತು ಸ್ಥಾಯಿ ಬಾಡಿಗೆಯೆಡೆಗೆ ಪರಿಶೋಧನೆಯನ್ನು ಮಾಡುತ್ತಿದ್ದು, ಪರಿಶೋಧನಾ ವರದಿಯನ್ನು ನೀಡುತ್ತದೆ. ಸೆಪ್ಟೆಂಬರ್ 2019ರ ಅಧಿಸೂಚನೆಯ ಪ್ರಕಾರ ಸ್ಥಾಯಿ ಬಾಡಿಗೆಯ ಏರಿಕೆಯ ಬಗೆಗಿನ ಲೆಕ್ಕ ಪರಿಶೋಧನಾ ಕಂಡಿಕೆಯನ್ನು ಗಮನಿಸಲಾಗಿದೆ. ಸ್ಥಾಯಿ ಬಾಡಿಗೆಯ ಪರಿಷ್ಕರಣೆಯು ಅನ್ವಯವಾಗುವಿಕೆ ಮತ್ತು ದಿನಾಂಕವನ್ನು ಪರಿಗಣಿಸಿ, ಗಣಿ ಮತ್ತು ಭೂವಿಜ್ಞಾನ ನಿರ್ದೇಶನಾಲಯದೊಂದಿಗಿನ ಸಮಾಲೋಚನೆಯ ನಂತರ, ಲೆಕ್ಕ ಪುಸ್ತಕಗಳಲ್ಲಿ ಸೂಕ್ತ ಏರ್ಪಾಡನ್ನು 2025–26ನೇ ಸಾಲಿನ ವರ್ಷದಲ್ಲಿ ಮಾಡಲಾಗುವುದು.
6.	(ಎ) ಹಿಂದಿನ ಆರ್ಥಿಕ ವರ್ಷ 2023–24ರಲ್ಲಿ ಕಂಪನಿಯು ಆದಾಯ ತೆರಿಗೆಗಾಗಿ 8,600.00 ಲಕ್ಷ ರೂ.ಗಳನ್ನು ಅಂದಾಜು ಭಾದ್ಯತೆಯ ಆಧಾರದ ಮೇಲೆ ಏರ್ಪಾಡು ಮಾಡಿತ್ತು. ಆದಾಯ ತೆರಿಗೆ ಲೆಕ್ಕ ಪತ್ರಗಳ ಪರಿಶೋಧನೆ ಮತ್ತು ಪ್ರಸ್ತುತ ವರ್ಷದಲ್ಲಿನ ಲೆಕ್ಕಾಚಾರದ ನಂತರ ವಾಸ್ತವವಾದ ತೆರಿಗೆ ಭಾದ್ಯತೆಯು 8288.00 ಲಕ್ಷ ರೂ.ಗಳೆಂದು ತೀರ್ಮಾನಿಸಲಾಯಿತು. ಇದರಿಂದಾಗಿ 312.00 ಲಕ್ಷ ರೂ.ಗಳಷ್ಟು ಅಧಿಕ ಏರ್ಪಾಡನ್ನು ಪ್ರಸ್ತುತ ವರ್ಷದ ಲಾಭ ಮತ್ತು ನಷ್ಟದ ಲೆಕ್ಕದಲ್ಲಿ ತೋರಿಸಬೇಕಾಗಿದ್ದಾಗ್ಯೂ, ಅದು ಹಿಂದಿನ ವರ್ಷಕ್ಕೆ ಸಂಬಂಧಪಟ್ಟಿದೆಂದು ಪರಿಭಾವಿಸಿ, ಅದನ್ನು ಲಾಭ ಮತ್ತು ನಷ್ಟದಲ್ಲಿ ಪರಿಗಣಿಸದೇ ಉಳಿಸಿಕೊಂಡ ಗಳಿಕೆಗಳೆಡೆಗೆ ಹೊಂದಾಣಿಕೆ ಮಾಡಲಾಗಿದೆ.	(ಎ) 2023–24ನೇ ವರ್ಷದ ಲೆಕ್ಕಪತ್ರಗಳನ್ನು ಅಂತಿಮ ಗೊಳಿಸುವಿಕೆಯ ಸಮಯದಲ್ಲಿ, ಕಂಪನಿಯು ಲಭ್ಯವಿರುವ ಮಾಹಿತಿಗಳ ಆಧಾರದಲ್ಲಿ ಆದಾಯ ತೆರಿಗೆ ಭಾದ್ಯತೆಯನ್ನು 8600.00 ಲಕ್ಷ ರೂ.ಗಳೆಂದು ಅಂದಾಜು ಮಾಡಲಾಗಿತ್ತು. ತದನಂತರ ಆದಾಯ ತೆರಿಗೆ ಲೆಕ್ಕಗಳ ಅಂತಿಮಗೊಳಿಸುವಿಕೆಯ ಸಮಯದಲ್ಲಿ ಮತ್ತು ಅವುಗಳ ಪರಿಶೋಧನೆ ಮತ್ತು ಲೆಕ್ಕಾಚಾರ ಹಾಕುವ ಸಮಯದಲ್ಲಿ, ವಾಸ್ತವವಾದ ಆದಾಯ ತೆರಿಗೆ ಭಾದ್ಯತೆಯನ್ನು 8288.00 ಲಕ್ಷ ರೂ.ಗಳೆಂದು ನಿರ್ಧರಿಸಲಾಗಿ, ಇದರಿಂದ 312.00 ಲಕ್ಷ ರೂ.ಗಳ ಅಧಿಕ ಏರ್ಪಾಡು ಆಗಿದೆ. ಈ ಅಧಿಕವಾದ ಏರ್ಪಾಡು ಪ್ರಸ್ತುತ ವರ್ಷದ ಆದಾಯವನ್ನು ಪ್ರತಿನಿಧಿಸುವುದಿಲ್ಲವಾಗಿ, ಅದು ಇನ್ನು ಅವಶ್ಯಕವಿಲ್ಲದ ಆದಾಯ ತೆರಿಗೆ ಭಾದ್ಯತೆಯ ಏರ್ಪಾಡನ್ನು ಹಿಂಪಡೆಯುವುದೇ ಆಗಿದ್ದು, ಈ ಅಧಿಕವಾದ ಏರ್ಪಾಡು ಪ್ರಸ್ತುತ ವರ್ಷದ ಆದಾಯವನ್ನು ಪ್ರತಿನಿಧಿಸುವುದಿಲ್ಲವಾಗಿ, ಅದು ಇನ್ನು ಅವಶ್ಯಕವಿಲ್ಲದ ಆದಾಯ ತೆರಿಗೆ ಏರ್ಪಾಡಿನ ವಿಪರ್ಯಯವೇ ಆಗಿದೆ. ಕಂಪನಿ ಕಾಯಿದೆಯ ಅನುಸೂಚಿ III ರ ಲಾಭ ಮತ್ತು ನಷ್ಟದ ಲೆಕ್ಕದ ನಮೂನೆಯಲ್ಲಿ ಆದಾಯ ತೆರಿಗೆಯ ಏರ್ಪಾಡುಗಳು, ತೆರಿಗೆಯ ಪೂರ್ವದ

ಕ್ರಮ ಸಂ.	ಲೆಕ್ಕ ಪರಿಶೋಧಕರ ಷರತ್ತುಬದ್ಧ ಅಭಿಪ್ರಾಯ	ಕಂಪನಿಯ ಉತ್ತರಗಳು
		ಲಾಭವನ್ನು ನಿರ್ಧರಿಸಿದ ನಂತರ ಬರುತ್ತದೆ ಮತ್ತು ಅಂತಹ ವಿಪರ್ಯಯವು ಲಾಭ ಮತ್ತು ನಷ್ಟದ ಲೆಕ್ಕದಲ್ಲಿ ತೋರಿಸಿದಲ್ಲಿ, ಅದು ಪ್ರಸ್ತುತ ವರ್ಷದ ಕಾರ್ಯಾಚರಣೆಯ ಫಲಿತಾಂಶವನ್ನು ವಿರೂಪಗೊಳಿಸುತ್ತಿತ್ತು. ಈ ಲೆಕ್ಕಾಚಾರದ ವ್ಯವಹರಿಸುವಿಕೆಯನ್ನು ಪರಿಶೋಧನಾ ತಂಡದೊಂದಿಗಿನ ಚರ್ಚೆಯ ನಂತರ ಅಂತಿಮಗೊಳಿಸಲಾಗಿತ್ತು. ಆದಾಗ್ಯೂ ಪರಿಶೋಧನಾ ಸಲಹೆಯನ್ನು ಗಮನಿಸಲಾಗಿದೆ ಮತ್ತು ಅದೇ ತರಹದ ವ್ಯವಹಾರಗಳನ್ನು ಭವಿಷ್ಯದಲ್ಲಿ, ಪರಿಶೋಧನಾ ಸಲಹೆಯಂತೆಯೇ ಮಾಡಲಾಗುವುದು.
	(ಬಿ) 2008–09ನೇ ಕರ ನಿರ್ಧರಣಾ ವರ್ಷದಲ್ಲಿ, ಕಂಪನಿಯು ಸ್ವೀಕರಿಸಬೇಕಿರುವ 6,70,19,264 ರೂ.ಗಳ ಆದಾಯ ತೆರಿಗೆ ಹಿಂಪಡೆತವನ್ನು ಪರಿಗಣಿಸಿತ್ತು. ಆದಾಯ ತೆರಿಗೆ ಕಮೀಷನರ್ ವೃತ್ತ 7(1)(1), ಬೆಂಗಳೂರುರವರ 25ನೇ ಜೂನ್ 2024ರ ಆದೇಶದ ರೀತ್ಯ ಆದಾಯ ತೆರಿಗೆ ಹಿಂಪಡೆತವನ್ನು 10,21,41,149 ಎಂದು ನಿರ್ಧರಿಸಲಾಗಿದ್ದು ಇದರಿಂದ 3,51,21,885 ರೂ.ಗಳಷ್ಟು ವ್ಯತ್ಯಾಸವೇರ್ಪಟ್ಟಿದೆ. ಈ ವ್ಯತ್ಯಾಸಕ್ಕೆ ನಿರ್ದಿಷ್ಟವಾದ ವಿಂಗಡಣಾ ವಿವರಗಳ ಅಲಭ್ಯತೆಯಿಂದಾಗಿ ಮತ್ತು ಹಿಂಪಡೆತವು ಹಿಂದಿನ ವರ್ಷಕ್ಕೆ ಸಂಬಂಧಿಸಿದ್ದೆಂದು ಭಾವಿಸಿ, ಪ್ರಸ್ತುತ ವರ್ಷದ ಫಲಿತಾಂಶವನ್ನು ಅಪಹೇಳಿಕೆಗಳಿಂದ ಮುಕ್ತವಾಗಿರಿಸಲು ಕಂಪನಿಯು ಇದನ್ನು ಲಾಭ ಮತ್ತು ನಷ್ಟದ ಮೂಲಕ ಪರಿಗಣಿಸದೇ, ಉಳಿಸಿಕೊಂಡ ಗಳಿಕೆಗಳೆಡೆಗೆ ಹೊಂದಾಣಿಕೆ ಮಾಡಿದೆ. ಇದರಿಂದಾಗಿ ಲಾಭವನ್ನು 351.21 ಲಕ್ಷ ರೂ.ಗಳಷ್ಟು ಕಡಿಮೆ ತೋರಿಸಲಾಗಿದೆ.	(ಬಿ) 2008–09ನೇ ಕರನಿರ್ಧರಣಾ ವರ್ಷಕ್ಕೆ, ಸ್ವೀಕರಿಸಬೇಕಾದ ಆದಾಯ ತೆರಿಗೆ ಹಿಂಪಡೆತವಾಗಿ 6,70,19,264 ರೂ.ಗಳು ಇದ್ದು, ತದನಂತರ ತಾ. 25.06.2024ರ ಕರ ನಿರ್ಧಾರಣಾ ಆದೇಶದಲ್ಲಿ, ಇಲಾಖೆಯು, ಹಿಂಪಡೆತವನ್ನು 10,21,41,149 ರೂ.ಗಳೆಂದು ನಿರ್ಧರಿಸಿದ್ದು, ಇದರಲ್ಲಿ ಸೆಕ್ಷನ್ 244A ರ ಪ್ರಕಾರದ ಹೆಚ್ಚುವರಿ ಬಡ್ಡಿಯನ್ನು ಪರಿಗಣಿಸಿರುವುದಿಲ್ಲ. ವ್ಯತ್ಯಾಸವಾಗಿರುವ 35,21,885 ರೂ.ಗಳ ಬಗೆಗೆ ವಿವರಗಳು ಲಭ್ಯವಿರುವುದಿಲ್ಲ. ಹಾಗಾಗಿ ಪ್ರಸ್ತುತ ವರ್ಷದ ಫಲಿತಾಂಶವನ್ನು ಅಪಹೇಳಿಕೆಯಿಂದ ಮುಕ್ತವಾಗಿಸಲು, ಅದನ್ನು ಲಾಭ ಮತ್ತು ನಷ್ಟದ ಮೂಲಕ ಲೆಕ್ಕಕ್ಕೆ ಹಾಕದೇ ಉಳಿಸಿಕೊಂಡ ಗಳಿಕೆಗೆ ವರ್ಗಾಯಿಸಲಾಗಿದೆ. ಈ ಹಿಂಪಡೆತವು ಬಹಳ ಹಳೆಯದಾದ ಕರನಿರ್ಧಾರಣಾ ವರ್ಷ 2008–09ಕ್ಕೆ ಸಂಬಂಧಿಸಿರುವುದರಿಂದ ಮತ್ತು ಬೆಂಬಲ ನೀಡುವ ವಿಂಗಡಣಾ ವಿವರಗಳು ಮತ್ತು ನಿರ್ದಿಷ್ಟ ಅಭ್ಯಾರೋಪಣೆಗಳಲ್ಲದಿರುವುದರಿಂದ ಕಂಪನಿಯು ಸಂಪ್ರದಾಯವಾದಿ ದೃಷ್ಟಿಕೋನದಿಂದಾಗಿ ಉಳಿಸಿಕೊಂಡ ಗಳಿಕೆಗಳಲ್ಲಿ ಹೊಂದಾಣಿಕೆ ಮಾಡಿದೆ. ಈ ಲೆಕ್ಕಾಚಾರದ ವ್ಯವಹರಿಸುವಿಕೆಯನ್ನು ಪರಿಶೋಧನಾ ತಂಡದೊಂದಿಗೆ ಸಮಾಲೋಚನೆ ನಡೆಸಿದ ನಂತರ ಅಂತಿಮಗೊಳಿಸಲಾಗಿದೆ. ಆದಾಗ್ಯೂ, ವಿವರಗಳನ್ನು ಪಡೆಯಲೋಸುಗ ಪ್ರಯತ್ನಗಳನ್ನು ಮಾಡಲಾಗುವುದು ಮತ್ತು ಅವಶ್ಯಕವಿರುವ ಹೊಂದಾಣಿಕೆಗಳೇನಾದರೂ ಇದ್ದಲ್ಲಿ, ಆ ವಿವರಣೆಗಳಿಗನುಸಾರವಾಗಿ ಆರ್ಥಿಕ ವರ್ಷ 2025–26ರಲ್ಲಿ ಮಾಡಲಾಗುವುದು.

ಕ್ರಮ ಸಂ.	ಲೆಕ್ಕ ಪರಿಶೋಧಕರ ಷರತ್ತುಬದ್ಧ ಅಭಿಪ್ರಾಯ	ಕಂಪನಿಯ ಉತ್ತರಗಳು
	(ಸಿ) ಪ್ರಸ್ತುತ ವರ್ಷದಲ್ಲಿ, ಕಂಪನಿಯು 85.01 ಲಕ್ಷ ರೂ.ಗಳಷ್ಟು ಕೂಡಿ ಬಂದ ಬಡ್ಡಿಯ ವಿಪರ್ಯಯವನ್ನು ನೇರವಾಗಿ ಉಳಿಸಿಕೊಂಡ ಗಳಿಕೆಗಳೆಡೆಗೆ ಹೊಂದಾಣಿಕೆ ಮಾಡಿದೆ. ಈ ಬಡ್ಡಿಯನ್ನು ಹಿಂದಿನ ವರ್ಷಗಳಲ್ಲಿ ಆದಾಯವೆಂದು ಪರಿಗಣಿಸಲಾಗಿದ್ದು, ವಿಪರ್ಯಯವು ಬಡ್ಡಿಯ ಮನ್ನಾ ಆಗಿರುವುದರಿಂದ ಮತ್ತು ಅದು ಹಣಕಾಸು ಆಸ್ತಿಗಳಿಗೆ ಸಂಬಂಧಿಸಿರುವುದರಿಂದ ಅದನ್ನು ಲಾಭ ಮತ್ತು ನಷ್ಟದ ಲೆಕ್ಕಕ್ಕೆ ಹಾಕಬೇಕಾಗಿದ್ದು, ಇತರೇ ಈಕ್ವಿಟಿ/ಉಳಿಸಿಕೊಂಡ ಗಳಿಕೆಗಳೆಡೆಗೆ ಹೊಂದಾಣಿಕೆ ಮಾಡುವಂತಿಲ್ಲ. ಇದರಿಂದಾಗಿ ಲಾಭವನ್ನು 85.01 ಲಕ್ಷ ರೂ.ಗಳಷ್ಟು ಅಧಿಕವಾಗಿ ತೋರಿಸಲಾಗಿದೆ.	(ಸಿ) ಮೇಲೆ ತಿಳಿಸಿರುವಂತೆ, ಇದು ಹಿಂದಿನ ವರ್ಷಗಳ ಆದಾಯದ ವಿಪರ್ಯಯವಾಗಿದ್ದು, ಬಡ್ಡಿಯ ಆದಾಯದೆಡೆಗೆ ಹೊಂದಾಣಿಕೆ ಮಾಡಿದಲ್ಲಿ ಅದರಿಂದ ಪ್ರಸ್ತುತ ವರ್ಷದಲ್ಲಿನ ಆದಾಯವು ವಿರೂಪಗೊಳ್ಳುತ್ತಿತ್ತು. ಭವಿಷ್ಯದಲ್ಲಿ ಈ ತರಹದ ವ್ಯವಹಾರಗಳ ಪರಿಪಾಲನೆಗಾಗಿ ಲೆಕ್ಕಪರಿಶೋಧಕರ ಸಲಹೆಯನ್ನು ಗಮನದಲ್ಲಿಟ್ಟುಕೊಳ್ಳಲಾಗಿದೆ. ಕಂಪನಿಯು ಬಡ್ಡಿಯನ್ನು ಹಿಂದಿನ ವರ್ಷಗಳಲ್ಲಿ ಆದಾಯವೆಂದು ಪರಿಗಣಿಸಿದ್ದು, ಅದರಿಂದ ಅದರ ವಿಪರ್ಯಯವನ್ನು ಸಂಚಿತಗೊಂಡ ಹಿಂದಿನ ವರ್ಷಗಳ ಲಾಭವಾದ ಉಳಿಸಿಕೊಂಡ ಗಳಿಕೆಗಳೆಡೆಗೆ ಹೊಂದಾಣಿಕೆ ಮಾಡಿದೆ.

ಕ್ರಮ ಸಂ.	ಲೆಕ್ಕಪರಿಶೋಧನಾ ವರದಿಯ ಅಭಿಪ್ರಾಯಗಳ ಒತ್ತು	ಕಂಪನಿಯ ಉತ್ತರಗಳು
1.	ಕರ್ನಾಟಕ ಸರ್ಕಾರವು ತಾ. 06.12.2024ರಂದು ಅನುಮೋದಿಸಿದ ವೇತನ ಪರಿಷ್ಕರಣೆ ಮತ್ತು ಕಾರ್ಮಿಕರೊಂದಿಗೆ ತಾ. 23.12.2024 ರಂದು ಸಹಿ ಮಾಡಿದ ಒಡಂಬಡಿಕೆಯೆಡೆಗೆ ಗಮನ ಸೆಳೆಯುತ್ತೇವೆ. 01–04–2021 ರಿಂದ 31.03.2024ರ ಅವಧಿಯ ಬಾಕಿ ವೇತನಕ್ಕಾಗಿ, ಕಂಪನಿಯು 84.22 ಕೋಟಿ ರೂ.ಗಳ ಏರ್ಪಾಡನ್ನು ಮಾಡಿದ್ದು, ಅದರಲ್ಲಿ ಭವಿಷ್ಯ ನಿಧಿಯ ಮೊಬಲಗನ್ನು ಕಳೆದಿಲ್ಲ. ಈ ವಿಷಯದಲ್ಲಿ ನಮ್ಮ ಅಭಿಪ್ರಾಯವು ಮಾರ್ಪಾಡಾಗಿರುವುದಿಲ್ಲ	ವಾಸ್ತವವಾದ ವೇತನ ಬಾಕಿಯ ಪಾವತಿಯನ್ನು 16ನೇ ಏಪ್ರಿಲ್ 2025ರಲ್ಲಿ ಮಾಡಲಾಗಿದೆ. ಭವಿಷ್ಯ ನಿಧಿಯೆಡೆಗಿನ ಕಡಿತವು, ವೇತನ ವಿತರಣೆಯಾದಾಗ ಉಂಟಾಗುವುದು ಮತ್ತು ಹಾಗಾಗಿ ಭವಿಷ್ಯ ನಿಧಿಯೆಡೆಗಿನ ಕಡಿತವು ಲೆಕ್ಕ ಪತ್ರಗಳ ಅನುಮೋದನೆಗೆ ಮುಂಚಿತವಾಗಿ ಮುಕ್ತಾಯಗೊಂಡಿದ್ದು 31ನೇ ಮಾರ್ಚ್ 2025ರಂದಿನ ಲೆಕ್ಕ ಪತ್ರದಲ್ಲಿ ವೇತನ ಬಾಕಿಯೆಡೆಗೆ ಏರ್ಪಾಡನ್ನು ಮಾಡಲಾಗಿದೆ.

ಭಾರತೀಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ
ಪ್ರಧಾನ ಮಹಾಲೇಖಾಪಾಲರ ಕಛೇರಿ (ಪರಿಶೋಧನೆ – II)
ಕರ್ನಾಟಕ, ಬೆಂಗಳೂರು

ಗೌಪ್ಯ

ಸಂಖ್ಯೆ. PAG (Audit II)AMG II/TSC-2(232)2025-26/209 **ತಾ : 21.11.2025**

ಗೆ,

ವ್ಯವಸ್ಥಾಪಕ ನಿರ್ದೇಶಕರು,
ದಿ ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ, ಬೆಂಗಳೂರು
ಮೂರನೇ ಮಹಡಿ, ಕೆಹೆಚ್‌ಬಿ ಶಾಪಿಂಗ್ ಕಾಂಪ್ಲೆಕ್ಸ್
ನ್ಯಾಷನಲ್ ಗೇಮ್ಸ್ ವಿಲೇಜ್, ಕೋರಮಂಗಲ
ಬೆಂಗಳೂರು-560 047

ವಿಷಯ: **ದಿ ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತದ 31ನೇ ಮಾರ್ಚ್ 2025**ಕ್ಕೆ ಅಂತ್ಯಗೊಂಡ ವರ್ಷದ, ಲೆಕ್ಕಪತ್ರಗಳ ಮೇಲೆ ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರ, ಕಂಪನಿ ಕಾಯಿದೆ 2013ರ ಸೆಕ್ಷನ್ 143(6)(ಬಿ)ರಡಿಯಲ್ಲಿನ ಟೀಕೆ ಟಿಪ್ಪಣಿಗಳು.

ಮಾನ್ಯರೇ,

1. ಕಂಪನಿ ಕಾಯಿದೆ 2013ರ ಸೆಕ್ಷನ್ 143(6)(ಬಿ)ರಡಿಯಲ್ಲಿ **ದಿ ಹಟ್ಟಿ ಚಿನ್ನ ಗಣಿ ಕಂಪನಿ ನಿಯಮಿತದ 31ನೇ ಮಾರ್ಚ್ 2025**ರ ವರ್ಷದ ಲೆಕ್ಕಪತ್ರಗಳ ಮೇಲಿನ ಟೀಕೆ ಟಿಪ್ಪಣಿಗಳನ್ನು ಈ ಮೂಲಕ ಕಳುಹಿಸುತ್ತಿದ್ದೇನೆ.

2. ಕಂಪನಿಯ ವಾರ್ಷಿಕ ಸಾಮಾನ್ಯ ಸಭೆಯು ದೃಢೀಕೃತ ಲೆಕ್ಕಪತ್ರಗಳನ್ನು ಅಳವಡಿಸಿಕೊಂಡನಂತರ, ದೃಢೀಕರಣಗೊಂಡ ಲೆಕ್ಕಪತ್ರಗಳು, ಲೆಕ್ಕ ಪರಿಶೋಧಕರ ವರದಿ ಮತ್ತು ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರ ಟೀಕೆ ಟಿಪ್ಪಣಿಗಳನ್ನು ಅಳವಡಿಸಿಕೊಂಡ ನಂತರ, ವಾರ್ಷಿಕ ಸಭೆಯ ನಡಾವಳಿಗಳನ್ನು ಈ ಕಛೇರಿಗೆ ಕಳುಹಿಸಿಕೊಡುವುದು. ವಾರ್ಷಿಕ ವರದಿಯ ಮುದ್ರಿತ ಮೂರು ಪ್ರತಿಗಳನ್ನೂ ಸಹ ಈ ಕಛೇರಿಗೆ ಕಳುಹಿಸಿಕೊಡುವುದು.

3. ಈ ಪತ್ರದ ಮತ್ತು ಅದರ ಜತೆಗಿನ ಅಡಕಗಳ ಸ್ವೀಕೃತಿಯನ್ನು ದಯಮಾಡಿ ತಿಳಿಸತಕ್ಕದ್ದು.

ತಮ್ಮ ವಿಶ್ವಾಸಿ

ಸಹಿ/–

(ಅಶೋಕ್ ಸಿನ್ಹಾ)
ಪ್ರಧಾನ ಮಹಾಲೇಖಾಪಾಲಕರು (ಪರಿಶೋಧನೆ–II)
ಕರ್ನಾಟಕ, ಬೆಂಗಳೂರು

ಆಡಿಟ್ ಭವನ, 3ನೇ ಮಹಡಿ, 'ಸಿ' ಬ್ಲಾಕ್, ಅಂಚೆ ಪೆಟ್ಟಿಗೆ ಸಂಖ್ಯೆ 5398, ಬೆಂಗಳೂರು – 560001
ಫೋ : 080–22289101 ಫ್ಯಾಕ್ಸ್ : 080–22253753, E-mail : agauKarnataka2@cag.gov.in, Website : http://www.cag.gov.in/ag2/karnataka/en

ದಿ ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತದ 31ನೇ ಮಾರ್ಚ್ 2025ರಂದು ಅಂತ್ಯಗೊಂಡ ವರ್ಷಕ್ಕೆ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳ ಬಗೆಗೆ ಕಂಪನಿ ಕಾಯಿದೆ 2013ರ ಸೆಕ್ಷನ್ 143(6)(ಬಿ)ರಡಿಯಲ್ಲಿ ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರ ಟೀಕೆ ಟಿಪ್ಪಣಿಗಳು

ದಿ ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ ರವರ 31ನೇ ಮಾರ್ಚ್ 2025ರಂದು ಅಂತ್ಯಗೊಂಡ ವರ್ಷಕ್ಕೆ ಕಂಪನಿ ಕಾಯಿದೆ 2013ರಲ್ಲಿ ನಿರ್ದಿಷ್ಟಪಡಿಸಿರುವ ಆರ್ಥಿಕ ವರದಿಗಾರಿಕೆಯ ಚೌಕಟ್ಟಿನಲ್ಲಿರುವಂತೆ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳ ತಯಾರಿಕೆಯು ಕಂಪನಿಯ ಆಡಳಿತ ವರ್ಗದ ಜವಾಬ್ದಾರಿಯಾಗಿರುತ್ತದೆ. ಕಾಯಿದೆಯ ಸೆಕ್ಷನ್ 139(5)ರಡಿಯಲ್ಲಿ ನೇಮಕಗೊಂಡ ಶಾಸನಬದ್ಧ ಲೆಕ್ಕ ಪರಿಶೋಧಕರು, ಕಾಯಿದೆಯ ಸೆಕ್ಷನ್ 143ರಡಿಯಲ್ಲಿ ಈ ಆರ್ಥಿಕ ಸ್ಥಿತಿವಿವರಣಾ ಪಟ್ಟಿಗಳ ಬಗೆಗೆ, ಕಾಯಿದೆಯ ಸೆಕ್ಷನ್ 143(10)ರಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಲೆಕ್ಕ ಪರಿಶೋಧನೆಯ ಮಾನದಂಡಗಳ ಪ್ರಕಾರ, ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ಅವರ ಜವಾಬ್ದಾರಿಯಾಗಿರುತ್ತದೆ. ಇದನ್ನು ಅವರು ತಮ್ಮ ತಾರೀಖು 10ನೇ ನವೆಂಬರ್ 2025ರ ಪರಿಷ್ಕೃತ ಪರಿಶೋಧನಾ ವರದಿಯಲ್ಲಿ ಮಾಡಿದ್ದಾರೆಂದು ಈ ವರದಿಯು ಅವರ ಹಿಂದಿನ ತಾರೀಖು 2ನೇ ಸೆಪ್ಟೆಂಬರ್ 2024ರ ವರದಿಯನ್ನು ಉತ್ಕ್ರಮಿಸುತ್ತದೆ ಎಂದು ಹೇಳಲಾಗಿದೆ.

ಕಾಯಿದೆಯ ಸೆಕ್ಷನ್ 143(6)(ಎ)ರಡಿಯಲ್ಲಿ, **ದಿ ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ** ರವರ 31ನೇ ಮಾರ್ಚ್ 2025ರಂದು ಅಂತ್ಯಗೊಂಡ ವರ್ಷಕ್ಕೆ ನಾನು ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರ ಪರವಾಗಿ ಪೂರಕ ಲೆಕ್ಕ ಪರಿಶೋಧನೆಯನ್ನು ನಡೆಸಿದ್ದೇನೆ. ಈ ಪೂರಕ ಲೆಕ್ಕ ಪರಿಶೋಧನೆಯನ್ನು ಸ್ವತಂತ್ರವಾಗಿ ಮಾಡಲಾಗಿದ್ದು, ಅದು ಶಾಸನಬದ್ಧ ಲೆಕ್ಕ ಪರಿಶೋಧಕರ ಕಾರ್ಯಶೀಲ ಕಾಗದಪತ್ರಗಳಿಗೆ ಪ್ರವೇಶಾವಕಾಶ ಇಲ್ಲದೆ ಇದ್ದು ಅದು ಅವರ ನಿಯಮಿತ ವಿಚಾರಣೆಗಳ ಮೇಲೆ ಆಧಾರಿತವಾಗಿದ್ದು ಕೆಲವು ಸೀಮಿತವಾದ ಲೆಕ್ಕಪತ್ರಗಳ ದಾಖಲೆಗಳ ಮತ್ತು ಕಂಪನಿಯ ಸಿಬ್ಬಂದಿ ವರ್ಗದ ಪರೀಕ್ಷೆಗಳಿಗೆ ಸೀಮಿತವಾಗಿದೆ.

ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯನ್ನು ನನ್ನ ಪೂರಕ ಲೆಕ್ಕ ಪರಿಶೋಧನಾ ಕಾರ್ಯದಲ್ಲಿ ಏರ್ಪಟ್ಟ ಕಂಡಿಕೆಗಳಿಂದಾಗಿ ನೀಡಬೇಕಾದ ಪರಿಣಾಮಗಳಿಗೆ ಪರಿಷ್ಕರಣೆ ಮಾಡಿರುವ ದೃಷ್ಟಿಯಲ್ಲಿ ಲೆಕ್ಕ ಪರಿಶೋಧಕರ ವರದಿಯ ಮೇಲೆ ಅಥವಾ ಅದಕ್ಕೆ ಪೂರಕವಾದ ಕಾಯಿದೆಯ ಸೆಕ್ಷನ್ 143(6)(ಬಿ) ರಡಿಯಲ್ಲಿ ಯಾವ ಟೀಕೆ ಟಿಪ್ಪಣಿಗಳೂ ಇರುವುದಿಲ್ಲ.

ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರ ಪರವಾಗಿ

ಸಹಿ/–

(ಅಶೋಕ್ ಖನ್ನಾ)

ಪ್ರಧಾನ ಮಹಾಲೇಖಾಪಾಲಕರು (ಲೆಕ್ಕಪರಿಶೋಧನೆ II)

ಕರ್ನಾಟಕ, ಬೆಂಗಳೂರು

ಬೆಂಗಳೂರು

ದಿನಾಂಕ: 21.11.2025

ಸ್ವಯಂಭು ವಿಶ್ವನಾಥನ್
ವೃತ್ತಿಪರ ಕಂಪನಿ ಕಾರ್ಯದರ್ಶಿ

ಸುಶೀಲ್ ಚಂದ್ರ ಅಪಾರ್ಟ್‌ಮೆಂಟ್, ಫ್ಲಾಟ್ ಬಿ,
17ನೇ 'ಎ' ಕ್ರಾಸ್, 10ನೇ 'ಎ' ಮೇನ್,
ಮಲ್ಲೇಶ್ವರಂ, ಬೆಂಗಳೂರು–560055
ಇ ಮೇಲ್ ಐಡಿ: cs_viswanathan@yahoo.com
ದೂರವಾಣಿ: 41674875 ಮೊಬೈಲ್: 98452–20950

ನಮೂನೆ ಸಂ. ಎಂಆರ್–3

ಸೆಕ್ರೆಟೇರಿಯಲ್ ಪರಿಶೋಧನಾ ವರದಿ

31–03–2025ರಂದು ಅಂತ್ಯಗೊಂಡ ವರ್ಷಕ್ಕೆ

ಕಂಪನಿ ಕಾಯಿದೆ 2013ರ ಸೆಕ್ಷನ್ 204(1) ಮತ್ತು ಕಂಪನಿಗಳ ಸಿಬ್ಬಂದಿಗಳ (ನೇಮಕ ಮತ್ತು ಸಂಭಾವನೆ)ಯ ನಿಯಮ 2014ರ ನಿಯಮ 9ರಂತೆ

ಗೆ,

ಸದಸ್ಯರು

ದಿ ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ

ಮೂರನೇ ಮಹಡಿ, ಕೆಹೆಚ್‌ಬಿ ಶಾಪಿಂಗ್ ಕಾಂಪ್ಲೆಕ್ಸ್, ನ್ಯಾಷನಲ್ ಗೇಮ್ಸ್ ವಿಲೇಜ್, ಕೋರಮಂಗಲ, ಬೆಂಗಳೂರು–560025, ಕರ್ನಾಟಕ ತನ್ನ ನೊಂದಾಯಿತ ಕಛೇರಿ ಹೊಂದಿರುವ **ದಿ ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ**ಕ್ಕೆ CIN U85110KA1947SGC001321 (ಇನ್ನು ಮುಂದೆ ಕಂಪನಿ ಎಂದು ಕರೆಯಲಾಗುವುದು) ಅನ್ವಯವಾಗುವ ನ್ಯಾಯಿಕ ಉಪಬಂಧಗಳ ಮತ್ತು ಉತ್ತಮ ಸಾಂಸ್ಥಿಕ ಪದ್ಧತಿಗಳ ಪಾಲನೆಗಳ ಬಗೆಗಿನ ಸೆಕ್ರೆಟೇರಿಯಲ್ ಪರಿಶೋಧನೆಯನ್ನು ನಾನು ನಡೆಸಿದ್ದೇನೆ.

ಕಂಪನಿಯು ಲಿಸ್ಟ್ ಆಗಿಲ್ಲದಿರುವ ಒಂದು ಸಾರ್ವಜನಿಕ ಕಂಪನಿ ಮತ್ತು ಸರಕಾರಿ ಕಂಪನಿಯಾಗಿದ್ದು, ಅದರ ಪಾವತಿಯಾದ ಬಂಡವಾಳದ ಶೇ. 74.34ರನ್ನು ಕರ್ನಾಟಕ ಸರ್ಕಾರ ಹೊಂದಿದೆ. ಇದು ಕರ್ನಾಟಕ ರಾಜ್ಯದಲ್ಲಿ ಚಿನ್ನದ ಮತ್ತು ಇತರೇ ಖನಿಜಗಳ ಮತ್ತು ಪ್ರಶಸ್ತ ಕಲ್ಲುಗಳ ಗಣಿಗಾರಿಕೆಯಲ್ಲಿ ತೊಡಗಿಕೊಂಡಿದೆ. ಕಂಪನಿ ಕಾಯಿದೆ 2013 ಮತ್ತು ಇತರ ಅನ್ವಯವಾಗುವ ಕಾಯಿದೆಗಳಲ್ಲದೇ, ಕರ್ನಾಟಕ ಸರ್ಕಾರವು ಸಮಯಾನುಸಮಯಕ್ಕೆ ಹೊರಡಿಸುವ ನಿರ್ದೇಶನಗಳನ್ನು, ಕಂಪನಿಯ ಹಿತಾಸಕ್ತಿಯ ದೃಷ್ಟಿಯಿಂದ ಪರಿಪಾಲಿಸಬೇಕಿರುತ್ತದೆ. ನಿಕಾಯ ನಡಾವಳಿಗಳು ಉಚಿತ ಆಧಾರ ಒರಗಿಸುವತ್ತ ಪರಿಪಾಲನೆಗಳು ಮತ್ತು ಅವುಗಳ ಮೇಲೆ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಲೋಸುಗ ಸೆಕ್ರೆಟೇರಿಯಲ್ ಪರಿಶೋಧನೆಯನ್ನು ಮಾಡಲಾಗಿದೆ. ಕಂಪನಿಯು ಯಾವುದೇ ವಿದೇಶಿ ಹೂಡಿಕೆ ಮಾಡಿಲ್ಲ. ತಾ. 5–6–2015ರ ಅಧಿಸೂಚನೆ ಸಂಖ್ಯೆ ಜಿಎಸ್‌ಆರ್ 463(ಇ) ಪ್ರಕಾರ ಸರ್ಕಾರಿ ಕಂಪನಿಗಳು ಕಂಪನಿ ಕಾಯಿದೆ 2013 ಮತ್ತು ಅದರಡಿಯಲ್ಲಿನ ನಿಯಮಗಳ ಕೆಲವು ಪ್ರಾವಧಾನಗಳಿಂದ ವಿನಾಯಿತಿ ಹೊಂದಿವೆ.

ನನ್ನ ಪರಿಶೋಧನೆಗೆ ಒಳಪಟ್ಟು, ಕಂಪನಿಯು ಇಟ್ಟಿರುವ ಪುಸ್ತಕಗಳು, ಕಾಗದ ಪತ್ರಗಳು, ನಡಾವಳಿಯ ದಾಖಲೆಗಳು, ನಮೂನೆಗಳು ಮತ್ತು ಸಲ್ಲಿಕೆಗಳು ಮತ್ತು ಇತರೇ ದಾಖಲೆಗಳ ಆಧಾರದ ಮೇಲೆ ಮತ್ತು ನನಗೆ ಕಂಪನಿಯು, ಅದರ ಅಧಿಕಾರಿಗಳು, ಏಜೆಂಟರು ಮತ್ತು ಪ್ರತಿನಿಧಿಗಳು, ನನ್ನ ಪರಿಶೋಧನಾಕಾರ್ಯದಲ್ಲಿ ನೀಡಿದ ಮಾಹಿತಿಗಳ ಆಧಾರದ ಮೇಲೆ, ಮತ್ತು ಲಗತ್ತಿಸಲಾದ ಪ್ರತ್ಯೇಕ ಪತ್ರಕ್ಕೆ ಒಳಪಟ್ಟಂತೆ, 31ನೇ ಮಾರ್ಚ್ 2025ನೇ ವರ್ಷದಲ್ಲಿ, ಕಂಪನಿಯು, ನ್ಯಾಯಿಕ ಉಪಬಂಧಗಳನ್ನು ಪಾಲಿಸಿದೆ ಮತ್ತು ಉಚಿತ ಮಂಡಳಿ ಕಾರ್ಯವಿಧಾನಗಳನ್ನು ಹೊಂದಿದ್ದು, ಅವುಗಳ ಪಾಲನಾ ಕಾರ್ಯರಚನೆಗಳನ್ನು ಈ ಕೆಳಗಿನ ಕಂಡಿಕೆಗಳಷ್ಟರ ಮಟ್ಟಿಗೆ ಮತ್ತು ಆ ರೀತಿಯಲ್ಲಿ ಹೊಂದಿದೆ ಎಂದು ವರದಿ ಮಾಡುತ್ತೇನೆ.

ಕೆಳಕಂಡ ಉಪಬಂಧಗಳ ಅನ್ವಯ, ಕಂಪನಿಯು ಪುಸ್ತಕಗಳು, ನಡಾವಳಿ ಪುಸ್ತಕಗಳು, ನಮೂನೆಗಳು ಮತ್ತು ಸಲ್ಲಿಕೆಗಳು ಮತ್ತು ಇತರೇ ದಾಖಲೆಗಳನ್ನು 31ನೇ ಮಾರ್ಚ್ 2025ಕ್ಕೆ ಅಂತ್ಯಗೊಂಡ ವರ್ಷಕ್ಕೆ ಇಟ್ಟಿದ್ದು ಅದನ್ನು ನಾನು ಪರೀಕ್ಷಿಸಿದ್ದೇನೆ.

ಸ್ವಯಂಭು ವಿಶ್ವನಾಥನ್
ವೃತ್ತಿಪರ ಕಂಪನಿ ಕಾರ್ಯದರ್ಶಿ

ಸುಶೀಲ್ ಚಂದ್ರ ಅಪಾರ್ಟ್‌ಮೆಂಟ್, ಫ್ಲಾಟ್ ಬಿ,
17ನೇ 'ಎ' ಕ್ರಾಸ್, 10ನೇ 'ಎ' ಮೇನ್,
ಮಲ್ಲೇಶ್ವರಂ, ಬೆಂಗಳೂರು–560055
ಇ ಮೇಲ್ ಐಡಿ: cs_viswanathan@yahoo.com
ದೂರವಾಣಿ: 41674875 ಮೊಬೈಲ್: 98452–20950

(i) ಕಂಪನಿ ಕಾಯಿದೆ 2013 ಮತ್ತು ಅದರಡಿಯಲ್ಲಿನ ನಿಯಮಗಳು;

(ii) ಭದ್ರತೆಗಳ ಒಪ್ಪಂದ (ನಿಯಮನಗೊಳಿಸುವಿಕೆ) ಕಾನೂನು 1956(ಎಸ್‌ಸಿಆರ್‌ಎ) ಮತ್ತು ಅದರಡಿಯಲ್ಲಿನ ನಿಯಮಾವಳಿಗಳು **ಅನ್ವಯವಾಗುವುದಿಲ್ಲ**.

(iii) ದಿ ಡೆಪಾಸಿಟರೀಸ್ ಕಾಯಿದೆ 1996 ಮತ್ತು ಅದರಡಿಯಲ್ಲಿನ ನಿಯಮಗಳು ಮತ್ತು ಉಪನಿಯಮಗಳು

(iv) ವಿದೇಶಿ ವಿನಿಮಯ ನಿರ್ವಹಣೆ ಕಾಯಿದೆ 1999ರಡಿಯಲ್ಲಿನ ನಿಯಮಗಳು, ವಿದೇಶಿ ನೇರ ಹೂಡಿಕೆ, ಸಾಗರೋತ್ತರ ನೇರ ಹೂಡಿಕೆ ಮತ್ತು ಬಾಹ್ಯ ವ್ಯಾಪಾರಿ ಸಾಲಗಳ ಬಗೆಗೆ – ಏಕೆಂದರೆ ವಿದೇಶಿ ನೇರ ಹೂಡಿಕೆ, ಸಾಗರೋತ್ತರ ನೇರ ಹೂಡಿಕೆ ಮತ್ತು ಬಾಹ್ಯ ವ್ಯಾಪಾರಿ ಸಾಲಗಳು ಇರುವುದಿಲ್ಲವಾದುದರಿಂದ **ಅನ್ವಯವಾಗುವುದಿಲ್ಲ**.

(v) ಭಾರತದ ಸೆಕ್ಯೂರಿಟೀಸ್ ಮತ್ತು ಎಕ್ಸ್‌ಛೇಂಜ್ ಬೋರ್ಡ್ ಕಾಯಿದೆ 1992(ಸೆಬಿ ಕಾನೂನು) ಮತ್ತು ಅದರಡಿಯಲ್ಲಿನ ನಿಯಮಗಳು **ಅನ್ವಯವಾಗುವುದಿಲ್ಲ**.

ನಾನು ಹಟ್ಟಿಯಲ್ಲಿರುವ ಗಣಿಗೆ ಭೇಟಿ ನೀಡಿ ಸಂಬಂಧಿತ ಅಧಿಕಾರಿಗಳೊಂದಿಗೆ ಗಣಿ ಉದ್ಯಮಕ್ಕೆ ಅನ್ವಯವಾಗುವ ಇತರೇ ಕಾನೂನುಗಳು ಮತ್ತು ಇತರೇ ಸಾಮಾನ್ಯ ಕಾನೂನುಗಳ ಅನ್ವಯವಾಗುವಿಕೆಯ ಬಗೆಗೆ ತಿಳಿದುಕೊಳ್ಳಲು, ಚರ್ಚಿಸಿದ್ದೇನೆ.

ಕಂಪನಿಗೆ ಅನ್ವಯವಾಗುವ ಮತ್ತು ನಿರ್ದಿಷ್ಟವಾಗಿ ಗಣಿ ಉದ್ಯಮಕ್ಕೆ ಅನ್ವಯವಾಗುವ ಈ ಕೆಳಕಂಡ ಕಾಯಿದೆಗಳು ಮತ್ತು ನಿಯಮಗಳ ಪರಿಪಾಲನೆಗಾಗಿ ಕಂಪನಿಯು ಸ್ಥಾಪಿಸಿರುವ ಪದ್ಧತಿ ಮತ್ತು ಪ್ರಕ್ರಿಯೆಗಳನ್ನು ನಾನು ಪರೀಕ್ಷಿಸಿದ್ದೇನೆ.

ಕಂಪನಿಗೆ ಅನ್ವಯವಾಗುವ ಉದ್ಯಮ ನಿರ್ದಿಷ್ಟ ಕಾಯಿದೆಗಳು, ಕಂಪನಿಯು ನೀಡಿದ ವರದಿಯ ಮೇಲೆ ಈ ಕೆಳಗಿನವುಗಳಾಗಿವೆ

1) ಗಣಿಗಳ ಕಾಯಿದೆ 1952

2) ಗಣಿಗಳು ಮತ್ತು ಖನಿಜಗಳು(ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯಿದೆ 1957

3) ಸ್ಫೋಟಕಗಳ ಕಾಯಿದೆ 1884

4) ಮಾಲಿನ್ಯ ನಿಯಂತ್ರಣ ಕಾಯಿದೆ 1961

5) ವನ(ಸಂರಕ್ಷಣೆ) ಕಾಯಿದೆ 1980

ಕಂಪನಿಯು ವರದಿ ನೀಡಿರುವಂತೆ ಈ ಕೆಳಕಂಡ ಇತರೇ ಕಾರ್ಮಿಕ ಮತ್ತು ಸಾಮಾನ್ಯ ಕಾಯಿದೆಗಳು ಕಂಪನಿಗೆ ಅನ್ವಯವಾಗುತ್ತವೆ.

1) ಮಾಹಿತಿ ಹಕ್ಕು ಕಾಯಿದೆ 2005

2) ಗುತ್ತಿಗೆ ಕಾರ್ಮಿಕ(ನಿಯಂತ್ರಣ ಮತ್ತು ನಿಷೇಧ) ಕಾಯಿದೆ 1970 (ಕರ್ನಾಟಕ ನಿಯಮಗಳು)

3) ಕಾರ್ಮಿಕರ ಪರಿಹಾರ ಕಾಯಿದೆ 1923

4) ಬೋನಸ್ ಪಾವತಿ ಕಾಯಿದೆ 1965

5) ಪ್ರಸೂತಿ ಸವಲತ್ತುಗಳ ಕಾಯಿದೆ 1961

ಸ್ವಯಂಭು ವಿಶ್ವನಾಥನ್
ವೃತ್ತಿಪರ ಕಂಪನಿ ಕಾರ್ಯದರ್ಶಿ

ಸುಶೀಲ್ ಚಂದ್ರ ಅಪಾರ್ಟ್‌ಮೆಂಟ್, ಫ್ಲಾಟ್ ಬಿ,
17ನೇ 'ಎ' ಕ್ರಾಸ್, 10ನೇ 'ಎ' ಮೇನ್,
ಮಲ್ಲೇಶ್ವರಂ, ಬೆಂಗಳೂರು–560055
ಇ ಮೇಲ್ ಐಡಿ: cs_viswanathan@yahoo.com
ದೂರವಾಣಿ: 41674875 ಮೊಬೈಲ್: 98452–20950

6) ಕನಿಷ್ಠ ವೇತನ ಕಾಯಿದೆ 1948/ಕರ್ನಾಟಕ ಕನಿಷ್ಠ ವೇತನ ಕಾಯಿದೆ 1948

7) ವೇತನ ಪಾವತಿ ಕಾಯಿದೆ 1936

8) ಕಾರ್ಮಿಕರ ಕಲ್ಯಾಣ ಕಾಯಿದೆ 1948

9) ಅಂತರಾಜ್ಯ ವಲಸೆ ಕಾರ್ಮಿಕರ (ನೌಕರಿ ನಿಯಂತ್ರಣ ಮತ್ತು ಸಏವಾ ಷರತ್ತುಗಳು) ಕಾಯಿದೆ 1979

10) ಔದ್ಯೋಗಿಕ ವಿವಾದ ಕಾಯಿದೆ 1947/ಕರ್ನಾಟಕ ಔದ್ಯೋಗಿಕ ವಿವಾದಗಳ ಕಾಯಿದೆ 1947

11) ಉದ್ಯೋಗಿಗಳ ಭವಿಷ್ಯನಿಧಿ ಮತ್ತು ಇತರೇ ಪ್ರಾವಧಾನಗಳ ಕಾಯಿದೆ 1952

12) ಉದ್ಯೋಗಿಗಳ ಕುಟುಂಬ ನಿವೃತ್ತಿ ವೇತನ ಕಾಯಿದೆ 1971

13) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯಿದೆ 1999

14) ಜಿಇಎಮ್ ಪೋರ್ಟಲ್

15) ಭಾರತೀಯ ಒಪ್ಪಂದಗಳ ಕಾಯಿದೆ 1872

16) ಜಲ (ಸಂರಕ್ಷಣೆ ಮತ್ತು ಮಾಲಿನ್ಯ ನಿಯಂತ್ರಣ ನಿಯಮ) 1975ರೊಂದಿಗೆ ಓದಲಾದ ಜಲ(ಮಾಲಿನ್ಯ ತಡೆಗೊಳ್ಳುವಿಕೆ ಮತ್ತು ನಿಯಂತ್ರಣ) ಕಾಯಿದೆ 1974

17) ಪರಿಸರ (ಸಂರಕ್ಷಣೆ) ಕಾಯಿದೆ 1986

18) ವಾಯು(ಮಾಲಿನ್ಯ ತಡೆಗಟ್ಟುವಿಕೆ ಮತ್ತು ನಿಯಂತ್ರಣ) ನಿಯಮಗಳ 1982ರೊಂದಿಗೆ ಓದಲಾದ ವಾಯು (ಮಾಲಿನ್ಯ ತಡೆಗಟ್ಟುವಿಕೆ ಮತ್ತು ನಿಯಂತ್ರಣ) ಕಾಯಿದೆ 1974

19) ವರ್ಗಾವಣೆಯ ಲಿಖಿತಗಳ ಕಾಯಿದೆ 1881

20) ಕರ್ನಾಟಕ ಅಂಗಡಿ ಮತ್ತು ವ್ಯಾಪಾರಿ ಸಂಸ್ಥೆಗಳ ಕಾಯಿದೆ 1961

21) ಕರ್ನಾಟಕ ವೃತ್ತಿ, ವ್ಯಾಪಾರ ಮತ್ತು ನೇಮಕಾತಿಗಳ ಮೇಲೆ ತೆರಿಗೆ ಕಾಯಿದೆ 1976

22) ಟ್ರೇಡ್ ಮಾರ್ಕ್ಸ್ ಕಾಯಿದೆ 1999

23) ದಿ ಅಪ್ರೆಂಟಿಸ್ ಕಾಯಿದೆ 1961

24) ಗ್ರಾಚ್ಯುಯಿಟಿ ಪಾವತಿ ಕಾಯಿದೆ ಮತ್ತು ನಿಯಮಗಳು 1972

25) ಸಮಾನ ವೇತನ ಕಾಯಿದೆ 1976

26) ನೌಕರಿ ವಿನಿಮಯ (ಖಾಲಿ ಹುದ್ದೆಗಳ ಕಡ್ಡಾಯ ಪ್ರಕಟಣೆಗಳು) ಕಾನೂನು ಮತ್ತು ನಿಯಮಗಳು ಮತ್ತು ಸ್ಥಾಯಿ ಆದೇಶಗಳ ಕಾಯಿದೆ 1959

ಸ್ವಯಂಭು ವಿಶ್ವನಾಥನ್
ವೃತ್ತಿಪರ ಕಂಪನಿ ಕಾರ್ಯದರ್ಶಿ

ಸುಶೀಲ್ ಚಂದ್ರ ಅಪಾರ್ಟ್‌ಮೆಂಟ್, ಫ್ಲಾಟ್ ಬಿ,
17ನೇ 'ಎ' ಕ್ರಾಸ್, 10ನೇ 'ಎ' ಮೇನ್,
ಮಲ್ಲೇಶ್ವರಂ, ಬೆಂಗಳೂರು–560055
ಇ ಮೇಲ್ ಐಡಿ: cs_viswanathan@yahoo.com
ದೂರವಾಣಿ: 41674875 ಮೊಬೈಲ್: 98452–20950

27) ಕರ್ನಾಟಕ ಔದ್ಯೋಗಿಕ ಸಂಸ್ಥೆಗಳ (ರಾಷ್ಟ್ರೀಯ ಮತ್ತು ಹಬ್ಬಗಳ ರಜಾ ದಿನಗಳು) ಕಾನೂನು ಮತ್ತು ನಿಯಮಗಳು

28) ಉದ್ಯೋಗ ಸ್ಥಳಗಳಲ್ಲಿ ಹೆಂಗಸರಿಗೆ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧ ಮತ್ತು ಪರಿಹಾರ) ಕಾಯಿದೆ 2013

29) ಆಸ್ತಿ ವರ್ಗಾವಣೆ ಕಾಯಿದೆ 1882

30) ಕರ್ನಾಟಕ ನೌಕರಿ ವಿನಿಮಯ (ಖಾಲಿ ಹುದ್ದೆಗಳ ಕಡ್ಡಾಯ ಪ್ರಕಟಣೆಗಳ ಕಾಯಿದೆ 1959)

31) ವೃತ್ತಿ ಸುರಕ್ಷತೆ, ಆರೋಗ್ಯ ಮತ್ತು ಕಾರ್ಯ ಸ್ಥಿತಿಗಳ ಸಂಹಿತೆ 2020

32) ಕರ್ನಾಟಕ ಕಾರ್ಮಿಕ ಸಂಘಟನೆ ಕಾಯಿದೆ 1926

ಭಾರತೀಯ ಕಂಪನಿ ಕಾರ್ಯದರ್ಶಿಗಳ ಸಂಸ್ಥೆಯವರು ಹೊರಡಿಸಿರುವ ಸೆಕ್ರೆಟೇರಿಯಲ್ ಮಾನದಂಡ–1 ಮತ್ತು ಸೆಕ್ರೆಟೇರಿಯಲ್ ಮಾನದಂಡ–2ರ ಪರಿಪಾಲನೆಯನ್ನು ನಾನು ಪರಿಶೋಧಿಸಿದ್ದೇನೆ.

ವಿಮರ್ಶೆಗೆ ಒಳಪಟ್ಟ ವರ್ಷದಲ್ಲಿ ಅನುಬಂಧ–ಬಿ ರಲ್ಲಿನ ಕಂಡಿಕೆಗಳು/ಪರಿಶೋಧನಾ ಷರತ್ತುಬದ್ಧ ಅಭಿಪ್ರಾಯ/ರಕ್ಷಿತ ಅಭಿಪ್ರಾಯಗಳು/ ಪ್ರತಿಕೂಲ ಷರಾಗಳಿಗೆ ಒಳಪಟ್ಟಂತೆ ಕಂಪನಿಯು ಅನ್ವಯವಾಗುವ ಕಾನೂನುಗಳು, ನಿಯಮಗಳು, ಮಾರ್ಗದರ್ಶಿಗಳು, ಮಾನದಂಡಗಳು ಇತ್ಯಾದಿಗಳನ್ನು ಪರಿಪಾಲಿಸಿದೆ.

ಮುಂದುವರೆದು, ನಾನು ಅನುಬಂಧ–ಬಿ ರಲ್ಲಿನ ಕಂಡಿಕೆಗಳು/ರಕ್ಷಿತ ಅಭಿಪ್ರಾಯಗಳು/ಪ್ರತಿಕೂಲ ಷರಾಗಳಿಗೆ ಮತ್ತು ಈ ಕೆಳಕಂಡ ಕಂಡಿಕೆಗಳಿಗೆ ಒಳಪಟ್ಟಂತೆ ವರದಿ ನೀಡುವುದೇನೆಂದರೆ :

(ಎ) ನಿರ್ದೇಶಕ ಮಂಡಳಿಯು ಪ್ರಸ್ತುತ ಏಳು ನಾಮಾಂಕಿತ ನಿರ್ದೇಶಕರುಗಳನ್ನು (ಕಾರ್ಯನಿರ್ವಾಹಕರಲ್ಲದ ನಿರ್ದೇಶಕರು) ಮತ್ತು ಓರ್ವ ವ್ಯವಸ್ಥಾಪಕ ನಿರ್ದೇಶಕರನ್ನು ಒಳಗೊಂಡಿದೆ.

(ಬಿ) ಕಂಪನಿಯು ಸ್ವತಂತ್ರ ನಿರ್ದೇಶಕರುಗಳನ್ನು (ಕಾರ್ಯನಿರ್ವಾಹಕರಲ್ಲದ ನಿರ್ದೇಶಕರು) ಹೊಂದಿರುವುದಿಲ್ಲ. ಸ್ವತಂತ್ರ ನಿರ್ದೇಶಕರನ್ನು (ಕಾರ್ಯನಿರ್ವಾಹಕರಲ್ಲದ ನಿರ್ದೇಶಕರು) ನೇಮಿಸುವಂತೆ ಸಲಹೆ ನೀಡಲಾಗಿದೆ.

ನಿರ್ದೇಶಕ ಮಂಡಳಿಯನ್ನು ಸೂಕ್ತವಾಗಿ ರಚಿಸಲಾಗಿದೆ.

ಪ್ರಸ್ತುತ ವರ್ಷದಲ್ಲಿ ನಿರ್ದೇಶಕ ಮಂಡಳಿಯಲ್ಲಿ ಉಂಟಾದ ಬದಲಾವಣೆಗಳು ಕಾನೂನಿನ ಪರಿಪಾಲನೆಯಲ್ಲಿ ಮಾಡಲಾಗಿದೆ.

ನಿರ್ದೇಶಕರ ಮಂಡಳಿಯ ಸಭೆಯನ್ನು ನಡೆಸುವಲ್ಲಿ ಸೂಚನೆಯನ್ನು ಮತ್ತು ವಿಸ್ತೃತ ಕಾರ್ಯಸೂಚಿ ಟಿಪ್ಪಣಿಗಳನ್ನು ಮುಂದುವರೆದ ಮಾಹಿತಿಗಳನ್ನು ಮತ್ತು ಸ್ಪಷ್ಟೀಕರಣಗಳನ್ನು ಹೊಂದಲು ಮತ್ತು ಸಭೆಯಲ್ಲಿ ಅರ್ಥಪೂರ್ಣವಾಗಿ ಭಾಗವಹಿಸಲು ಅನುಕೂಲವಾಗುವಂತೆ ಏಳು ದಿನಗಳ ಸೂಚನೆಯನ್ನು ಎಲ್ಲಾ ನಿರ್ದೇಶಕರುಗಳಿಗೆ ಕೆಲವು ಪ್ರಕರಣಗಳಲ್ಲಿ ನೀಡದಿರುವುದನ್ನು ಗಮನಿಸಲಾಗಿದೆ.

ಚರ್ಚೆಯ ನಂತರ, ನಿರ್ದೇಶಕ ಮಂಡಳಿಯ ತೀರ್ಮಾನಗಳನ್ನು ಬಹುಮತದೊಂದಿಗೆ ತೆಗೆದುಕೊಳ್ಳುವುದರಿಂದ, ಸದಸ್ಯರ ಭಿನ್ನಾಭಿಪ್ರಾಯಗಳನ್ನು ಸೆರೆ ಹಿಡಿದು ದಾಖಲಿಸುವ ಪ್ರಶ್ನೆಯು ಉದ್ಭವಿಸುವುದಿಲ್ಲ.

ಸ್ವಯಂಭು ವಿಶ್ವನಾಥನ್
ವೃತ್ತಿಪರ ಕಂಪನಿ ಕಾರ್ಯದರ್ಶಿ

ಸುಶೀಲ್ ಚಂದ್ರ ಅಪಾರ್ಟ್‌ಮೆಂಟ್, ಫ್ಲಾಟ್ ಬಿ,
17ನೇ 'ಎ' ಕ್ರಾಸ್, 10ನೇ 'ಎ' ಮೇನ್,
ಮಲ್ಲೇಶ್ವರಂ, ಬೆಂಗಳೂರು–560055
ಇ ಮೇಲ್ ಐಡಿ: cs_viswanathan@yahoo.com
ದೂರವಾಣಿ: 41674875 ಮೊಬೈಲ್: 98452–20950

ಮುಂದುವರೆದಂತೆ ನಾನು ವರದಿ ನೀಡುವುದೇನೆಂದರೆ ಅನ್ವಯವಾಗುವ ಕಾಯಿದೆಗಳ, ನಿಯಮಗಳ, ಮಾರ್ಗದರ್ಶಿಗಳ ಪರಿಪಾಲನೆಯ ಮೇಲ್ವಿಚಾರಣೆಗಾಗಿ ಕಂಪನಿಯು ತನ್ನ ಗಾತ್ರ ಮತ್ತು ವ್ಯವಹಾರಗಳಿಗನುಗುಣವಾಗಿ ಸಾಕಷ್ಟು ಪದ್ಧತಿ ಮತ್ತು ಪ್ರಕ್ರಿಯೆಗಳನ್ನು ಹೊಂದಿದೆ.

ಅನ್ವಯವಾಗುವ ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷ ತೆರಿಗೆಗಳಂತಹ ಆರ್ಥಿಕ ಕಾಯಿದೆಗಳ ಪರಿಪಾಲನೆಯನ್ನು, ಅದು ಶಾಸನಬದ್ಧ ಲೆಕ್ಕ ಪರಿಶೋಧಕರ ಮತ್ತು ಇತರೆ ಗೊತ್ತು ಪಡಿಸಲಾದ ವೃತ್ತಿಪರರ ವಿಮರ್ಷೆಗೆ ಒಳಪಡುವುದರಿಂದ ನಾನು ಅವುಗಳನ್ನು ಪರಿಶೋಧಿಸಿರುವುದಿಲ್ಲ.

ಮುಂದುವರೆದಂತೆ, ನಾನು ವರದಿ ನೀಡುವುದೇನೆಂದರೆ ಪರಿಶೋಧನಾ ಅವಧಿಯಲ್ಲಿ ಕಂಪನಿಯು ಈ ಕೆಳಕಂಡವುಗಳನ್ನು ಮಾಡಿರುವುದಿಲ್ಲ.

(ಎ) ಸಾರ್ವಜನಿಕ/ಹಕ್ಕು/ಪ್ರಾಶಸ್ತ್ಯ ಷೇರುಗಳನ್ನು/ಸಾಲಪತ್ರಗಳನ್ನು/ಪರಿಶ್ರಮಾಧಾರಿತ ಷೇರುಗಳನ್ನು ನೀಡಿರುವುದಿಲ್ಲ.

(ಬಿ) ಸೆಕ್ಯೂರಿಟಿಗಳ ಹಿಂದಕ್ಕೆ ಖರೀದಿಸುವುದು/ತೀರುವಳಿಗೊಳಿಸುವುದು

(ಸಿ) ಕಂಪನಿಯ ಕಾಯಿದೆಯ ಸೆಕ್ಷನ್ 190ರಡಿಯಲ್ಲಿ ಸಾಲಗಳ ಪಡೆಯುವುದು

(ಡಿ) ಯಾವುದೇ ವಿಲೀನ/ಸಂಯೋಜನೆ/ಪುನರ್ನಿರ್ಮಾಣ ಇತ್ಯಾದಿ

(ಎ) ಯಾವುದೇ ವಿದೇಶಿ ತಾಂತ್ರಿಕ ಸಹಯೋಗ

ಸಹಿ/–
ಸ್ವಯಂಭು ವಿಶ್ವನಾಥನ್
ವೃತ್ತಿಪರ ಕಂಪನಿ ಕಾರ್ಯದರ್ಶಿ
ಸದಸ್ಯತ್ವ ನಂ. F12190
ಸಿಪಿ ನಂ. 5284
ಯುಡಿಐಎನ್ ಸಂ. F012190G001645415

ಸ್ಥಳ : ಬೆಂಗಳೂರು
ತಾ : 25–10–2025

ಅಡಕ :
ಸೆಕ್ರೆಟೇರಿಯಲ್ ವರದಿಯ ಭಾಗವಾದ ಅನುಬಂಧ–ಎ ಮತ್ತು ಬಿ

ಸ್ವಯಂಭು ವಿಶ್ವನಾಥನ್
ವೃತ್ತಿಪರ ಕಂಪನಿ ಕಾರ್ಯದರ್ಶಿ

ಸುಶೀಲ್ ಚಂದ್ರ ಅಪಾರ್ಟ್‌ಮೆಂಟ್, ಫ್ಲಾಟ್ ಬಿ,
17ನೇ 'ಎ' ಕ್ರಾಸ್, 10ನೇ 'ಎ' ಮೇನ್,
ಮಲ್ಲೇಶ್ವರಂ, ಬೆಂಗಳೂರು–560055
ಇ ಮೇಲ್ ಐಡಿ: cs_viswanathan@yahoo.com
ದೂರವಾಣಿ: 41674875 ಮೊಬೈಲ್: 98452–20950

ಅನುಬಂಧ–ಎ

ಗೆ,

ಸದಸ್ಯರು

ದಿ ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ

ಇದೇ ದಿನಾಂಕದ ನನ್ನ ವರದಿಯನ್ನು ಈ ಪತ್ರದ ಜತೆಗೆ ಓದತಕ್ಕದ್ದು.

1. ಸೆಕ್ರೆಟೇರಿಯಲ್ ದಾಖಲೆಗಳನ್ನು ನಿರ್ವಹಿಸುವುದು ಕಂಪನಿಯ ಆಡಳಿತ ವರ್ಗದ ಜವಾಬ್ದಾರಿಯಾಗಿರುತ್ತದೆ. ನನ್ನ ಪರಿಶೋಧನೆಯ ಆಧಾರದ ಮೇಲೆ ಈ ಸೆಕ್ರೆಟೇರಿಯಲ್ ದಾಖಲೆಗಳ ಬಗೆಗೆ ಅಭಿಪ್ರಾಯ ವ್ಯಕ್ತಪಡಿಸುವುದು ನನ್ನ ಜವಾಬ್ದಾರಿಯಾಗಿರುತ್ತದೆ.

2. ಸೆಕ್ರೆಟೇರಿಯಲ್ ದಾಖಲೆಗಳು ಸರಿಯಾಗಿರುವುದರ ಬಗೆಗೆ ಸಾಕಷ್ಟು ಆಶ್ವಾಸನೆಯನ್ನು ಪಡೆಯಲೋಸುಗ ನಾನು ಪರಿಶೋಧನಾ ಪದ್ಧತಿಗಳು ಮತ್ತು ಪ್ರಕ್ರಿಯೆಗಳನ್ನು ಅನುಸರಿಸಿದ್ದೇನೆ. ಪರಿಶೋಧನೆಯ ಸತ್ಯಸಂಗತಿಗಳು ಸೆಕ್ರೆಟೇರಿಯಲ್ ದಾಖಲೆಗಳಲ್ಲಿ ಪ್ರತಿಫಲನಗೊಂಡಿದೆಯೇ ಎಂಬುದನ್ನು ಖಾತರಿ ಪಡಿಸಿಕೊಳ್ಳುವ ಸಲುವಾಗಿ ಪರಿಶೋಧನೆಯನ್ನು ಪರೀಕ್ಷಾರ್ಥ ಪ್ರಯೋಗದಲ್ಲಿ ಮಾಡಲಾಗಿದೆ. ನಾನು ಅನುಸರಿಸಿದ ಪದ್ಧತಿಗಳು ಮತ್ತು ಪ್ರಕ್ರಿಯೆಗಳು, ನನ್ನ ಅಭಿಪ್ರಾಯಕ್ಕೆ ಸಾಕಷ್ಟು ಆಧಾರಗಳನ್ನು ಒದಗಿಸಿವೆ ಎಂದು ನಾನು ನಂಬುತ್ತೇನೆ.

3. ಕಂಪನಿಯ ಆರ್ಥಿಕ ದಾಖಲೆಗಳು ಮತ್ತು ಲೆಕ್ಕಪುಸ್ತಕಗಳ ಸರಿಯಾಗಿರುವಿಕೆ ಮತ್ತು ಉಚಿತವಾಗಿರುವಿಕೆಯ ಬಗೆಗೆ ನಾನು ಪರೀಕ್ಷಿಸಿಲ್ಲ.

4. ಅವಶ್ಯಕವಿರುವೆಡೆಯಲ್ಲೆಲ್ಲ ಕಾಯಿದೆ, ನಿಯಮಗಳು ಮತ್ತು ನಿಬಂಧನೆಗಳ ಪರಿಪಾಲನೆಯ ಬಗೆಗೆ ನಾನು ಕಂಪನಿಯ ನಿರೂಪಣೆಯನ್ನು ಪಡೆದುಕೊಂಡಿದ್ದೇನೆ.

5. ಅನ್ವಯವಾಗುವ ಕಾನೂನುಗಳು, ನಿಯಮಗಳು ಮತ್ತು ಮಾನದಂಡಗಳನ್ನು ಪಾಲಿಸುವುದು ಕಂಪನಿಯ ಆಡಳಿತ ವರ್ಗದ ಜವಾಬ್ದಾರಿಯಾಗಿರುತ್ತದೆ. ನನ್ನ ಪರಿಶೋಧನೆಯು ಪರೀಕ್ಷಾರ್ಥ ಪ್ರಯೋಗಾಧಾರದ ಮೇಲೆ ಅವುಗಳ ಪರಿಶೀಲನೆಗೆ ಸೀಮಿತಗೊಂಡಿದೆ.

6. ಸೆಕ್ರೆಟೇರಿಯಲ್ ಪರಿಶೋಧನಾ ವರದಿಯು ಕಂಪನಿಯ ಕಾರ್ಯಸಾಧ್ಯತೆ ಬಗೆಗಾಗಲಿ ಅಥವಾ ಆಡಳಿತ ವರ್ಗವು ಅದರ ವ್ಯವಹಾರಗಳನ್ನು ಫಲಪ್ರದವಾಗಿ ಮತ್ತು ಪರಿಣಾಮಕಾರಿಯಾಗಿ ನಡೆಸಿರುವುದರ ಬಗೆಗಾಗಲಿ ಆಶ್ವಾಸನೆ ನೀಡುವುದಿಲ್ಲ.

ಸಹಿ/–
ಸ್ವಯಂಭು ವಿಶ್ವನಾಥನ್
ವೃತ್ತಿಪರ ಕಂಪನಿ ಕಾರ್ಯದರ್ಶಿ
ಸದಸ್ಯತ್ವ ನಂ. F12190
ಸಿಪಿ ನಂ. 5284
ಯುಡಿಐಎನ್ ಸಂ. F012190G001645415

ಸ್ಥಳ : ಬೆಂಗಳೂರು
ತಾ : 25–10–2025

ಸ್ವಯಂಭು ವಿಶ್ವನಾಥನ್
ವೃತ್ತಿಪರ ಕಂಪನಿ ಕಾರ್ಯದರ್ಶಿ

ಸುಶೀಲ್ ಚಂದ್ರ ಅಪಾರ್ಟ್‌ಮೆಂಟ್, ಫ್ಲಾಟ್ ಬಿ,
17ನೇ 'ಎ' ಕ್ರಾಸ್, 10ನೇ 'ಎ' ಮೇನ್,
ಮಲ್ಲೇಶ್ವರಂ, ಬೆಂಗಳೂರು–560055
ಇ ಮೇಲ್ ಐಡಿ: cs_viswanathan@yahoo.com
ದೂರವಾಣಿ: 41674875 ಮೊಬೈಲ್: 98452–20950

ಅನುಬಂಧ–ಬಿ

ದಿ ಹಟ್ಟಿಚಿನ್ನದ ಗಣಿ ಕಂಪನಿ ನಿಯಮಿತದ 31.03.2025ಕ್ಕೆ ಅಂತ್ಯಗೊಂಡ ವರ್ಷದ ಸೆಕ್ರೆಟೇರಿಯಲ್ ಪರಿಶೋಧನಾ ವರದಿಯ ಅನುಬಂಧ – ಷರತ್ತುಬದ್ಧ ಅಭಿಪ್ರಾಯಗಳು/ರಕ್ಷಿತ ಅಭಿಪ್ರಾಯಗಳು/ಪ್ರತಿಕೂಲ ಅಭಿಪ್ರಾಯಗಳು/ಷರಾಗಳು/ಕಂಡಿಕೆಗಳು/ಸಲಹೆಗಳು/ಶಿಫಾರಸ್ಸುಗಳು

I ಅಪರಿಪಾಲನೆಗಳು/ಪರಿಶೋಧನಾ ಷರತ್ತುಬದ್ಧ ಅಭಿಪ್ರಾಯಗಳು

1. ನಿರ್ದೇಶಕರ ಮಂಡಳಿಯ ರಚನೆ – ಸ್ವತಂತ್ರ ನಿರ್ದೇಶಕರ ನೇಮಕಾತಿ ಮಾಡದಿರುವಿಕೆ

ಕಂಪನಿ ಕಾಯಿದೆ 2013ರ ಸೆಕ್ಷನ್ 149 ರೊಂದಿಗೆ ಓದಲಾದ ಕಂಪನಿಗಳ (ನಿರ್ದೇಶಕರುಗಳ ನೇಮಕಾತಿ ಮತ್ತು ಅರ್ಹತೆ) ನಿಯಮ 2014ರ ನಿಯಮ 4ರ ಪ್ರಕಾರ ಒಂದು ಸಾರ್ವಜನಿಕ ಕಂಪನಿಯ ವಹಿವಾಟು 100 ಕೋಟಿ ರೂ.ಗಳು ಅಥವಾ ಅದಕ್ಕಿಂತ ಅಧಿಕವಿದ್ದರೆ, ಕನಿಷ್ಟ 2 ಸ್ವತಂತ್ರ ನಿರ್ದೇಶಕರನ್ನು ಮಂಡಳಿಯಲ್ಲಿ ಹೊಂದಿರಬೇಕಿರುತ್ತದೆ. ವಿಮರ್ಶೆಗೆ ಒಳಪಟ್ಟ ಅವಧಿಯಲ್ಲಿ ಕಂಪನಿಯು ಯಾವುದೇ ಸ್ವತಂತ್ರ ನಿರ್ದೇಶಕರನ್ನು ಹೊಂದಿಲ್ಲ.

ಈ ಸಂಬಂಧ, ಕರ್ನಾಟಕ ಸರ್ಕಾರಿ ಕಂಪನಿಗಳಲ್ಲಿ ಸ್ವತಂತ್ರ ನಿರ್ದೇಶಕರ ನೇಮಕಾತಿಯ ವಿಷಯದಲ್ಲಿ ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ತಾ. 12.09.2023ರ ಸುತ್ತೋಲೆ ಸಂಖ್ಯೆ ಎಫ್‌ಡಿ 91 ಐಎನ್‌ವಿ 2023ರ ಪ್ರತಿಯನ್ನು ಲಗತ್ತಿಸಲಾಗಿದೆ.

ಕಂಪನಿಗಳ (ನಿರ್ದೇಶಕರುಗಳ ನೇಮಕಾತಿ ಮತ್ತು ಅರ್ಹತೆ) ನಿಯಮಗಳು 2014ರ ನಿಯಮ ಸಂಖ್ಯೆ 4ನ್ನು ಮತ್ತು ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಮೇಲ್ಕಂಡ ಸುತ್ತೋಲೆಯನ್ನು ಪರಿಪಾಲಿಸುವಂತೆ ಕಂಪನಿಗೆ ಸಲಹೆ ನೀಡಲಾಗಿದೆ.

2. ಲೆಕ್ಕ ಪರಿಶೋಧನಾ ಸಮಿತಿ :

ಕಂಪನಿ ಕಾಯಿದೆ 2013ರ ಸೆಕ್ಷನ್ 177(2)ರ ಪ್ರಕಾರ ಲೆಕ್ಕಪರಿಶೋಧನಾ ಸಮಿತಿಯು 3 ನಿರ್ದೇಶಕರುಗಳನ್ನು ಹೊಂದಿರಬೇಕಿದ್ದು, ಅದರಲ್ಲಿ ಕನಿಷ್ಟ 2 ಸ್ವತಂತ್ರ ನಿರ್ದೇಶಕರನ್ನು ಹೊಂದಿರಬೇಕಿರುತ್ತದೆ. ವಿಮರ್ಷೆಗೆ ಒಳಪಟ್ಟ ಅವಧಿಯಲ್ಲಿ, ಲೆಕ್ಕಪರಿಶೋಧನಾ ಸಮಿತಿಯು ಎರಡು(2) ಸ್ವತಂತ್ರ ನಿರ್ದೇಶಕರನ್ನು ಹೊಂದಿರಲಿಲ್ಲ.

ಈ ಸಂದರ್ಭದಲ್ಲಿ ಕರ್ನಾಟಕ ಸರ್ಕಾರಿ ಕಂಪನಿಗಳಲ್ಲಿ ಲೆಕ್ಕಪರಿಶೋಧನಾ ಸಮಿತಿಯ ವಿಷಯದಲ್ಲಿ ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ತಾ. 05–01–2024ರ ಸಉತ್ತೋಲೆ ಸಂಖ್ಯೆ ಎಫ್‌ಡಿ 114 ಐಎನ್‌ವಿ 2023ರ ಪ್ರತಿಯನ್ನು ಲಗತ್ತಿಸಲಾಗಿದೆ.

ಕಂಪನಿ ಕಾಯಿದೆ 2013ರ ಸೆಕ್ಷನ್ 177(2) ಮತ್ತು ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಮೇಲ್ಕಂಡ ಸುತ್ತೋಲೆಯನ್ನು ಪರಿಪಾಲಿಸುವಂತೆ ಕಂಪನಿಗೆ ಸಲಹೆ ನೀಡಲಾಗಿದೆ.

3. ನಾಮಾಂಕನ ಮತ್ತು ಸಂಭಾವನಾ ಸಮಿತಿ :

ಕಂಪನಿ ಕಾಯಿದೆ 2013ರ ಸೆಕ್ಷನ್ 178ರೊಂದಿಗೆ ಓದಲಾದ ಕಂಪನಿಗಳ (ನಿರ್ದೇಶಕ ಮಂಡಳಿಯ ಸಭೆಗಳು ಮತ್ತು ಅದರ ಅಧಿಕಾರಗಳು) ನಿಯಮಗಳು 2014ರ ನಿಯಮ 4ರ ಪ್ರಕಾರ, 100 ಕೋಟಿ ರೂ.ಗಳು ಅಥವಾ ಅದಕ್ಕೂ ಅಧಿಕ ವಹಿವಾಟಿರುವ ಪ್ರತಿ ಸಾರ್ವಜನಿಕ ಕಂಪನಿಯೂ ಮೂರು ಮತ್ತು ಅದಕ್ಕಿಂತ ಅಧಿಕ ಸಂಖ್ಯೆಯ ಕಾರ್ಯಕಾರಿಯಲ್ಲದ ನಿರ್ದೇಶಕರನ್ನು

ಸ್ವಯಂಭು ವಿಶ್ವನಾಥನ್
ವೃತ್ತಿಪರ ಕಂಪನಿ ಕಾರ್ಯದರ್ಶಿ

ಸುಶೀಲ್ ಚಂದ್ರ ಅಪಾರ್ಟ್‌ಮೆಂಟ್, ಫ್ಲಾಟ್ ಬಿ,
17ನೇ 'ಎ' ಕ್ರಾಸ್, 10ನೇ 'ಎ' ಮೇನ್,
ಮಲ್ಲೇಶ್ವರಂ, ಬೆಂಗಳೂರು–560055
ಇ ಮೇಲ್ ಐಡಿ: cs_viswanathan@yahoo.com
ದೂರವಾಣಿ: 41674875 ಮೊಬೈಲ್: 98452–20950

ಹೊಂದಿರಬೇಕಿದ್ದು, ಅದರಲ್ಲಿನ ಸ್ವತಂತ್ರ ನಿರ್ದೇಶಕರು ಅರ್ಧಕ್ಕಿಂತ ಕಡಿಮೆ ಇಲ್ಲದಿರುವಂತೆ ಹೊಂದಿರುವ ನಾಮಾಂಕನ ಮತ್ತು ಸಂಭಾವನ ಸಮಿತಿಯನ್ನು ಹೊಂದಿರಬೇಕಿರುತ್ತದೆ. ಕಂಪನಿಯು ಈ ನಾಮಾಂಕನ ಮತ್ತು ಸಂಭಾವನಾ ಸಮಿತಿಯನ್ನು ರಚಿಸಿರುವುದಿಲ್ಲ.

4. ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಸಮಿತಿ :

ಕಂಪನಿ ಕಾಯಿದೆ 2013ರ ಸೆಕ್ಷನ್ 135ರ ರೀತ್ಯ 1000 ಕೋಟಿಗಳು ಅಥವಾ ಅದಕ್ಕೂ ಅಧಿಕ ವಹಿವಾಟಿರುವ ಅಥವಾ 5 ಕೋಟಿ ರೂ.ಗಳ ತೆರಿಗೆ ಮುಂಚಿನ ಲಾಭ ಹೊಂದಿರುವ ಪ್ರತಿಯೊಂದು ಕಂಪನಿಯೂ ನಿರ್ದೇಶಕರುಗಳನ್ನೊಳಗೊಂಡ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಸಮಿತಿಯನ್ನು ಹೊಂದಿ ಅದರಲ್ಲಿ ಮೂರು ನಿರ್ದೇಶಕರು ಇರಬೇಕಿದ್ದು ಕನಿಷ್ಟ ಓರ್ವ ನಿರ್ದೇಶಕರು ಸ್ವತಂತ್ರ ನಿರ್ದೇಶಕರಿರಬೇಕು. ಕಂಪನಿಯು ರಚಿಸಿರುವ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಸಮಿತಿಯಲ್ಲಿ ಸ್ವತಂತ್ರ ನಿರ್ದೇಶಕರು ಸೇರ್ಪಡೆಗೊಂಡಿಲ್ಲ.

5. ಪಾವತಿಸಿಲ್ಲದ/ಕ್ಲೇಮು ಮಾಡಿಲ್ಲದ ಲಾಭಾಂಶಗಳಿಗೆ ಸಂಬಂಧಿಸಿದ ಷೇರುಗಳನ್ನು ಹೂಡಿಕೆದಾರರ ಶಿಕ್ಷಣಾ ಮತ್ತು ಸಂರಕ್ಷಣಾ ನಿಧಿಗೆ ವರ್ಗಾವಣೆ ಮಾಡುವುದು :

ಕಂಪನಿ ಕಾಯಿದೆ 2013ರ ಸೆಕ್ಷನ್ 124(6)ರೊಂದಿಗೆ ಓದಲಾದ ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) 2014ರ ನಿಯಮ 6ರ ಪ್ರಕಾರ ಯಾವುದೇ ಷೇರುಗಳೆಡೆಗಿನ ಲಾಭಾಂಶವನ್ನು ಕ್ರಮಾನುಗತ ಏಳು ವರ್ಷಗಳಲ್ಲಿಯೂ ಕ್ಲೇಮು ಮಾಡದಿದ್ದಲ್ಲಿ, ಅಂತಹ ಷೇರುಗಳನ್ನು ಹೂಡಿಕೆದಾರರ ಶಿಕ್ಷಣಾ ಮತ್ತು ಸಂರಕ್ಷಣಾ ನಿಧಿಗೆ ವರ್ಗಾಯಿಸಬೇಕಿರುತ್ತದೆ. ಕಂಪನಿಯು ಅಂತಹ ಷೇರುಗಳನ್ನು ಹೂಡಿಕೆದಾರರ ಶಿಕ್ಷಣ ಮತ್ತು ಸಂರಕ್ಷಣಾ ನಿಧಿಗೆ ವರ್ಗಾಯಿಸುವಂತೆ ಸಲಹೆ ನೀಡಲಾಗಿದೆ.

ಈ ಸಂದರ್ಭದಲ್ಲಿ ಕಾರ್ಪೊರೇಟ್ ಮಂತ್ರಾಲಯವು ನಮೂನೆ ಐಇಪಿಎಫ್–5ನ್ನು ಪಾವತಿಸಿಲ್ಲದ ಲಾಭಾಂಶವನ್ನು ಷೇರುಗಳನ್ನು ಕ್ಲೇಮು ಮಾಡಲು ಅರ್ಜಿ(ಪಾವತಿಸಿಲ್ಲದ ಲಾಭಾಂಶವನ್ನು ಮತ್ತು ಷೇರುಗಳನ್ನು ಕ್ಲೇಮು ಮಾಡಲು ಅರ್ಜಿ)ಯನ್ನು ತಿದ್ದುಪಡಿ ಮಾಡಿ ತಾ. 01.10.2025ರಂದು ಅಧಿಸೂಚನೆ 733(ಇ) ಹೊರಡಿಸಿದ್ದು ಅದರ ಪ್ರತಿಯನ್ನು ಲಗತ್ತಿಸಿದ್ದೇನೆ.

II ಕಂಡಿಕೆಗಳು/ಸಲಹೆಗಳು :

1. ನಿರ್ದೇಶಕ ಮಂಡಳಿಯ 2 ಸಭೆಗಳ ನಡುವಿನ ಅಂತರ :

ಕಂಪನಿ ಕಾಯಿದೆ 2013ರ ಸೆಕ್ಷನ್ 173(1)ರ ರೀತ್ಯ ಪ್ರತಿಯೊಂದು ಕಂಪನಿಯೂ, ಪ್ರತಿ ವರ್ಷವೂ ನಿರ್ದೇಶಕ ಮಂಡಳಿಯ ಕನಿಷ್ಟ 4 ಸಭೆಗಳನ್ನು ನಡೆಸಬೇಕಿದ್ದು, ಕ್ರಮಾನುಗತವಾಗಿ ಎರಡು ಸಭೆಗಳ ನಡುವಿನ ಮಧ್ಯದ ಅಂತರ 120 ದಿನಗಳಿಗಿಂತ ಅಧಿಕವಾಗಿರಬಾರದು.

20–09–2023 ಮತ್ತು 13–06–2024ರಂದು ನಡೆದ ನಿರ್ದೇಶಕರ ಮಂಡಳಿಯ ಸಭೆಗಳ ನಡುವಿನ ಅಂತರವು 120 ದಿನಗಳಿಗಿಂತಲೂ ಅಧಿಕವಾಗಿತ್ತು.

ಸೆಕ್ಷನ್ 173(1)ರ ರೀತ್ಯ ನಿರ್ದೇಶಕ ಮಂಡಳಿಯ ಸಭೆಗಳನ್ನು, ಎರಡು ಸಭೆಗಳ ನಡುವಿನ ಅಂತರ 120 ದಿನಗಳಿಗೂ ಅಧಿಕವಾಗಿರದಂತೆ ನಡೆಸಲು, ಕಂಪನಿಗೆ ಸಲಹೆ ನೀಡಲಾಗಿದೆ.

2. ನಿರ್ದೇಶಕ ಮಂಡಳಿಯ ಮತ್ತು ಷೇರುದಾರರ ಸಭೆಗಳ ನಡಾವಳಿಗಳನ್ನು ಸೆಕ್ರೆಟೇರಿಯಲ್ ಮಾನದಂಡಗಳು 1 ಮತ್ತು 2ರಂತೆ ನಿರ್ವಹಿಸುವುದು :

ನಿರ್ದೇಶಕ ಮಂಡಳಿಯ ಮತ್ತು ಅದರ ಉಪಸಮಿತಿಯ ಸಭೆಗಳು ಮತ್ತು ಸಾಮಾನ್ಯ ಸಭೆಗಳ ಬಗೆಗಿನ ನಡಾವಳಿಗಳೆಡೆಗೆ, ಭಾರತೀಯ ಕಂಪನಿ ಕಾರ್ಯದರ್ಶಿ ಸಂಸ್ಥೆಯವರ ಮಾನದಂಡಗಳು ಎಸ್ಎಸ್–1 ಮತ್ತು ಎಸ್ಎಸ್–2ರ ಪ್ರಕಾರ, ನಡಾವಳಿಗಳ ಪುಟ ಸಂಖ್ಯೆಗಳನ್ನು ಕ್ರಮಾನುಗತವಾಗಿ ಹಾಕಿ ಅವುಗಳಲ್ಲಿ ಹಸ್ತಕ್ಷೇಪ ಮಾಡುವುದನ್ನು ತಡೆಗಟ್ಟಿ ಅವುಗಳು ಶಾಶ್ವತ ದಾಖಲೆಗಳಾಗಿರುವುದರಿಂದ ಮತ್ತು ಭವಿಷ್ಯದಲ್ಲಿ ವಿವಾದಗಳೇರ್ಪಟ್ಟಲ್ಲಿ ಸಾಕ್ಷ್ಯಗಳನ್ನಾಗಿ ಪರಿಗಣಿಸುವುದರಿಂದ, ಸೂಕ್ತವಾಗಿ ಬೈಂಡ್ ಮಾಡಿಸಬೇಕಿರುತ್ತದೆ. ಸೆಕ್ರೆಟೇರಿಯಲ್ ಮಾನದಂಡಗಳು ಎಸ್ಎಸ್–1 ಮತ್ತು ಎಸ್ಎಸ್–2ನ್ನು ಪರಿಪಾಲಿಸುವಂತೆ ಕಂಪನಿಗೆ ಸಲಹೆ ನೀಡಲಾಗಿದೆ.

3. ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು 2014ರಡಿಯಲ್ಲಿನ ಶಾಸನಬದ್ಧ ರಿಜಿಸ್ಟರುಗಳ ನಿರ್ವಹಣೆ ಮತ್ತು ನವೀಕರಣ :

ಶಾಸನಬದ್ಧ ದಾಖಲೆಗಳಾದ ಸದಸ್ಯರ ರಿಜಿಸ್ಟರು, ಷೇರು ವರ್ಗಾವಣೆ ರಿಜಿಸ್ಟರು, ಷೇರು ಪತ್ರಗಳ ರಿಜಿಸ್ಟರು, ನಕಲಿ ಷೇರು ಪತ್ರಗಳ ರಿಜಿಸ್ಟರು, ಮುಂತಾದವುಗಳನ್ನು ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು 2014ರಲ್ಲಿನ ನಮೂನೆಗಳಲ್ಲಿ ನಿರ್ವಹಿಸಿ ಮತ್ತು ನವೀಕರಣ ಮಾಡುವಂತೆ ಕಂಪನಿಗೆ ಸಲಹೆ ನೀಡಲಾಗಿದೆ.

4. ನಮೂನೆ ಎಂಜಿಟಿ–9 (ವಾರ್ಷಿಕ ವರದಿಯ ಉದ್ಧೃತ ಭಾಗ)ರ ನಿಲ್ಲಿಸಿಬಿಡುವಿಕೆ ಮತ್ತು ನಮೂನೆ ಎಂಜಿಟಿ–7(ವಾರ್ಷಿಕ ವರದಿ)ನ್ನು ಕಂಪನಿಯ ವೆಬ್ಸೈಟ್ನಲ್ಲಿ ಹಾಕುವುದು :

ನಿರ್ದೇಶಕರ ವರದಿಗೆ ನಮೂನೆ ಎಂಜಿಟಿ–9 (ವಾರ್ಷಿಕ ವರದಿಯ ಉದ್ಧೃತ ಭಾಗ)ನ್ನು ಸಂಲಗ್ನಗೊಳಿಸುವುದನ್ನು ನಿಲ್ಲಿಸಲಾಗಿದೆ. ಬದಲಾಗಿ ನಮೂನೆ ಎಂಜಿಟಿ–7ನ್ನು(ವಾರ್ಷಿಕ ವರದಿ) ಕಂಪನಿಯು ತನ್ನ ವೆಬ್ಸೈಟ್ನಲ್ಲಿ ಹಾಕಬೇಕಿರುತ್ತದೆ. ದಿ ಹಟ್ಟಿ ಚಿನ್ನದ ಗಣಿ ಕಂಪನಿಯು 31.–03–2024ನೇ ಆರ್ಥಿಕ ವರ್ಷದ ನಿರ್ದೇಶಕರ ವರದಿಗೆ ನಮೂನೆ–9ನ್ನು ಸಂಲಗ್ನಗೊಳಿಸಿದೆ.

31ನೇ ಮಾರ್ಚ್ 2025ನೇ ಆರ್ಥಿಕ ವರ್ಷಕ್ಕೆ ನಮೂನೆ–9ನ್ನು (ವಾರ್ಷಿಕ ವರದಿಯ ಉದ್ಧೃತ ಭಾಗ) ನಿರ್ದೇಶಕರ ವರದಿಗೆ ಸಂಲಗ್ನಗೊಳಿಸುವುದನ್ನು ನಿಲ್ಲಿಸುವಂತೆ ಮತ್ತು ನಮೂನೆ–7ನ್ನು (ವಾರ್ಷಿಕ ವರದಿ) ಕಂಪನಿಯ ವೆಬ್ಸೈಟ್ನಲ್ಲಿ ಹಾಕುವಂತೆ ಸಲಹೆ ನೀಡಲಾಗಿದೆ.

5. ಲಾಭಾಂಶದ ಪಾವತಿಗೆ ಪ್ರತ್ಯೇಕ ಬ್ಯಾಂಕ್ ಖಾತೆಯನ್ನು ತೆರೆಯುವುದು :

ಕಂಪನಿ ಕಾಯಿದೆ 2013ರ ಸೆಕ್ಷನ್ 123(4)ರ ರೀತ್ಯ ಮಧ್ಯಕಾಲೀನ ಲಾಭಾಂಶವನ್ನು ಒಳಗೊಂಡಂತೆ ಲಾಭಾಂಶದ ಮೊಬಲಗನ್ನು ಒಂದು ಅನುಸೂಚಿತ ಬ್ಯಾಂಕ್ನಲ್ಲಿ ಪ್ರತ್ಯೇಕ ಖಾತೆಯಲ್ಲಿ ಲಾಭಾಂಶದ ಘೋಷಣೆಯ ದಿನಾಂಕದಿಂದ 5 ದಿನಗಳ ಒಳಗೆ ಠೇವಣಿ ಇಡಬೇಕು.

ಅನುಸೂಚಿತ ಬ್ಯಾಂಕ್ನಲ್ಲಿ ಪ್ರತ್ಯೇಕ ಖಾತೆಯನ್ನು ತೆರೆಯದೇ, ಹಿಂದೆ ಗೊತ್ತುಪಡಿಸಿದ ಲಾಭಾಂಶ ಖಾತೆಯಲ್ಲೇ ಠೇವಣಿ ಇಟ್ಟು ಅದರಿಂದಲೇ ಲಾಭಾಂಶವನ್ನು ವಿತರಿಸಲಾಗಿದೆ. ಸೆಕ್ಷನ್ 123(4)ನ್ನು ಪರಿಪಾಲಿಸುವಂತೆ ಕಂಪನಿಗೆ ಸಲಹೆ ನೀಡಲಾಗಿದೆ.

6. ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ವೆಚ್ಚಗಳು ಮತ್ತು ನಮೂನೆ ಸಿಎಸ್ಆರ್–2ನ್ನು [(ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿಯ ಬೆಗೆ ವರದಿ(ಸಿಎಸ್ಆರ್)]ಸಲ್ಲಿಸುವುದು :

31–03–2025ರಂದು ಅಂತ್ಯಗೊಂಡ ಆರ್ಥಿಕ ವರ್ಷದಲ್ಲಿ, ಕಂಪನಿಯು ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿಯೆಡೆಗೆ 499 ಲಕ್ಷ ರೂ.ಗಳನ್ನು ವ್ಯಯಿಸಿರುವುದಾಗಿ ವರದಿ ಮಾಡಿದ್ದು, ಇದು ಕಳೆದ 3 ವರ್ಷಗಳ ತೆರಿಗೆ ಮುಂಚಿನ ಸರಾಸರಿ ಲಾಭದ ಶೇ.2 ಆಗಿದ್ದು ಅದಕ್ಕೆ ಒಂದು ಪಟ್ಟಿಯನ್ನು ಸಲ್ಲಿಸಿ 499 ಲಕ್ಷ ರೂ.ಗಳನ್ನು ವಿವಿಧ ಏಜೆನ್ಸಿಗಳಿಗೆ ಮುಂದುವರೆಯುತ್ತಿರುವ ಯೋಜನೆಗಳಿಗೆ 27/28ನೇ ಮಾರ್ಚ್ 2025ರಂದು ಪಾವತಿಸಿದ ಮೊತ್ತದ ಬಗೆಗಿನ ವಿವರಗಳನ್ನು ಸಂಲಗ್ನಿತ ಪಟ್ಟಿಯಲ್ಲಿ ತೋರಿಸಲಾಗಿದೆ.

ಈ ಕೆಳಗಿನವುಗಳನ್ನು ಗಮನಿಸಲಾಗಿದೆ.

(ಎ) ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿಯೆ(ಸಿಎಸ್ಆರ್)ಡೆಗಿನ 499 ಲಕ್ಷ ರೂ.ಗಳನ್ನು, ಕಂಪನಿಯು 27/28ನೇ ಮಾರ್ಚ್ 2025ರಂದು ವಿವಿಧ ಏಜೆನ್ಸಿಗಳಿಗೆ ಸಿಎಸ್ಆರ್ ಯೋಜನೆಗಳ ಅನುಷ್ಠಾನಕ್ಕಾಗಿ ಬಿಡುಗಡೆ ಮಾಡಿದೆ. ಮತ್ತು ಇದನ್ನು ಸಿಎಸ್ಆರ್ ನ ಮುಂದುವರೆಯುತ್ತಿರುವ ಯೋಜನೆಗಳೆಂದು ಪರಿಗಣಿಸಬಹುದು.

(ಬಿ) ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ವೆಚ್ಚಗಳನ್ನು ವಿವಿಧ ಏಜೆನ್ಸಿಗಳ ಮೂಲಕ ಮುಂದುವರೆಯುತ್ತಿರುವ ಯೋಜನೆಗಳೆಡೆಗೆ ಮಾಡುತ್ತಿರುವುದರಿಂದ, ಸಂಬಂಧಿತ ಏಜೆನ್ಸಿಗಳನ್ನು, ಯೋಜನೆಗಳ ಅನುಷ್ಠಾನದ ಪ್ರಗತಿಯ ಬಗೆಗೆ ವರದಿಗಳನ್ನು ನೀಡಬೇಕೆಂದು ಕೋರಬೇಕು. ಸಾಂಸ್ಥಿಕ ಸಾಮಾಜಿ ಜವಾಬ್ದಾರಿ ಸಮಿತಿಯು ಮತ್ತು ನಿರ್ದೇಶಕ ಮಂಡಳಿಯು ಸಿಎಸ್ಆರ್ ಮೊಬಲಗುಗಳ ಬಳಕೆಯ ಮೇಲ್ವಿಚಾರಣೆ ಮಾಡಿ ಅದನ್ನು ಪರಿಶೀಲಿಸಬೇಕು.

(ಸಿ) ಈ ಏಜೆನ್ಸಿಗಳಿಗೆ ನೀಡಿದ ಮೊಬಲಗುಗಳ ಬಗೆಗೆ, ಅವು ಕಾರ್ಪೊರೇಟ್ ಮಂತ್ರಾಲಯದ ಕಂಪನಿಗಳ ರಿಜಿಸ್ಟ್ರಾರ್‌ರವರಲ್ಲಿ ನಮೂನೆ ಸಿಎಸ್ಆರ್–1ನ್ನು ಸಲ್ಲಿಸಿವೆಯೇ ಎಂದು ಕಂಪನಿಯು ತನಿಖೆ ಮಾಡಬೇಕು.

(ಡಿ) 31–03–2025ರಂದು ಅಂತ್ಯಗೊಂಡ ವರ್ಷಕ್ಕೆ ಕಂಪನಿಯು ಸಾಂಸ್ಥಿಕ ಸಾಮಾಜಿಕ ಜವಾಬ್ದಾಯ ವರದಿಯನ್ನು ನಮೂನೆ ಸಿಎಸ್ಆರ್–2ರಲ್ಲಿ ಸಲ್ಲಿಸಬೇಕು.

(ಇ) ನಮೂನೆ ಸಿಎಸ್ಆರ್–2ರ ಖಾಲಿ ಪ್ರತಿ ಮತ್ತು ಕಂಪನಿ ಕಾಯಿದೆ 2013ರ ಅನುಸೂಚಿ–7ರ ಪ್ರತಿಯನ್ನು ನಾವು ಲಗತ್ತಿಸಿದ್ದು, ಕಾಲಂ 7(ಬಿ)(1)ರಲ್ಲಿ, ಕಂಪನಿಯು ಮುಂದುವರೆಯುತ್ತಿರುವ ವೆಚ್ಚಗಳೆಡೆಗೆ ಈ ಕೆಳಗಿನ ವಿವರಗಳನ್ನು ನೀಡಬೇಕು.

(i) ಕ್ರಮ ಸಂಖ್ಯೆ

(ii) ಯೋಜನಾ ಐಡಿ

(iii) ಅನುಸೂಚಿ–7ರಲ್ಲಿನ ಚಟುವಟಿಕೆಯ ವಿಷಯ

(iv) ಯೋಜನೆಯ ಹೆಸರು

(v) ಸ್ಥಳೀಯ ಪ್ರದೇಶ

(vi) ಯೋಜನೆಯ ಸ್ಥಳ – ರಾಜ್ಯ ಮತ್ತು ಜಿಲ್ಲೆ

(vii) ಯೋಜನೆಯ ಅವಧಿ(ತಿಂಗಳುಗಳಲ್ಲಿ)

(viii) ಆರ್ಥಿಕ ವರ್ಷದಲ್ಲಿ ವ್ಯಯಿಸಿದ ಮೊಬಲಗು(ರೂ.ಗಳಲ್ಲಿ)

(ix) ಅನುಷ್ಠಾನದ ರೀತಿ–ನೇರವಾಗಿ(ಹೌದು/ಇಲ್ಲ)

(x) ಅನುಷ್ಠಾನದ ರೀತಿ–ಅನುಷ್ಠಾನಗೊಳಿಸುವ ಏಜೆನ್ಸಿ(ಸಿಎಸ್ಆರ್ ನೋಂದಣಿ ಸಂಖ್ಯೆ–ಹೆಸರು)

ನಿಯಮ 9ರ ರೀತ್ಯ ನಿರ್ದೇಶಕ ಮಂಡಳಿಯು ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಸಮಿಯ ರಚನೆ, ಸಾಂಸ್ಥಿಕ ಸಾಮಾಜಿಕ ಜವಾಬ್ದಾಯ ನೀತಿಗಳು ಮತ್ತು ಅದು ಅನುಮೋದಿತ ಯೋಜನೆಗಳ ವಿವರಗಳನ್ನು ಕಂಪನಿಯ ವೆಬ್‌ಸೈಟ್‌ನಲ್ಲಿ, ಸಾರ್ವಜನಿಕ ಗಮನಕ್ಕಾಗಿ ಪ್ರಕಟಿಸಬೇಕು. ಈ ರೀತಿ ಮಾಡುವ ಬಗೆಗೆ ಕಂಪನಿಗೆ ಸಲಹೆ ನೀಡಲಾಗಿದೆ.

7. ನ್ಯಾಷನಲ್ ಕಂಪನಿ ಲಾ ಟ್ರಿಬ್ಯುನಲ್ ಮತ್ತು ಕಾನೂನು ದಾವೆಗಳು :

ನ್ಯಾಷನಲ್ ಕಂಪನಿ ಲಾ ಟ್ರಿಬ್ಯೂನಲ್ (ಎನ್‌ಸಿಎಲ್‌ಟಿ) ಬೆಂಗಳೂರು ಪೀಠವು, ಫಿರ್ಯಾದುದಾರರಾಗಿರುವ ಶ್ರೀಮತಿ ನಫ್ಲೀಸಾ ಮಸೂದ್ ಅಲಿ ಮತ್ತು ಶ್ರೀ ಆಸೀಫ್ ಅಲ್ಲಾದೀನ್ – ಪ್ರತಿವಾದಿಗಳಾದ ದಿ ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ, ಮತ್ತು ಪಿನಾಕಿನ್

ಚಿಮನ್‌ಲಾಲ್ ಷಾ ಪ್ರಕರಣ ಸಿಪಿ ಸಂಖ್ಯೆ 100/BB/2021ರ ಷೇರು ವರ್ಗಾವಣೆ ವಿಚಾರದಲ್ಲಿ 20–06–2024ರಂದು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

"ಫಲಿತಾಂಶವಾಗಿ, ಪ್ರಸ್ತುತ ಕಂಪನಿ ಪಿರ್ಯಾದು ಸಿಪಿ ಸಂಖ್ಯೆ 100/BB/2021 ಈ ಕೆಳಗಿನ ನಿರ್ದೇಶನಗಳೊಂದಿಗೆ ಮುಕ್ತಾಯಗೊಳಿಸಲಾಗಿದೆ.

1. ಕಂಪನಿಯು (ಪ್ರತಿವಾಹಿ ಸಂಖ್ಯೆ–1)ಯು ಎರಡನೇ ಪ್ರತಿವಾದಿ ಸಂಖ್ಯೆ–2ರವರು, ಕಂಪನಿಗೆ ಸಲ್ಲಿಸಿರುವ ಎಲ್ಲಾ ದಾಖಲೆಗಳ ನಕಲುಗಳನ್ನು ಫಿರ್ಯಾದುದಾರರಿಗೆ ಈ ಆದೇಶದ ದಿನಾಂಕದಿಂದ ಎರಡು ವಾರಗಳೊಳಗೆ ಒದಗಿಸತಕ್ಕದ್ದು.

2. ಸಮುಚಿತ ಸಿವಿಲ್ ನ್ಯಾಯಾಲಯವು ನೀಡುವ ಉತ್ತರಾಧಿಕಾರಿ ಸರ್ಟಿಫಿಕೇಟನ್ನು ಸಲ್ಲಿಸಲೋಸುಗ ಮತ್ತು ಕಂಪನಿಯನ್ನು ಮತ್ತು ಎರಡನೇ ಪ್ರತಿವಾದಿಯನ್ನು ಈ ಪ್ರಕರಣದ ಭಾಗಿದಾರರನ್ನಾಗಿ ಮಾಡಲು, ಮುಂದುವರೆದಂತೆ ಆರು ವಾರಗಳ ಕಾಲಾವಕಾಶವನ್ನು ನೀಡಲಾಗಿದೆ.

3. ಪ್ರತಿವಾದಿ ಸಂಖ್ಯೆ–2 ರವರಿಗೆ ತನ್ನ ವಾದವನ್ನು ಮಂಡಿಸಲು, ಕಂಪನಿಯೂ ಸಹ ನ್ಯಾಯಯುತವಾದ ಅವಕಾಶವನ್ನು ನೀಡತಕ್ಕದ್ದು.

4. ಪಕ್ಷಾಕಾರರುಗಳು ಎಲ್ಲಾ ದಾಖಲೆಗಳನ್ನು ಸಲ್ಲಿಸಿದ ನಂತರ, ಕಂಪನಿಯು ಕಾನೂನಿನ ಪ್ರಕಾರ ತನ್ನ ಅಂತಿಮ ತೀರ್ಮಾನವನ್ನು ಅಸಂಗ್ಧಿತವಾದ ಆದೇಶವನ್ನಾಗಿ ಹೊರಡಿಸತಕ್ಕದ್ದು.

5. ಕಂಪನಿಯ ಅಂತಿಮ ತೀರ್ಮಾನದಿಂದಾಗಿ ಭಾದಿತಗೊಂಡ ಯಾವುದೇ ಪಕ್ಷಾಕಾರನೂ ಈ ನ್ಯಾಯ ಮಂಡಳಿಯನ್ನು ಸಂಪರ್ಕಿಸಲು, ಕಾನೂನು ರೀತ್ಯ ಸ್ವತಂತ್ರವಿರುತ್ತಾನೆ.

6. ಕಂಪನಿಯು, ಈ ಆದೇಶದಂತೆ, ಪ್ರಶ್ನಿತ ಷೇರುಗಳ ಬಗೆಗೆ ಅಂತಿಮ ತೀರ್ಮಾನ ಕೈಗೊಳ್ಳುವವರೆಗೂ, ಯಥಾಸ್ಥಿತಿಯನ್ನು ಕಾಯ್ದುಕೊಳ್ಳತಕ್ಕದ್ದು.

7. ಪ್ರಸ್ತುತ ಅರ್ಜಿ ಸಿಪಿ ಸಂಖ್ಯೆ 100/BB/2021ನಲ್ಲಿ IA ಗಳೊಂದಿಗೆ ಇತ್ಯರ್ಥಗೊಳಿಸಲಾಗಿದೆ."

ಶ್ರೀಮತಿ ಸಫೀಸಾ ಮಸೂದ್ ಅಲಿ ಮತ್ತು ಶ್ರೀ ಆಸಿಫ್ ಅಲ್ಲಾದಿನ್(ಅರ್ಜಿದಾರರು) ನ್ಯಾಷನಲ್ ಕಂಪನಿ ಲಾ ಟ್ರಿಬ್ಯುನಲ್‌ರವರ ಮೇಲ್ಕಂಡ ಆದೇಶದ ವಿರುದ್ಧ ಮೇಲ್ಮನವಿಯನ್ನು ನ್ಯಾಷನಲ್ ಕಂಪನಿ ಲಾ ಅಪೆಲೇಟ್ ಟ್ರಿಬ್ಯುನಲ್, ಚೆನ್ನೈರವರಿಗೆ ಸಲ್ಲಿಸಲಾಗಿ, ಅಪೆಲೇಟ್ ಟ್ರಿಬ್ಯುನಲ್ ತಾ. 23–08–2024ರಂದು ಈ ಕೆಳಕಂಡ ಆದೇಶವನ್ನು ನೀಡಿದೆ.

"ವಾಸ್ತವವಾಗಿ ಪ್ಯಾರಾ 12ರಲ್ಲಿ ನೀಡಿದ ಉದ್ಧೃತವಾದ ನಿರ್ದೇಶನಗಳಲ್ಲಿ ಅರ್ಹತಾಧಾರಿತ ನ್ಯಾಯನಿರ್ಣಯವಿಲ್ಲದೆ ಅವು ಕಂಪನಿ ಕಾಯಿದೆ ಸೆಕ್ಷನ್ 58 ಮತ್ತು 59ರಡಿಯಲ್ಲಿನ ಕೆಲವು ಔಪಚಾರಿಕತಾ ಕ್ರಮಗಳ ಬಗೆಗೆ ಇದ್ದು ಅದು ಈ ನಡಾವಳಿಗಳ ಬಗೆಗೆ ನಿರ್ಣಯಕ್ಕೆ ಬರಲು ಪರಿಪಾಲಿಸಬೇಕಾಗಿರುವಂತಹವುವು. ಮನವಿದಾರರಿಗೆ ಪ್ಯಾರಾ 12ರ ಉಪ ಕಲಮು 2ರಲ್ಲಿನ ಆದೇಶದ ಬಗೆಗೆ ಉತ್ತರಾಧಿಕಾರ ಪ್ರಮಾಣ ಪತ್ರವನ್ನು ತನ್ನ ಪಿತ್ರಾರ್ಜಿತ ಹಕ್ಕನ್ನು ಸಮರ್ಥಿಸಿಕೊಳ್ಳಲು ಈ ಬಗೆಗೆ ಕೆಲವು ಶಂಕೆಗಳದ್ದು, ಅದು ಆದೇಶದ ಪ್ಯಾರಾ 12ರ ಉಪಕಲಮು 2ರ ಆದೇಶದಲ್ಲಿ ಕಾಯಿದೆಯ ಸೆಕ್ಷನ್ 58 ಮತ್ತು 59ರಡಿಯಲ್ಲಿನ ಪ್ರಾವಧಾನಗಳಲ್ಲಿ ಪಡೆದುಕೊಳ್ಳುವ ನಿರ್ಣಯ ತೆಗೆದುಕೊಳ್ಳುವ ಮುಂಚೆ ಅನುಸರಿಸಬೇಕಾದ ಕ್ರಮಗಳಾಗಿದ್ದವು. ಮನವಿದಾರರ ವಕೀಲರು ಕೆಲಕಾಲದ ವಾದ ಮಂಡನೆಯ ನಂತರ ಮನವಿದಾರರ ಮಾರ್ಗದರ್ಶನದಂತೆ, ಮನವಿಯನ್ನು ಹಿಂಪಡೆಯಲು ಕೋರಿದ್ದಾರೆ. ಪ್ಯಾರಾ 12ರ ಉಪಕಲಮು 2ರ ರೀತ್ಯ, ಸಿಟಿ ಸಿವಿಲ್ ನ್ಯಾಯಾಲಯಕ್ಕೆ ಉತ್ತರಾಧಿಕಾರಿ ಪ್ರಮಾಣಪತ್ರಕ್ಕೆ ಅರ್ಜಿ ಸಲ್ಲಿಸಿದರೆ, ಈ ನ್ಯಾಯಾಲಯವು ಪ್ರಮಾಣ ಪತ್ರ ನೀಡುವಲ್ಲಿನ ಪ್ರಕ್ರಿಯೆಗಳನ್ನು ಎನ್‌ಸಿಎಲ್‌ಟಿ ಯ ಆದೇಶ ಪ್ರಕಾರ ತ್ವರಿತಗೊಳಿಸಬಹುದು. ಈ ಪ್ರಮಾಣ ಪತ್ರದ ನೀಡುವಿಕೆಯ ಮನವಿಯು ವಾಡಿಕೆಯ ಸ್ವರೂಪದ್ದಾಗಿರುವುದರಿಂದ, ಸಿಟಿ ಸಿವಿಲ್ ನ್ಯಾಯಾಲಯವು ತ್ವರಿತವಾಗಿ ಪ್ರಮಾಣ ಪತ್ರವನ್ನು ನೀಡುವುದು. ಈ ಹಂತದಲ್ಲಿ ನಾವು ಈ ಪ್ರಕರಣದ ಅರ್ಹತೆಗಳ ಬಗೆಗೆ ಕೈ ಹಾಕುವುದಿಲ್ಲವೆಂಬುದನ್ನು ಸ್ಪಷ್ಟಪಡಿಸಲಾಗಿದೆ. ಹಾಗಾಗಿ, ಕಂಪನಿ ಅರ್ಜಿ(ಎಟಿ)(ಸಿಹೆಚ್) ಸಂಖ್ಯೆ 53/2024ನ್ನು ಮೇಲ್ಕಂಡ ಸ್ವಾತಂತ್ರ್ಯಕ್ಕೆ ಒಳಪಟ್ಟು, ಹಿಂಪಡೆಯಲಾಗಿದೆಯೆಂದು ಪರಿಭಾವಿಸಿ ವಜಾ ಮಾಡಲಾಗಿದೆ."

ತದನಂತರ ಶ್ರೀಮತಿ ನಫೀಸಾ ಮಸೂದ್ ಅಲಿ ಮತ್ತು ಅಸೀಫ್ ಅಲ್ಲಾದೀನ್(ಮನವಿದಾರರು) ಉತ್ತರಾಧಿಕಾರ ಸರ್ಟಿಫಿಕೇಟನ್ನು ಮಂಜೂರು ಮಾಡುವಂತೆ, ಭಾರತೀಯ ಉತ್ತರಾಧಿಕಾರ ಕಾಯಿದೆ 1925 ರ ಸೆಕ್ಷನ್ 372ರಡಿಯಲ್ಲಿ, 3ನೇ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಸಿಕಂದರಾಬಾದ್‌ರವರಲ್ಲಿ ಓ.ಪಿ. ಸಂಖ್ಯೆ 44/2024ರಲ್ಲಿ ಮನವಿ ಸಲ್ಲಿಸಿದ್ದಾರೆ. ಈ ಮನವಿಯು ಪರಿಗಣನೆಗಾಗಿ ಬಾಕಿ ಇದೆ.

ತದನಂತರ ಶ್ರೀಮತಿ ನಫೀಸಾ ಮಸೂದ್ ಅಲಿ ಮತ್ತು ಅಸೀಫ್ ಅಲ್ಲಾದೀನ್(ಮನವಿದಾರರು) ಎನ್‌ಸಿಎಲ್‌ಟಿ, ಬೆಂಗಳೂರುರವರಿಗೆ ಸಮಯ ವಿಸ್ತರಣೆಗಾಗಿ ಕೋರಿದ್ದಾರೆ. ಎನ್‌ಸಿಎಲ್‌ಟಿ ಅವರು ತಾ. 21–03–2025 ಈ ಕೆಳಕಂಡ ಆದೇಶವನ್ನು ನೀಡಿದ್ದಾರೆ.

"ಪ್ರಕರಣವನ್ನು 4–06–2025ಕ್ಕೆ ಪಟ್ಟಿಯಲ್ಲಿ ಸೇರಿಸಿ ಮತ್ತು ಈ ಮಧ್ಯೆ, ಮನವಿದಾರರಿಗೆ, ಪ್ರತಿವಾದಿಗಳಲ್ಲಿ ಪ್ರಮಾಣ ಪತ್ರ ಮತ್ತು ಇತರೇ ದಾಖಲೆಗಳನ್ನು ಸಲ್ಲಿಸಲು ಇಲ್ಲಿಯವರೆಗೆ ಮತ್ತು ಇನ್ನು ಮುಂದಿನ 10 ವಾರಗಳ ಸಮಯವನ್ನು ವಿಸ್ತರಿಸಲಾಗಿದೆ. ಪ್ರತಿವಾದಿ ಸಂಖ್ಯೆ 1 ಮತ್ತು 2ರವರಿಗೆ ಮನವಿದಾರರು ತಿಳಿಸತಕ್ಕದ್ದು."

ಶೀಘ್ರ ವಿಲೇವಾರಿಗಾಗಿ ಕಂಪನಿಯು ಪ್ರಕರಣವನ್ನು ಹಿಂಬಾಲಿಸಬೇಕೆಂದು ಸಲಹೆ ನೀಡಲಾಗಿದೆ.

8. ಇತರೇ ಸಾಮಾನ್ಯ ಉದ್ಯಮ ನಿರ್ದಿಷ್ಟ ಕಾನೂನುಗಳ ಪರಿಪಾಲನೆಯ ಮೇಲ್ವಿಚಾರಣೆ :

ಗಣಿ ಉದ್ಯಮಕ್ಕೆ ಅನ್ವಯವಾಗುವ ಎಲ್ಲಾ ನಿರ್ದಿಷ್ಟ ಕಾಯಿದೆಗಳ ಮತ್ತು ಇತರೇ ಸಾಮಾನ್ಯ ಕಾಯಿದೆಗಳ ಹಾಗೂ ನೌಕರರಿಗೆ ಸಂಬಂಧಿಸಿದ ಕಾಯಿದೆಗಳ ಪರಿಪಾಲನೆಯ ಉಸ್ತುವಾರಿ ಮತ್ತು ಮೇಲ್ವಿಚಾರಣೆಗಾಗಿ ಕಂಪನಿಯು ಓರ್ವ ನಿವೃತ್ತ ಸತ್ರ ನ್ಯಾಯಾಧೀಶರ ಸೇವೆಯನ್ನು ಪರಿಪಾಲನೆಯೆಡೆಗೆ ಸಂಬಂಧಿತ ಇಲಾಖೆಗಳಿಂದ ಪರಿಪಾಲನಾ ಪ್ರಮಾಣಪತ್ರಗಳನ್ನು, ತ್ರೈಮಾಸಿಕ ಆಧಾರದಲ್ಲಿ ಪಡೆದುಕೊಂಡು ಅವನ್ನು ನಿರ್ದೇಶಕ ಮಂಡಳಿಯ ಸಭೆಗಳಲ್ಲಿ ಪ್ರಸ್ತುತ ಪಡಿಸಲಾಗುತ್ತಿದೆ. ಕಂಪನಿಯ ಪರವಾದ ಮತ್ತು ವಿರುದ್ಧವಾದ ನ್ಯಾಯಾಲಯದಲ್ಲಿರುವ ಮೊಕದ್ದಮೆಗಳ ಸ್ಥಿತಿಗಳ ಬಗ್ಗೆಯೂ ಸಮಯಾನುಸಮಯಕ್ಕೆ, ಕಂಪನಿಯು ಸ್ಥಿತಿ ವಿವರಣಾ ಪಟ್ಟಿಯನ್ನು ತಯಾರಿಸುತ್ತದೆ.

ಬಹುತೇಕವಾಗಿ ಕಂಪನಿಯ ವಿರುದ್ಧ ಬಾಕಿ ಇರುವ ವ್ಯಾಜ್ಯಗಳು, ಕಂಪನಿಯು ವಶಪಡಿಸಿಕೊಂಡಿರುವ ಭೂಮಿಯೆಡೆಗಿನ ಪರಿಹಾರ ಅಥವಾ ಉದ್ಯೋಗಗಳ ಬಗೆಗೆಯೇ ಇವೆ.

9. ನಮೂನೆ ಎಂಬಿಪಿ–1ರಲ್ಲಿ, ನಿರ್ದೇಶಕರುಗಳು, ಇತರೇ ಕಂಪನಿಗಳಲ್ಲಿ ಹೊಂದಿರುವ ಆಸಕ್ತಿಗಳ ಬಗೆಗಿನ ಪ್ರಕಟಣೆ :

ಕಂಪನಿ ಕಾಯಿದೆ 2013ರ ಸೆಕ್ಷನ್ 184ರ ರೀತ್ಯ ಪ್ರತಿ ಆರ್ಥಿಕ ವರ್ಷದ ಮೊದಲನೇ ನಿರ್ದೇಶಕ ಮಂಡಳಿಯ ಸಭೆಯಲ್ಲಿ, ಪ್ರತಿಯೋರ್ವ ನಿರ್ದೇಶಕರೂ ನಮೂನೆ ಎಂಬಿಪಿ–1 (ನಿರ್ದೇಶಕರ ಆಸಕ್ತಿಯ ಪ್ರಕಟಣೆ)ರಲ್ಲಿ, ಬೇರೆ ಕಂಪನಿಗಳಲ್ಲಿ ನಿರ್ದೇಶಕರಾಗಿ, ಪಾಲುದಾರಿಕೆ ಸಂಸ್ಥೆಯಲ್ಲಿ ಪಾಲುದಾರರಾಗಿ ಹೊಂದಿರುವ ಆಸಕ್ತಿಗಳನ್ನು ಕಂಪನಿಗೆ, ಸಂಬಂಧಿಸಿದ ಪಕ್ಷಾಕಾರರುಗಳೊಂದಿಗಿನ ವ್ಯವಹಾರಗಳನ್ನು ವಿಚಾರಿಸಿ ಖಚಿತಪಡಿಸಿಕೊಳ್ಳಲು ಅನುಕೂಲವಾಗುವಂತೆ ಪ್ರಕಟಿಸಬೇಕಿರುತ್ತದೆ.

ಕಂಪನಿಯು ನಮೂನೆ ಎಂಬಿಪಿ–1ನ್ನು ನಿರ್ದೇಶಕರುಗಳಿಂದ ಪಡೆಯುತ್ತಿಲ್ಲ ಮತ್ತು ಅದನ್ನು ದಾಖಲೆಗಳಲ್ಲಿ ಸೇರಿಸಲೋಸುಗ ಪ್ರತಿ ಆರ್ಥಿಕ ವರ್ಷದ ಮೊದಲನೇ ನಿರ್ದೇಶಕ ಮಂಡಳಿಯ ಸಭೆಯಲ್ಲಿ ಪ್ರಸ್ತುತ ಪಡಿಸುತ್ತಿಲ್ಲ. ಕಾಯಿದೆಯ ಸೆಕ್ಷನ್ 184ನ್ನು ಪರಿಪಾಲಿಸುವಂತೆ ಕಂಪನಿಗೆ ಸಲಹೆ ನೀಡಲಾಗಿದೆ.

10. ಕಾರ್ಯಕಾರಿ ಮತ್ತು ಕಾರ್ಯಕಾರಿಯಲ್ಲದ ನಿರ್ದೇಶಕರುಗಳ ಸಮರ್ಪಕ ಸಮತೋಲನೆ :

ನಮೂನೆ ಎಂಆರ್–3(ಸೆಕ್ರೆಟೇರಿಯಲ್ ಪರಿಶೋಧನಾ ವರದಿ)ರ ರೀತ್ಯ. ಸೆಕ್ರೆಟೇರಿಯಲ್ ಪರಿಶೋಧಕರು, ನಿರ್ದೇಶಕ ಮಂಡಳಿಯು ಕಾರ್ಯಕಾರಿ ನಿರ್ದೇಶಕರು, ಕಾರ್ಯಕಾರಿಯಲ್ಲದ ನಿರ್ದೇಶಕರು ಮತ್ತು ಸ್ವತಂತ್ರ ನಿರ್ದೇಶಕರುಗಳ ಸಮರ್ಪಕ ಸಮತೋಲನೆಯಿಂದ ರಚಿತವಾಗಿದೆಯೆಂದು ವರದಿ ನೀಡಬೇಕು. ಹಟ್ಟಿ ಚಿನ್ನದ ಗಣಿ ಕಂಪನಿಯಲ್ಲಿ ಎಲ್ಲಾ ನಿರ್ದೇಶಕರುಗಳು, ವ್ಯವಸ್ಥಾಪಕ ನಿರ್ದೇಶಕರನ್ನು ಹೊರತುಪಡಿಸಿ, ಕಾರ್ಯಕಾರಿಯಲ್ಲದ ನಾಮಾಂಕಿತ ನಿರ್ದೇಶಕರುಗಳಾಗಿದ್ದಾರೆ. ಒಂದು ಉತ್ತಮ

ಸಾಂಸ್ಥಿಕ ಆಳ್ವಿಕೆಯ ಆಚರಣೆಗಾಗಿ, ಕಂಪನಿಯ ಕಾರ್ಯಕಾರಿ ನಿರ್ದೇಶಕರು ಮತ್ತು ಉಪಪ್ರಧಾನ ವ್ಯವಸ್ಥಾಪಕರು(ಹಣಕಾಸು)ರವರುಗಳನ್ನು ಪೂರ್ಣಕಾಲಿಕ ನಿರ್ದೇಶಕರನ್ನಾಗಿ, ನಿರ್ದೇಶಕ ಮಂಡಳಿಯಲ್ಲಿ ನೇಮಿಸಿ ಡಿಐಆರ್–12 ಸಲ್ಲಿಸಿ ಕೇಂದ್ರ ಸಾರ್ವಜನಿಕ ಕ್ಷೇತ್ರದ ಕಂಪನಿಗಳನ್ನು ಈ ವಿಷಯದಲ್ಲಿ ಹಿಂಬಾಲಿಸುವಂತೆ, ಕಂಪನಿಗೆ ಸಲಹೆ ನೀಡಲಾಗಿದೆ.

11. ಕಂಪನಿ ಕಾಯಿದೆ 134(3)()ರ ರೀತ್ಯ ಸೆಕ್ರೆಟೇರಿಯಲ್ ಪರಿಶೋಧಕರ ಷರತ್ತುಬದ್ಧ ವರದಿಗಳಿಗೆ ಆಡಳಿತ ವರ್ಗದ ಉತ್ತರಗಳನ್ನು ಸಲ್ಲಿಸದಿರುವ ಬಗೆಗೆ :

2023–24ನೇ ವರ್ಷದಲ್ಲಿನ ಸೆಕ್ರೆಟೇರಿಯಲ್ ಪರಿಶೋಧನಾ ವರದಿಯಲ್ಲಿನ ಷರತ್ತುಬದ್ಧ ಅಭಿಪ್ರಾಯಗಳೆಡೆಗೆ ಆಡಳಿತ ವರ್ಗದ ಉತ್ತರಗಳನ್ನು ಸಲ್ಲಿಸಲಾಗಿಲ್ಲವೆಂಬುದನ್ನು ಗಮನಿಸಲಾಗಿದೆ. ತತ್ಪರಿಣಾಮವಾಗಿ, ಆಡಳಿತ ವರ್ಗದ ಈ ಉತ್ತರಗಳನ್ನು ಕಂಪನಿ ಕಾಯಿದೆ 2013ರ ಸೆಕ್ಷನ್ 134(3)(ಎಫ್)ರಲ್ಲಿ ಅವಶ್ಯಕವಿರುವಂತೆ ನಿರ್ದೇಶಕ ಮಂಡಳಿಯ 2023–24ರ ವರದಿಗೆ ಸಂಲಗ್ನಗೊಳಿಸಲಾಗಿಲ್ಲ. ಇದು ಸೆಕ್ರೆಟೇರಿಯಲ್ ಪರಿಶೋಧಕ ಷರತ್ತುಬದ್ಧ ಅಭಿಪ್ರಾಯ, ರಕ್ಷಿತ ಅಭಿಪ್ರಾಯ, ಪ್ರತಿಕೂಲ ಅಭಿಪ್ರಾಯಗಳಿಗೆ ನಿರ್ದೇಶಕ ಮಂಡಳಿಯ ವಿವರಣೆಗಳು ಮತ್ತು ಟೀಕೆ ಟಿಪ್ಪಣಿಗಳ ಕಾನೂನಾತ್ಮಕ ಪ್ರಕಟಣೆಗಳ ಅವಶ್ಯಕತೆಗಳನ್ನು ಕಂಪನಿಯು ಪರಿಪಾಲಿಸಿಲ್ಲವೆನ್ನುವ ಕ್ರಮವಾಗಿದೆ.

12. ಪೂರ್ಣಕಾಲಿಕ ಕಂಪನಿ ಕಾರ್ಯದರ್ಶಿಯ ನೇಮಕಾತಿ :

ಕಂಪನಿ ಕಾಯಿದೆ 2013 ರೊಂದಿಗೆ ಓದಲಾದ ಕಂಪನಿಗಳ (ವ್ಯವಸ್ಥಾಪಕ ಸಿಬ್ಬಂದಿಗಳ ನೇಮಕಾತಿ ಮತ್ತು ಸಂಭಾವನೆ) ನಿಯಮ 2014ರಂತೆ 10 ಕೋಟಿ ರೂ.ಗಳ ಅಥವಾ ಅದಕ್ಕೂ ಅಧಿಕವಾದ ಪಾವತಿಯಾದ ಷೇರು ಬಂಡವಾಳ ಹೊಂದಿರುವ ಸಾರ್ವಜನಿಕ ಕಂಪನಿಯು ಓರ್ವ ಪೂರ್ಣಕಾಲಿಕ ಕಂಪನಿ ಕಾರ್ಯದರ್ಶಿಯನ್ನು ಪ್ರಮುಖ ವ್ಯವಸ್ಥಾಪಕ ಸಿಬ್ಬಂದಿಯನ್ನಾಗಿ ಹೊಂದಿರುವುದನ್ನು ಅವಶ್ಯಕಪಡಿಸಿದೆ.

ದಿ ಹಟ್ಟಿ ಚಿನ್ನದ ಗಣಿ ಕಂಪನಿಯ ಪಾವತಿಯಾದ ಷೇರು ಬಂಡವಾಳವು 2,96,20,371 ರೂ.ಗಳಾಗಿದ್ದು ಅದು 10 ಕೋಟಿ ರೂ.ಗಳಾಗಿಂತ ಕಡಿಮೆಯಾಗಿದ್ದು ಪ್ರಮುಖ ವ್ಯವಸ್ಥಾಪಕ ಸಿಬ್ಬಂದಿಯಾಗಿ ಓರ್ವ ಪೂರ್ಣಕಾಲಿಕ ಕಂಪನಿ ಕಾರ್ಯದರ್ಶಿಯನ್ನು ನೇಮಿಸುವುದು ಅಧ್ಯಾದೇಶೀಯವಾಗಿರುವುದಿಲ್ಲ. ಆದಾಗ್ಯೂ, ಕಂಪನಿಯ ಕಾರ್ಯಾಚರಣೆಗಳ ಗಾತ್ರ ಮತ್ತು ಅದರ ಚಟುವಟಿಕೆಗಳ ಸ್ವರೂಪವನ್ನು ಪರಿಗಣಿಸಿ, ಕಂಪನಿ ಕಾಯಿದೆ ಮತ್ತು ಇತರೆ ಕಾರ್ಪೊರೇಟ್ ಕಾಯಿದೆಗಳ ಸಾಮಯಿಕ ಪರಿಪಾಲನೆಯನ್ನು ಖಚಿತಪಡಿಸಿಕೊಳ್ಳಲು, ಓರ್ವ ಪೂರ್ಣಕಾಲಿಕ ಕಂಪನಿ ಕಾರ್ಯದರ್ಶಿಯನ್ನು ನೇಮಿಸುವುದು ಅಪೇಕ್ಷಣೀಯವಾಗಿರುತ್ತದೆ.

ಸಹಿ/–
ಸ್ವಯಂಭು ವಿಶ್ವನಾಥನ್
ವೃತ್ತಿಪರ ಕಂಪನಿ ಕಾರ್ಯದರ್ಶಿ
ಸದಸ್ಯತ್ವ ನಂ. F12190
ಸಿಪಿ ನಂ. 5284
ಯುಡಿಐಎನ್ ಸಂ. F012190G001645415

ಸ್ಥಳ : ಬೆಂಗಳೂರು
ತಾ : 25–10–2025

ಅನುಬಂಧ III

ಕ್ರಮ ಸಂಖ್ಯೆ	ಸೆಕ್ರೆಟ್ರೇರಿಯಲ್ ಪರಿಶೋಧಕರ ಕಂಡಿಕೆ	ಆಡಳಿತ ವರ್ಗದ ಉತ್ತರ
1.	**ನಿರ್ದೇಶಕರ ಮಂಡಳಿಯ ರಚನೆ – ಸ್ವತಂತ್ರ ನಿರ್ದೇಶಕರ ನೇಮಕಾತಿ ಮಾಡದಿರುವಿಕೆ** ಕಂಪನಿ ಕಾಯಿದೆ 2013ರ ಸೆಕ್ಷನ್ 149 ರೊಂದಿಗೆ ಓದಲಾದ ಕಂಪನಿಗಳ (ನಿರ್ದೇಶಕರುಗಳ ನೇಮಕಾತಿ ಮತ್ತು ಅರ್ಹತೆ) ನಿಯಮ 2014ರ ನಿಯಮ 4ರ ಪ್ರಕಾರ ಒಂದು ಸಾರ್ವಜನಿಕ ಕಂಪನಿಯ ವಹಿವಾಟು 100 ಕೋಟಿ ರೂ.ಗಳು ಅಥವಾ ಅದಕ್ಕಿಂತ ಅಧಿಕದ್ದಾದರೆ, ಕನಿಷ್ಟ 2 ಸ್ವತಂತ್ರ ನಿರ್ದೇಶಕರನ್ನು ಮಂಡಳಿಯಲ್ಲಿ ಹೊಂದಿರಬೇಕಿರುತ್ತದೆ. ವಿಮರ್ಶೆಗೆ ಒಳಪಟ್ಟ ಅವಧಿಯಲ್ಲಿ ಕಂಪನಿಯು ಯಾವುದೇ ಸ್ವತಂತ್ರ ನಿರ್ದೇಶಕರನ್ನು ಹೊಂದಿಲ್ಲ. ಈ ಸಂಬಂಧ, ಕರ್ನಾಟಕ ಸರ್ಕಾರಿ ಕಂಪನಿಗಳಲ್ಲಿ ಸ್ವತಂತ್ರ ನಿರ್ದೇಶಕರ ನೇಮಕಾತಿಯ ವಿಷಯದಲ್ಲಿ ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ತಾ. 12.09.2023ರ ಸುತ್ತೋಲೆ ಸಂಖ್ಯೆ ಎಫ್‌ಡಿ 91 ಐಎನ್‌ವಿ 2023ರ ಪ್ರತಿಯನ್ನು ಲಗತ್ತಿಸಲಾಗಿದೆ. ಕಂಪನಿಗಳ (ನಿರ್ದೇಶಕರುಗಳ ನೇಮಕಾತಿ ಮತ್ತು ಅರ್ಹತೆ) ನಿಯಮಗಳು 2014ರ ನಿಯಮ ಸಂಖ್ಯೆ 4ನ್ನು ಮತ್ತು ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಮೇಲ್ಕಂಡ ಸುತ್ತೋಲೆಯನ್ನು ಪರಿಪಾಲಿಸುವಂತೆ ಕಂಪನಿಗೆ ಸಲಹೆ ನೀಡಲಾಗಿದೆ.	ಕಂಪನಿಯು ಸರ್ಕಾರಿ ಕಂಪನಿಯಾಗಿದ್ದು, ನಿರ್ದೇಶಕ ಮಂಡಳಿಯು ಸೂಕ್ತ ಕ್ರಮ ಗಳನ್ನು ಉಪಕ್ರಮಿಸುತ್ತದೆ. ಎಲ್ಲಾ ನಿರ್ದೇಶಕರುಗಳನ್ನು ಕರ್ನಾಟಕ ಸರ್ಕಾರವು ನೇಮಿಸುತ್ತದೆ.
2.	**ಲೆಕ್ಕ ಪರಿಶೋಧನಾ ಸಮಿತಿ :** ಕಂಪನಿ ಕಾಯಿದೆ 2013ರ ಸೆಕ್ಷನ್ 177(2)ರ ಪ್ರಕಾರ ಲೆಕ್ಕಪರಿಶೋಧನಾ ಸಮಿತಿಯು 3 ನಿರ್ದೇಶಕರುಗಳನ್ನು ಹೊಂದಿರಬೇಕಿದ್ದು, ಅದರಲ್ಲಿ ಕನಿಷ್ಟ 2 ಸ್ವತಂತ್ರ ನಿರ್ದೇಶಕರನ್ನು ಹೊಂದಿರಬೇಕಿರುತ್ತದೆ. ವಿಮರ್ಷೆಗೆ ಒಳಪಟ್ಟ ಅವಧಿಯಲ್ಲಿ, ಲೆಕ್ಕಪರಿಶೋಧನಾ ಸಮಿತಿಯು ಎರಡು(2) ಸ್ವತಂತ್ರ ನಿರ್ದೇಶಕರನ್ನು ಹೊಂದಿರಲಿಲ್ಲ. ಈ ಸಂದರ್ಭದಲ್ಲಿ ಕರ್ನಾಟಕ ಸರ್ಕಾರಿ ಕಂಪನಿಗಳಲ್ಲಿ ಲೆಕ್ಕಪರಿಶೋಧನಾ ಸಮಿತಿಯ ವಿಷಯದಲ್ಲಿ ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ತಾ. 05–01–2024ರ ಸುತ್ತೋಲೆ ಸಂಖ್ಯೆ ಎಫ್‌ಡಿ 114 ಐಎನ್‌ವಿ 2023ರ ಪ್ರತಿಯನ್ನು ಲಗತ್ತಿಸಲಾಗಿದೆ. ಕಂಪನಿ ಕಾಯಿದೆ 2013ರ ಸೆಕ್ಷನ್ 177(2) ಮತ್ತು ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಮೇಲ್ಕಂಡ ಸುತ್ತೋಲೆಯನ್ನು ಪರಿಪಾಲಿಸುವಂತೆ ಕಂಪನಿಗೆ ಸಲಹೆ ನೀಡಲಾಗಿದೆ	ಸ್ವತಂತ್ರ ನಿರ್ದೇಶಕರುಗಳ ನೇಮಕಾತಿಯ ನಂತರ, ಲೆಕ್ಕಪರಿಶೋಧನಾ ಸಮಿತಿಯನ್ನು ಪುನರ್‌ರಚಿಸಲಾಗುವುದು.

3	**ನಾಮಾಂಕನ ಮತ್ತು ಸಂಭಾವನಾ ಸಮಿತಿಯ ರಚನೆ :** ಕಂಪನಿ ಕಾಯಿದೆ 2013ರ ಸೆಕ್ಷನ್ 178ರೊಂದಿಗೆ ಓದಲಾದ ಕಂಪನಿಗಳ (ನಿರ್ದೇಶಕ ಮಂಡಳಿಯ ಸಭೆಗಳು ಮತ್ತು ಅದರ ಅಧಿಕಾರಗಳು) ನಿಯಮಗಳು 2014ರ ನಿಯಮ 4ರ ಪ್ರಕಾರ, 100 ಕೋಟಿ ರೂ.ಗಳು ಅಥವಾ ಅದಕ್ಕೂ ಅಧಿಕ ವಹಿವಾಟಿರುವ ಪ್ರತಿ ಸಾರ್ವಜನಿಕ ಕಂಪನಿಯೂ ಮೂರು ಮತ್ತು ಅದಕ್ಕಿಂತ ಅಧಿಕ ಸಂಖ್ಯೆಯ ಕಾರ್ಯಕಾರಿಯಲ್ಲದ ನಿರ್ದೇಶಕರನ್ನು ಹೊಂದಿರಬೇಕಿದ್ದು, ಅದರಲ್ಲಿನ ಸ್ವತಂತ್ರ ನಿರ್ದೇಶಕರು ಅರ್ಧಕ್ಕಿಂತ ಕಡಿಮೆ ಇಲ್ಲದಿರುವಂತೆ ಹೊಂದಿರುವ ನಾಮಾಂಕನ ಮತ್ತು ಸಂಭಾವನಾ ಸಮಿತಿಯನ್ನು ಹೊಂದಿರಬೇಕಿರುತ್ತದೆ. ಕಂಪನಿಯು ಈ ನಾಮಾಂಕನ ಮತ್ತು ಸಂಭಾವನಾ ಸಮಿತಿಯನ್ನು ರಚಿಸಿರುವುದಿಲ್ಲ.	ಸ್ವತಂತ್ರ ನಿರ್ದೇಶಕರುಗಳ ನೇಮಕಾತಿಯ ನಂತರ, ನಾಮಾಂಕನ ಮತ್ತು ಸಂಭಾವನ ಸಮಿತಿಯನ್ನು ಪುನರ್‌ರಚಿಸಲಾಗುವುದು.
4.	**ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಸಮಿತಿ :** ಕಂಪನಿ ಕಾಯಿದೆ 2013ರ ಸೆಕ್ಷನ್ 135ರ ರೀತ್ಯ 1000 ಕೋಟಿಗಳು ಅಥವಾ ಅದಕ್ಕೂ ಅಧಿಕ ವಹಿವಾಟಿರುವ ಅಥವಾ 5 ಕೋಟಿ ರೂ.ಗಳ ತೆರಿಗೆ ಮುಂಚಿನ ಲಾಭ ಹೊಂದಿರುವ ಕಂಪನಿಯು ನಿರ್ದೇಶಕರುಗಳನ್ನೊಳಗೊಂಡ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಸಮಿತಿಯನ್ನು ಹೊಂದಿ ಅದರಲ್ಲಿ ಕನಿಷ್ಟ ಓರ್ವ ನಿರ್ದೇಶಕರು ಸ್ವತಂತ್ರ ನಿರ್ದೇಶಕರಿರಬೇಕು. ಕಂಪನಿಯು ರಚಿಸಿರುವ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಸಮಿತಿಯಲ್ಲಿ ಸ್ವತಂತ್ರ ನಿರ್ದೇಶಕರು ಸೇರ್ಪಡೆಗೊಂಡಿಲ್ಲ.	ಸ್ವತಂತ್ರ ನಿರ್ದೇಶಕರುಗಳ ನೇಮಕಾತಿಯ ನಂತರ, ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಸಮಿತಿಯನ್ನು ಪುನರ್‌ರಚಿಸಲಾಗುವುದು.
5.	**ಪಾವತಿಸಿಲ್ಲದ/ಕ್ಲೇಮು ಮಾಡಿಲ್ಲದ ಲಾಭಾಂಶಗಳಿಗೆ ಸಂಬಂಧಿಸಿದ ಷೇರುಗಳನ್ನು ಹೂಡಿಕೆದಾರರ ಶಿಕ್ಷಣಾ ಮತ್ತು ಸಂರಕ್ಷಣಾ ನಿಧಿಗೆ ವರ್ಗಾವಣೆ ಮಾಡುವುದು :** ಕಂಪನಿ ಕಾಯಿದೆ 2013ರ ಸೆಕ್ಷನ್ 124(6)ರೊಂದಿಗೆ ಓದಲಾದ ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) 2014ರ ನಿಯಮ 6ರ ಪ್ರಕಾರ ಯಾವುದೇ ಷೇರುಗಳೆಡೆಗಿನ ಲಾಭಾಂಶವನ್ನು ಕ್ರಮಾನುಗತ ಏಳು ವರ್ಷಗಳಲ್ಲಿಯೂ ಕ್ಲೇಮು ಮಾಡದಿದ್ದಲ್ಲಿ, ಅಂತಹ ಷೇರುಗಳನ್ನು ಹೂಡಿಕೆದಾರರ ಶಿಕ್ಷಣಾ ಮತ್ತು ಸಂರಕ್ಷಣಾ ನಿಧಿಗೆ ವರ್ಗಾಯಿಸಬೇಕಿರುತ್ತದೆ. ಕಂಪನಿಯು ಅಂತಹ ಷೇರುಗಳನ್ನು ಹೂಡಿಕೆದಾರರ ಶಿಕ್ಷಣ ಮತ್ತು ಸಂರಕ್ಷಣಾ ನಿಧಿಗೆ ವರ್ಗಾಯಿಸುವಂತೆ ಸಲಹೆ ನೀಡಲಾಗಿದೆ. ಈ ಸಂದರ್ಭದಲ್ಲಿ ಕಾರ್ಪೊರೇಟ್ ಮಂತ್ರಾಲಯವು ನಮೂನೆ ಐಇಪಿಎಫ್–5ನ್ನು (ಪಾವತಿಸಿಲ್ಲದ ಲಾಭಾಂಶವನ್ನು ಷೇರುಗಳನ್ನು ಕ್ಲೇಮು ಮಾಡಲು ಅರ್ಜಿ) ತಿದ್ದುಪಡಿ ಮಾಡಿ ತಾ. 01.10.2025ರಂದು ಅಧಿಸೂಚನೆ 733(ಇ) ಹೊರಡಿಸಿದ್ದು ಅದರ ಪ್ರತಿಯನ್ನು ಲಗತ್ತಿಸಿದ್ದೇನೆ.	ಕಂಪನಿಯು ಅಂತಹ ಷೇರುಗಳನ್ನು ಹೂಡಿಕೆದಾರರ ಶಿಕ್ಷಣ ಮತ್ತು ಸಂರಕ್ಷಣಾ ನಿಧಿಗೆ ವರ್ಗಾಯಿಸಲು ಅಗತ್ಯವಾದ ಕ್ರಮಗಳನ್ನು ಕೈಗೊಳ್ಳುತ್ತದೆ.

ನಿರ್ದೇಶಕರ ವರದಿಗೆ ಅನುಬಂಧ–IV

2024–25ನೇ ಆರ್ಥಿಕ ವರ್ಷಕ್ಕೆ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿಯ(ಸಿಎಸ್‌ಆರ್) ಬಗೆಗಿನ ವಾರ್ಷಿಕ ವರದಿ

1.	ಕಂಪನಿಯ ಸಾಮಾಜಿಕ ಜವಾಬ್ದಾರಿ ನೀತಿಗಳ ಬಗೆಗೆ ಒಂದು ಕಿರು ರೂಪುರೇಶೆ ಮತ್ತು ಕೈಗೊಳ್ಳಲು ಉದ್ದೇಶಿತ ಯೋಜನೆಗಳು ಮತ್ತು ಕಾರ್ಯಕ್ರಮಗಳು–ವೆಬ್‌ಸೈಟ್‌ಗೆ ಸಂಬಂಧಿಸಿದಂತೆ ಮತ್ತು ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಸಮಿತಿಯ ವಿವರಗಳು	ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ನೀತಿಗಳು ಕಂಪನಿಯ ವೆಬ್‌ಸೈಟ್‌ನಲ್ಲಿ ದೊರೆಯುತ್ತವೆ.
2.	ಕಂಪನಿಯ ಕಳೆದ 3 ವರ್ಷಗಳ ಸರಾಸರಿ ನಿವ್ವಳ ಲಾಭ	24489.33 ಲಕ್ಷ ರೂ.ಗಳು
3.	ನಿಗದಿತ ಸಿಎಸ್‌ಆರ್ ಖರ್ಚು (ಮೇಲ್ಕಂಡ ಕ್ರಮಸಂಖ್ಯೆ 2ರ ಶೇ.2 ರಷ್ಟು)	489.79 ಲಕ್ಷ ರೂ.ಗಳು
4.	2024–25ನೇ ವರ್ಷದಲ್ಲಿ ಸಿಎಸ್‌ಆರ್‌ಯೆಡೆಗೆ ಮಾಡಲಾದ ಒಟ್ಟು ಖರ್ಚು	499 ಲಕ್ಷ ರೂ.ಗಳು
	ಆರ್ಥಿಕ ವರ್ಷಕ್ಕೆ ಮಂಜೂರಾದ/ವ್ಯಯಿಸಲಾದ ಒಟ್ಟು ಮೊಬಲಗು	499 ಲಕ್ಷ ರೂ.ಗಳು
	ವ್ಯಯಿಸಲಾಗಿಲ್ಲದ ಮೊಬಲಗು(ಇದ್ದಲ್ಲಿ)	ಇಲ್ಲ
	ಖರ್ಚು ಮಾಡಿದ ರೀತಿಯ ಬಗೆಗಿನ ವಿವರಗಳು	ವಿವರಗಳು ಈ ಕೆಳಗಿನಂತೆ

ಆರ್ಥಿಕ ವರ್ಷ 2024–25ರಲ್ಲಿ ಸಾಮಾಜಿಕ ಜವಾಬ್ದಾರಿಯೆಡೆಗೆ ಮಾಡಲಾದ ವೆಚ್ಚಗಳ ವಿವರಗಳು (ಲಕ್ಷ ರೂ.ಗಳು)

ಕ್ರಮ ಸಂ.	ಯೋಜನೆಗಳನ್ನೊಳಗೊಂಡ ಕ್ಷೇತ್ರಗಳು	ಯೋಜನೆಗಳ ಸಂಖ್ಯೆ	ಒಳಗೊಂಡ ಕಾರ್ಯ ಚಟುವಟಿಕೆಗಳು	ಸ್ಥಳಗಳು	ಮಂಜೂರಾದ ಮತ್ತು ವೆಚ್ಚ ಮಾಡಲಾದ ಮೊಬಲಗು	2024–25ರಲ್ಲಿ ಬಿಡುಗಡೆಯಾದ ಮೊಬಲಗು	ಷರಾ
	ವಲಯ–I ಸರ್ಕಾರಿ ಕ್ಷೇತ್ರ						
1	ಜಿಲ್ಲಾಧಿಕಾರಿ, ರಾಯಚೂರು	1	ರಾಯಚೂರು ಮಹಾನಗರ ಪಾಲಿಕೆ ವಾರ್ಡ್ 33ರಲ್ಲಿನ ಯರ್ಮಾರಸ್ ಸರ್ಕಾರಿ ಶಾಲೆಯಲ್ಲಿ ವಿವಿಧೋದ್ದೇಶದ ಆಟದ ಮೈದಾನ(ಕ್ರೀಡಾಂಗಣ)ದ ನಿರ್ಮಾಣ	ರಾಯಚೂರು ಜಿಲ್ಲೆ	180.00	180.00	
2	ಜಿಲ್ಲಾಧಿಕಾರಿ, ರಾಯಚೂರು	1	ರಾಯಚೂರು ಮಹಾನಗರ ಪಾಲಿಕೆ ವಾರ್ಡ್ 33ರಲ್ಲಿನ ಅಮರಾವತಿ ವೋತಗಲ್ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ತರಗತಿ ಕೊಠಡಿ, ಅಡುಗೆ ಮನೆ ಮತ್ತು ಕಾಂಪೌಂಡು ಗೋಡೆ ನಿರ್ಮಾಣ	ರಾಯಚೂರು ಜಿಲ್ಲೆ	40.00	40.00	
3	ಜಿಲ್ಲಾಧಿಕಾರಿ, ರಾಯಚೂರು	1	ರಾಯಚೂರು ತಾಲ್ಲೂಕಿನ ಸಂಕನೂರಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಒಂದು ಆಧುನಿಕ ಗ್ರಂಥಾಲಯ ಮತ್ತು ಎರಡು ಶಾಲಾ ಕೊಠಡಿಗಳ ನಿರ್ಮಾಣ	ರಾಯಚೂರು ಜಿಲ್ಲೆ	40.00	40.00	

4	ಜಿಲ್ಲಾಧಿಕಾರಿ, ರಾಯಚೂರು	1	ಕುಡಿಯುವ ನೀರಿನ ಸೌಲಭ್ಯ, ಸಿಸಿ ಕ್ಯಾಮರಾ, ಪ್ರೊಜೆಕ್ಟರ್, ಕಂಪ್ಯೂಟರ್ ಮತ್ತು ರಂಗಮಂದಿರ	ರಾಯಚೂರು ಜಿಲ್ಲೆ	20.00	20.00	
5	ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತ, ಬೆಂಗಳೂರು	1	ಬಾಗಲಕೋಟೆ ಜಿಲ್ಲೆ, ಬೀಳಗಿ ತಾಲ್ಲೂಕು, ಯಡಹಳ್ಳಿ ಗ್ರಾಮದಲ್ಲಿ ಪಂಚಾಯಿತಿ ಕಟ್ಟಡ ನಿರ್ಮಾಣ	ಬಾಗಲಕೋಟೆ ಜಿಲ್ಲೆ	50.00	50.00	
6	ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅ ಭಿವೃದ್ಧಿ ನಿಯಮಿತ, ಬೆಂಗಳೂರು	1	ಕಲ್ವನಹಳ್ಳಿ ಗ್ರಾಮದಲ್ಲಿ ಸರ್ಕಾರಿ ಉನ್ನತ ಪ್ರೈಮರಿ ಶಾಲೆಯಲ್ಲಿ ಶಾಲಾ ತರಗತಿ ಕೊಠಡಿಯ ನಿರ್ಮಾಣ	ದಾವಣಗೆರೆ ಜಿಲ್ಲೆ	15.00	15.00	
7	ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತ, ಬೆಂಗಳೂರು	1	ಹಳೇ ಕಡ್ಲೆ ಬಾಳು ಗ್ರಾಮದಲ್ಲಿ ಸರ್ಕಾರಿ ಅಂಗನವಾಡಿ ಕಟ್ಟಡದ ನಿರ್ಮಾಣ	ದಾವಣಗೆರೆ ಜಿಲ್ಲೆ	15.00	15.00	
8	ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತ, ಬೆಂಗಳೂರು	1	ದೊಡ್ಡ ಬಾವೋಜಿ ಗ್ರಾಮದಲ್ಲಿ ಸರ್ಕಾರಿ ಅಂಗನವಾಗಿ ಕಟ್ಟಡ ನಿರ್ಮಾಣ	ದಾವಣಗೆರೆ ಜಿಲ್ಲೆ	15.00	15.00	
9	ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತ, ಬೆಂಗಳೂರು	1	ಹಳೇಬಾತಿ ಗುಡ್ಡದ ಕ್ಯಾಂಪ್‌ನಲ್ಲಿ ಸರ್ಕಾರಿ ಉನ್ನತ ಪ್ರೈಮರಿ ಶಾಲೆಯ ಶಾಲಾ ತರಗತಿ ಕೊಠಡಿಯ ನಿರ್ಮಾಣ	ದಾವಣಗೆರೆ ಜಿಲ್ಲೆ	50.00	50.00	
10	ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತ, ಬೆಂಗಳೂರು	1	ಕಾಡಜ್ಜಿ ಗ್ರಾಮದಲ್ಲಿ ಸರ್ಕಾರಿ ಅಂಗನವಾಡಿ ಕಟ್ಟಡದ ನಿರ್ಮಾಣ	ದಾವಣಗೆರೆ ಜಿಲ್ಲೆ	50.00	50.00	
					405.00	**405.00**	

	ವಲಯ–I ಖಾಸಗಿ ಕ್ಷೇತ್ರ						
1	ಶರಣ ಬಸವೇಶ್ವರ ಜನಕಲ್ಯಾಣ ಸಂಘ, ಹಟ್ಟಿ	1	ಶರಣ ಬಸವೇಶ್ವರ ಜನ ಕಲ್ಯಾಣ ಸಂಘ, ಹುಬ್ಬಳ್ಳಿ ಪ್ರಾರಂಭಿಸಿರುವ ವಿಜ್ಞಾನ ವಿಭಾಗಕ್ಕೆ ಬೇಕಾದ ಕಂಪ್ಯೂಟರ್‌ಗಳು ಪ್ರಿಂಟರ್‌ಗಳು, ಜೆರಾಕ್ಸ್ ಯಂತ್ರಗಳು ಮತ್ತು ಇತರೇಗಳನ್ನು ಖರೀದಿ ಮಾಡಲೋಸುಗ.	ರಾಯಚೂರು ಜಿಲ್ಲೆ	20.00 ಸಂಘ, ಹುಬ್ಬಳ್ಳಿರವರು	20.00	
2	ಅಂಜುಮಾನ್ ಫ್ಲಾಹುಲ್ ಮುಸ್ಲಿಮೂನ್ ಸಂಘ– ನೋಂದಾಯಿತ, ಸಿಂಧನೂರು	1	ಇಕ್ರಾ ಪ್ರಾಥಮಿಕ ಮತ್ತು ಹೈಸ್ಕೂಲ್‌ಗಳ ನಿರ್ಮಾಣ ಮತ್ತು ನವೀಕರಣದೆಡೆಗೆ	ರಾಯಚೂರು ಜಿಲ್ಲೆ	15.00	15.00	
3.	ವಾಲ್ಮೀಕಿ ವಿದ್ಯಾ ಸಂಸ್ಥೆ ದೇವದುರ್ಗ	1	ಹಾಸ್ಟೆಲ್ ಕಟ್ಟಡ ನಿರ್ಮಾಣ	ರಾಯಚೂರು ಜಿಲ್ಲೆ	5.00	5.00	
4.	ಅಮರೇಶ್ವರ ವಿದ್ಯಾವರ್ಧಕ ಸಂಘ, ಲಿಂಗಸಗೂರು	1	ಶ್ರೀ ಅಮರೇಶ್ವರ ವಿದ್ಯಾವರ್ಧಕ ಸಂಘದ ಆಂಗ್ಲ ಮಾಧ್ಯಮದ ಪ್ರಾಥಮಿಕ ಶಾಲೆಗಳ ಸ್ಮಾರ್ಟ್ ತರಗತಿಗಳಿಗೆ ಬೇಕಾದ ಕಂಪ್ಯೂಟರ್‌ಗಳು, ಪ್ರಿಂಟರ್‌ಗಳು ಮತ್ತು ಉಪಕರಣಗಳನ್ನು ಖರೀದಿಸುವುದು.	ಜಿಲ್ಲಾಧಿಕಾರಿ ರಾಯಚೂರು ಜಿಲ್ಲೆ	10.00	10.00	
5.	ವಾಲಿಯ ಬಳ್ಳಾರಿ ಚನ್ನಬಸವೇಶ್ವರ ಶಿಕ್ಷಣ ಸಂಸ್ಥೆ, ಲಿಂಗಸುಗೂರು	1	3 ಶಾಲಾ ಕೊಠಡಿಗಳ ನಿರ್ಮಾಣ ಮತ್ತು ಕಂಪ್ಯೂಟರ್‌ಗಳ ಖರೀದಿಗಾಗಿ	ಜಿಲ್ಲಾಧಿಕಾರಿ ರಾಯಚೂರು ಜಿಲ್ಲೆ	20.00	20.00	
6.	ಶ್ರೀ ಕಾಗಿನೆಲೆ ಮಹಾಸಂಸ್ಥಾನದ ಕನಕ ಗುರುಪೀಠ, ತಿಂತಿಣಿ ಸೇತುವೆ, ದೇವದುರ್ಗ	1	ಕಾಳಿದಾಸ ವಸತಿ ಶಾಲೆಯ ಬಡವಿದ್ಯಾರ್ಥಿಗಳಿಗಾಗಿ ದಾಸೋಹ ಮಂದಿರದ ನಿರ್ಮಾಣ	ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತ ಬೆಂಗಳೂರು	10.00	10.00	
7.	ಸಾರ್ವಜನಿಕ ವ್ಯವಹಾರಗಳ ಕೇಂದ್ರ (ಪಿಎಸಿ), ರಾಯಚೂರು ಜಿಲ್ಲೆ	1	ರಾಯಚೂರು ಜಿಲ್ಲೆಯಲ್ಲಿ ಮಹಿಳಾ ಸಬಲೀಕರಣ ಮತ್ತು ಸಂಸ್ಕೃತಿ ಅಭಿವೃದ್ಧಿ ಯೋಜನೆಗೆ ಆರ್ಥಿಕ ನೆರವು	ಸಾರ್ವಜನಿಕ ವ್ಯವಹಾರಗಳ ಕೇಂದ್ರ, ರಾಯಚೂರು ಜಿಲ್ಲೆ	14.00	14.00	
					94.00	**94.00**	
				ಒಟ್ಟು ಮೊತ್ತ	**499.00**	**499.00**	

ನಿರ್ದೇಶಕರ ವರದಿಗೆ ಅನುಬಂಧ–V

ಕಂಪನಿ (ಲೆಕ್ಕ ಪತ್ರಗಳು) ನಿಯಮ 2014ರ ರೀತ್ಯ ಶಕ್ತಿ ಸಂರಕ್ಷಣೆ, ತಂತ್ರಜ್ಞಾನ ಅಳವಡಿಕೆ ಮತ್ತು ವಿದೇಶಿ ವಿನಿಮಯದ ಗಳಿಕೆ ಮತ್ತು ವೆಚ್ಚದ ವಿವರಗಳು.

ಎ. ಶಕ್ತಿ ಸಂರಕ್ಷಣೆ

1. ಶಕ್ತಿ ಸಂರಕ್ಷಣೆಗಾಗಿ ಕೈಗೊಂಡ ಕ್ರಮಗಳು

i. ಶಕ್ತಿಸಕ್ರಿಯ ಮೋಟರುಗಳನ್ನು ಅಳವಡಿಸುವ ಪ್ರಕ್ರಿಯೆಗಳು ಮುಂದುವರೆದವು.

ii. ಸಾಂಪ್ರದಾಯಿಕ ದೀಪಗಳ ಬದಲಿಗೆ ಎಲ್‌ಇಡಿ ದೀಪಗಳನ್ನು ಹಂತಹಂತವಾಗಿ ಉದ್ಯಮದಲ್ಲಿ, ಕಛೇರಿಯಲ್ಲಿ ಮತ್ತು ಕಾಲೋನಿಯಲ್ಲಿ ಅಳವಡಿಸುವುದು.

2. ಬದಲಿ ಶಕ್ತಿಯ ಮೂಲವನ್ನು ಬಳಸಿಕೊಳ್ಳುವುದು

i. ಚಿತ್ರದುರ್ಗ ಘಟಕದಲ್ಲಿ ಸರಾಸರಿ ವಾರ್ಷಿಕವಾಗಿ 2,04,18,755 ಯೂನಿಟ್ಟುಗಳ ವಿದ್ಯುತ್ತನ್ನು ಉತ್ಪಾದಿಸುತ್ತಿದ್ದು, ಅದರ ಸ್ಥಾಪಿತ ಕ್ಷಮತೆ 11.4 ಮೆಗಾವ್ಯಟ್‌ಗಳಾಗಿದೆ.

ii. ಹಟ್ಟಿಯಲ್ಲಿ ಸೌರಶಕ್ತಿಯ ಆಂತರಿಕ ಬಳಕೆಗಾಗಿ ಸೌರಶಕ್ತಿಯ ಸ್ಥಾವರವನ್ನು ಸ್ಥಾಪಿಸುವ ಪ್ರಕ್ರಿಯೆಗಳು ಪ್ರಗತಿಯಲ್ಲಿವೆ.

3. ಶಕ್ತಿ ಸಂರಕ್ಷಣೆಯೆಡೆಗೆ ಬಂಡವಾಳ ಖರ್ಚುಗಳು

ಕ್ರಮ ಸಂಖ್ಯೆ	ವಿವರಗಳು	ಮೊಬಲಗು
1	ಸಮೂಹ ಯೋಜನೆಯಡಿ ಹಟ್ಟಿಯಲ್ಲಿ, ಸೌರಶಕ್ತಿ ಉತ್ಪಾದನಾ ಘಟಕವನ್ನು ಕಾರ್ಯಗತಗೊಳಿಸಲು ಪ್ರಸ್ತಾವನೆ	114.93 ಕೋಟಿ ರೂ.ಗಳ ಅಂದಾಜು ವೆಚ್ಚ
2	ಹಟ್ಟಿಯಲ್ಲಿನ ಕೇಂದ್ರೀಯ ವಿದ್ಯಾಲಯದ ಸೂರುಗಳ ಮೇಲೆ ಸೌರಶಕ್ತಿಯ ಪ್ಯಾನಲ್‌ಗಳ ಅಳವಡಿಕೆ	3.75 ಲಕ್ಷ ರೂ.ಗಳ ಅಂದಾಜು ವೆಚ್ಚ

ಬಿ. ತಂತ್ರಜ್ಞಾನದ ಅಳವಡಿಕೆ

1. ಹಟ್ಟಿಯಲ್ಲಿ ಆಧುನಿಕ ವೈಂಡರ್‌ವುಳ್ಳ ಹೊಸ ವರ್ಟುಲ ಷಾಫ್ಟ್‌ನ್ನು ನಿಯತಗೊಳಿಸಲಾಗಿದೆ.

2. ಹಟ್ಟಿಯಲ್ಲಿ ಪ್ರತಿ ಗಂಟೆಗೆ 50 ಟನ್ ಅದಿರು ಅರೆಯುವ ಸಾಮರ್ಥ್ಯವುಳ್ಳ 2 ಬಾಲ್ ಮಿಲ್‌ಗಳನ್ನು ನಿಯತಗೊಳಿಸಲಾಗಿದೆ.

3. ಹಟ್ಟಿಯಲ್ಲಿನ ಭೂಕೆಳಮೈನ 2700 ನೇ ಹಂತದಲ್ಲಿ, ಪ್ರತಿ ಗಂಟೆಗೆ 400 ಟನ್ ಅದಿರು ಅರೆಯುವ ಮತ್ತು ಸಾಗಣೆ ಮಾಡುವ ಯಂತ್ರವನ್ನು ಕಂಪನಿಯು ನಿಯತಗೊಳಿಸಿದೆ.

ಸಿ. ವಿದೇಶಿ ವಿನಿಮಯದ ಗಳಿಕೆ ಮತ್ತು ವೆಚ್ಚ

ಅ. ಗಳಿಕೆ – ಇಲ್ಲ

ಆ ವೆಚ್ಚ – ಇಲ್ಲ

ಟಿಪ್ಪಣಿ ಸಂಖ್ಯೆ – 1

I ಲೆಕ್ಕಪತ್ರಗಳನ್ನಿಡುವ ಗುರುತರ ನೀತಿಗಳ ಮಾಹಿತಿಗಳು

1. ಲೆಕ್ಕಾಚಾರ ಪದ್ಧತಿ :

ಎ. ಪ್ರಸ್ತುತಪಡಿಸುವಿಕೆಯ ಆಧಾರ :

31ನೇ ಮಾರ್ಚ್ 2025ನೇ ವರ್ಷದ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳನ್ನು ತುಲನಾತ್ಮಕವಾಗಿ 31ನೇ ಮಾರ್ಚ್ 2024ರ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳ ಜತೆಗೆ ಪ್ರಸ್ತುತಪಡಿಸಲಾಗಿದೆ. ಈ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳನ್ನು ಭಾರತೀಯ ಲೆಕ್ಕಶಾಸ್ತ್ರದ ಮಾನದಂಡಗಳು (ಇಂಡ್–ಎಎಸ್) ಮತ್ತು ಕಂಪನಿ ಕಾಯಿದೆ 2013ರಡಿಯಲ್ಲಿ ನಿಗದಿಪಡಿಸಿರುವಂತೆ ಚಾರಿತ್ರಿಕ ವೆಚ್ಚದ ಆಧಾರದಲ್ಲಿ ಕೂಡಿಕೊಂಡು ಬರುವ ಖರ್ಚುವೆಚ್ಚಗಳ ನೆಲೆಯಲ್ಲಿ ತಯಾರಿಸಲಾಗಿದ್ದು. ಅವು ಭಾರತೀಯ ಛಾರ್ಟರ್ಡ್ ಅಕೌಂಟೆಂಟ್ಸ್ ಸಂಸ್ಥೆಯವರ ಘೋಷಣೆಗಳು/ಮಾರ್ಗದರ್ಶಿ ಸೂತ್ರಗಳ ಪ್ರಕಾರ ಇವೆ. ಇಂಡ್–ಎಎಸ್‌ಗಳನ್ನು ಕಾಯಿದೆಯ ಸೆಕ್ಷನ್ 133ರೊಂದಿಗೆ ಓದಲಾದ ಕಂಪನಿಗಳ (ಲೆಕ್ಕಶಾಸ್ತ್ರ ಮಾನದಂಡಗಳು) ನಿಯಮ 2015ರಡಿಯಲ್ಲಿ ಮತ್ತು ಕಂಪನಿಗಳ (ಭಾರತೀಯ ಲೆಕ್ಕಶಾಸ್ತ್ರಗಳ ಮಾನದಂಡಗಳು) ತಿದ್ದುಪಡಿ ನಿಯಮ 2016ರರಡಿಯಲ್ಲಿ ನಿಗದಿಪಡಿಸಲಾಗಿದೆ. ಹೊಸದಾಗಿ ಹೊರಡಿಸಲಾದ ಮತ್ತು ಅಳವಡಿಸಿಕೊಂಡ ಲೆಕ್ಕಶಾಸ್ತ್ರಗಳ ಮಾನದಂಡಗಳನ್ನು ಅಥವಾ ಪ್ರಸ್ತುತವಿರುವ ಅಳವಡಿಸಿಕೊಂಡ ಲೆಕ್ಕಶಾಸ್ತ್ರಗಳ ಮಾನದಂಡಗಳಲ್ಲಿ ಅವಶ್ಯಕವಿರುವ ಬದಲಾವಣೆಗಳನ್ನು ಹೊರತು ಪಡಿಸಿದಂತೆ, ಕಂಪನಿಯು ಲೆಕ್ಕಾಚಾರ ನೀತಿಗಳನ್ನು ಸುಸಂಗತವಾಗಿ ಅಳವಡಿಸಿಕೊಂಡು ಬರುತ್ತಿದೆ.

ಕಂಪನಿಯು ಎಲ್ಲಾ **ಇಂಡ್–ಎಎಸ್** ಲೆಕ್ಕಶಾಸ್ತ್ರಗಳ ಮಾನದಂಡಗಳನ್ನು ಅಳವಡಿಸಿಕೊಂಡಿದ್ದು ಅವು ಇಂಡ್–ಎಎಸ್ 101ರಡಿಯಲ್ಲಿ ಪ್ರಥಮಬಾರಿಗೆ **ಇಂಡ್ –ಎಎಸ್**ಗಳ ಅಳವಡಿಕೆಯ ಬಗೆಗೆ ನಿಗದಿಪಡಿಸಿರುವಂತೆ ಇದೆ. ಮಧ್ಯಕಾಲೀನ ಬದಲಾವಣೆಗಳನ್ನು ಕಂಪನಿಗಳ (ಲೆಕ್ಕಪತ್ರಗಳು) ನಿಯಮಗಳು 2014ರೊಂದಿಗೆ (ಐಗ್ಯಾಪ್) ಓದಲಾದ ಸೆಕ್ಷನ್ 133ರಲ್ಲಿನ ಭಾರತೀಯ ಲೆಕ್ಕ ಶಾಸ್ತ್ರಗಳ ನೀತಿ(ಹಿಂದಿನ ಗ್ಯಾಪ್)ಗಳಡಿಯಲ್ಲಿ ಮಾಡಲಾಗಿದೆ.

ನಿಗದಿತ ದಿನಾಂಕದಂದು ನಿಖರವಾಗಿ ತಿಳಿದುಕೊಳ್ಳುವ ಮತ್ತು ಆರ್ಥಿಕ ವರ್ಷದಲ್ಲಿ ಕೂಡಿಕೊಂಡು ಬರುವ ಖರ್ಚು ವೆಚ್ಚಗಳಿಗಾಗಿ ಲೆಕ್ಕಪತ್ರಗಳಲ್ಲಿ ಏರ್ಪಾಡನ್ನು ಮಾಡಲಾಗಿದೆ.

ಬಿ. ಅಂದಾಜುಗಳ ಬಳಕೆ :

ಇಂಡ್–ಎಎಸ್ ಆಧಾರದ ಮೇಲೆ ತಯಾರಿಸಲಾಗುವ ಆರ್ಥಿಕ ಸ್ಥಿತಿ ವಿವರಣಾ ಪಟ್ಟಿಗಳೆಡೆಗೆ ಕಂಪನಿಯ ಆಡಳಿತ ವರ್ಗವು ಲೆಕ್ಕಾಚಾರ ನೀತಿಗಳ ಅಳವಡಿಕೆಯಲ್ಲಿ ಲೆಕ್ಕಾಚಾರ ನೀತಿಗಳ ಮೇಲೆ ಪರಿಣಾಮ ಬೀರುವ ಅಂದಾಜುಗಳ ಬಳಕೆ, ವಿವೇಚನೆಗಳು ಮತ್ತು ಊಹೆಗಳನ್ನು ಬಳಸಬೇಕಾದ ಅವಶ್ಯಕತೆಯಿರುತ್ತದೆ. ವಾಸ್ತವ ಫಲಿತಾಂಶಗಳು ಮತ್ತು ಅಂದಾಜಿನ ನಡುವಿನ ವ್ಯತ್ಯಾಸಗಳನ್ನು, ಫಲಿತಾಂಶಗಳು ತಿಳಿದ ವರ್ಷದಲ್ಲಿ ಅಥವಾ ಕಾರ್ಯರೂಪಕ್ಕೆ ಬಂದ ವರ್ಷದಲ್ಲಿ ಅವು ಗುರುತರವಾಗಿದ್ದಲ್ಲಿ ಆರ್ಥಿಕಸ್ಥಿತಿ ವಿವರಣಾ ಪಟ್ಟಿಗಳಲ್ಲಿ, ಟಿಪ್ಪಣಿಗಳ ರೂಪದಲ್ಲಿ ಪ್ರಕಟಗೊಳಿಸಲಾಗುವುದು.

2. ವರಮಾನದ ಪರಿಗಣನೆ

ಯಾವಾಗ ಪಾವತಿ ಮಾಡಲಾಗುವುದೆಂಬುದರ ಬಗೆಗೆ ಗಮನವಿರಿಸದೆ, ಸಾಮಾನ್ಯವಾಗಿ, ಆದಾಯವನ್ನು ಆರ್ಥಿಕ ಸೌಲಭ್ಯಗಳು ಕಂಪನಿಗೆ ಲಭಿಸುವುದು ಸಂಭವನೀಯ ಮತ್ತು ವಿಶ್ವಾಸನೀಯವಾಗಿರುವಷ್ಟರ ಮಟ್ಟಿಗೆ ಅಳೆಯಬಹುದಾದರೆ, ಅವನ್ನು ವರಮಾನವೆಂಬುದಾಗಿ ಪರಿಗಣಿಸಲಾಗುವುದು. ಸರಕುಗಳ ಮಾರಾಟ ಆದಾಯವನ್ನು ಗಣನೀಯವಾದ ಅಪಾಯ ಮತ್ತು ಪ್ರತಿಫಲಗಳು

ಗ್ರಾಹಕರಿಗೆ ವರ್ಗಾವಣೆಯಾಗುವಾಗ ಸೋಡಿ ಮತ್ತು ಹಿಂತಿರುಗಿಸುವಿಕೆಗಳೇನಾದರೂ ಇದ್ದಲ್ಲಿ, ಅವನ್ನು ಕಳೆದು ಲೆಕ್ಕಕ್ಕೆ ತೆಗೆದುಕೊಳ್ಳಲಾಗುವುದು.

